

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 33 ಆಗಸ್ಟ್ 11-17, 1997 ಬೆಲೆ ರೂ. 2.00

ಐವತ್ತು ವರ್ಷಗಳಾದವು

ಕನಸುಗಳು ನನಸಾಗಲಿಲ್ಲ ......

ಎಚ್.ಕೆ.ಉಪಾಧ್ಯಾಯ

50 ವರ್ಷಗಳ ಹಿಂದೆ. 1947 ಆಗಸ್ಟ್ 14 ರಂದು ನಡುರಾತ್ರಿ ದಿಲ್ಲಿಯ ಕೆಂಪು ಕೋಟೆಯಲ್ಲಿ ಹಾರಾಡುತ್ತಿದ್ದ ಗುಲಾಮಗಿರಿಯ ಸಂಕೇತವಾದ ಬ್ರಿಟಿಷರ ಧ್ವಜವನ್ನು ಕೆಳಗಿಳಿಸಿ, ಸ್ವತಂತ್ರ ಭಾರತದ ಸಂಕೇತವಾದ ತಿರಂಗಿ ಧ್ವಜವನ್ನು ಪಂಡಿತ ಜವಹರಲಾಲ ನೆಹರೂ ರವರು ಹಾರಿಸಿದಾಗ, ಲಾರ್ಡ್ ಮೌಂಟ್ ಬ್ಯಾಟನ್ ಕೂತಿದ್ದ ಕುರ್ಚಿಯನ್ನು ರಾಜ ಗೋಪಾಲಚಾರಿಯವರು ಅಲಂಕರಿಸಿ ದಾಗ ನಮಗೆಲ್ಲ ಅದೆಂಥ ಉತ್ಸಾಹ, ಅದೆಂಥ ಸಡಗರ, ಅದೆಂಥ ಭಾವೋದ್ವೇಗ. ಅದೆಂಥ ಹೊಸಕನಸುಗಳು, ನನಸುಗಳು, ಅಪೇಕ್ಷೆಗಳು ರಾತ್ರಿ ಹನ್ನೆರಡು ಗಂಟೆಗೆ (ಬಿಜಾಪುರ) ರೇಡಿಯೋ ಮೈದಾನಿನಲ್ಲಿ ರಾಷ್ಟ್ರೀಯ ಧ್ವಜ ಏರಿಸಿ ನಾವೆಲ್ಲ ಕುಣಿದಾಡಿದೆವು. ಬೀಡಿ ಕೆಲಸಗಾರರು, ವಿದ್ಯಾರ್ಥಿಗಳು, ಟಾಂಗಾ ವಾಲರು, ನಗರ ಸಭೆ ಕೆಲಸಗಾರರೆಲ್ಲ ಉತ್ಸಾಹದಿಂದ ಪುಟಿಯುತ್ತಿದ್ದರು. ಸತ್ಯಾಗ್ರಹ ದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದ ಬಾಲಸಿಂಗ ಮಾಸ್ತರ, ಅಂಕ್ಲೀಕರ ವಕೀಲರು, ಮಹಾಲ್‌ದಾರ್ ವಕೀಲರೆಲ್ಲ ಸಾರ್ವಜನಿಕರ ನಡುವೆ ಸೇರಿಕೊಂಡು ಆನಂದ ವ್ಯಕ್ತಪಡಿಸಿ ದರು. "ನಮ್ಮ ಕಷ್ಟ ಕಾರ್ಪಣ್ಯ, ಜೈಲುವಾಸ ಸಾರ್ಥಕವಾಯಿತು" ಎಂಬ ಉದ್ಗಾರ ಅವರಿಂದೆಲ್ಲ ಹೊರಬಂತು.

ನಾನು ಹೇಳಿದೆ -"ಸ್ವಾತಂತ್ರ್ಯ ಬಂತು ಆದರ ಜೊತೆಯಲ್ಲಿಯೇ ನಮ್ಮ ಹೋರಾಟಕ್ಕೆ ಸ್ಫೂರ್ತಿಯೂ ಸಿಕ್ಕಿತು" ಎಂದು. ಅದಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗದ್ದರಿಂದ ನನ್ನ ಉದ್ಗಾರದ ಅರ್ಥವೇನೆಂದು ಅಲ್ಲಿ ನೆರೆದವರಿಗೆ ಹೊಳೆಯಲಿಲ್ಲವೆಂದು ತಿಳಿದುಕೊಂಡೆ. 1947 ರ ಆಗಸ್ಟ್ 15 ರ ನಂತರ ಅಂದರೆ ನಾವು ಬ್ರಿಟಿಷರಿಂದ ಅಧಿಕಾರ ಹಸ್ತಾಂತರಿಸಿಕೊಂಡ ನಂತರ, ಸ್ವತಂತ್ರ ಭಾರತವಾಗಿ ಘೋಷಿಸಿ ಕೊಂಡನಂತರ ನಡೆದ ಹಲವಾರು ಹೋರಾಟ ಗಳು ನಾನು ವ್ಯಕ್ತಮಾಡಿದ ಅಭಿಪ್ರಾಯವನ್ನು ಸಿದ್ಧಗೊಳಿಸಿವೆ. ಬೀಡಿ, ಮುನಿಸಿಪಲ್, ಪ್ರೆಸ್, ಟಾಂಗಾ ಕೆಲಸಗಾರರ ಹೋರಾಟಗಳು, ರೈತರ ಹೋರಾಟಗಳು, ವಿದ್ಯಾರ್ಥಿಗಳ ಚಳುವಳಿಗಳೆಲ್ಲಾ ಅವಕ್ಕೆ ಸಾಕ್ಷಿಯಾಗಿವೆ.

1933 ರಲ್ಲಿ ಚಳುವಳಿ ನಡೆಯುತ್ತಿದ್ದಾಗ ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಓದುತ್ತಿದ್ದ ನಾನು ಕ್ಲಾಸ್ ಬಿಟ್ಟು ಹೊರಗೆ ಬಂದು ಚಳುವಳಿಯನ್ನು ಸೇರಿದ್ದೆ. ಮಂಗಳೂರಿನಿಂದ ಮುಂಬಯಿಗೆ ನೌಕರಿಗಾಗಿ ಹೋದಾಗ 1938 ರಿಂದ 1940 ರವರೆಗೆ ಕಂಬಾಪುಟದ ನೇತೃತ್ವದ ಕಾರ್ಮಿಕರ ಹಲವಾರು ಹೋರಾಟಗಳಲ್ಲಿ ಪಾಲ್ಗೊಂಡು ನೌಕರಿಗಾಗಿ ಎರಡು ವರ್ಷ ನಿರಂತರ ಆಫೀಸುಗಳಿಗೆ ಅಲೆದಾಟ, ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಭಾಗವಹಿಸಿ ನಿರುದ್ಯೋಗಿ ಯುವಕರ, ದುಡಿಯುವ ಜನರ ಸಂಕಷ್ಟ ಸಮಸ್ಯೆಗಳನ್ನು ಅರ್ಥೈಸಿಕೊಂಡೆ. ಮುಂಬೈಯಲ್ಲಿನ ಪ್ಲಾನಿಂಗ್ ಕಮಿಶನ್ನಿನಲ್ಲಿ ಕೆಲಸದಲ್ಲಿದ್ದಾಗ ಬಂಧನಕ್ಕೊಳಗಾದೆ. ಅನಂತರ ಕಮ್ಯುನಿಸ್ಟ್ ಪಾರ್ಟಿಯ ಪೂರ್ಣಕಾಲದ ಕಾರ್ಯಕರ್ತನಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಾಗ, ಜೈಲು ವಾಸದಲ್ಲಿದ್ದಾಗ ಹಲವಾರು ಕನಸುಗಳನ್ನು ಕಾಣುತ್ತಿದ್ದೆ. ನಮಗೆ ಸಿಗುತ್ತಿದ್ದ ಬ್ರಿಟಿಶ್ ಆಡಳಿತೆಯ ಶಿಕ್ಷಣ ನಮ್ಮ ದೇಶದ ಬೆಳವಣಿಗೆಗಾಗಲಿ, ಉದ್ಯೋಗದ ಕ್ಯಾಶಕ್ಕಾಗಲೀ ಅನುಕೂಲಕರ ವಾಗಿರಲಿಲ್ಲ. ಅದು ಬ್ರಿಟಿಷ ಆಡಳಿತೆಯ ಯಂತ್ರಗಳಿಗೆ ನಟ್ಟು-ಬೋಲ್ಟ್‌ಗಳನ್ನು ತಯಾರಿಸುವ ಶಿಕ್ಷಣವಾಗಿತ್ತು. ನೌಕರಿಗಾಗಿ ಮುಂಬಯಿ, ಮದ್ರಾಸ್‌ಗಳಿಗೆ ಓಡಿ ಹೋಗಬೇಕಾಗುತ್ತಿತ್ತು. ಯುವಜನರು ನಮಗೆಲ್ಲ ಒಳ್ಳೆಯ ಶಿಕ್ಷಣ ಉದ್ಯೋಗಾವಕಾಶ ಸಿಗುತ್ತದೆ, ಬ್ರಿಟಿಷರು ದೇಶದ ಸಂಪತ್ತನ್ನು ದೋಚಿಕೊಂಡು ಹೋಗು ತ್ತಿರುವುದನ್ನು ತಪ್ಪಿಸಿ ಕೈಗಾರಿಕೋದ್ಯಮವನ್ನು ವಿಸ್ತತಗೊಳಿಸ ಬೇಕೆಂಬ ಕನಸು ಕಾಣುತ್ತಿದ್ದೆವು. ಮುಂಬಯಿ, ಬಿಜಾಪುರ, ಧಾರವಾಡ, ಬೆಳಗಾವಿ ಗಳಲ್ಲಿದ್ದಾಗ ದೇಶ ಸ್ವತಂತ್ರವಾದರೆ, ಕೂಲಿ ಹೆಚ್ಚಾಗುತ್ತದೆ, ನೌಕರಿ ಭದ್ರವಾಗುತ್ತದೆ, ಕೆಲಸಗಾರರು ಹೆಚ್ಚಿನ ಸೌಲಭ್ಯ ಪಡೆಯು ವಂತಾಗುತ್ತದೆ, ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಗುತ್ತದೆಂಬ ಕನಸು ಕಾಣುತ್ತಿದ್ದೆ. 1947 ಆಗಸ್ಟ್ 14 ರ ಮಧ್ಯರಾತ್ರಿ ಸ್ವಾತಂತ್ರ್ಯ ಘೋಷಣೆಯಾದಾಗ ನಾನು ಹೇಳಿದ್ದೆ - 'ಫ್ರೀಬೋರ್ಡ್-ಹಾಸ್ಟೆಲ್ ಗಳಲ್ಲಿರುವ ವಿದ್ಯಾರ್ಥಿಗಳಿಗೆ ನಾಳೆಯಿಂದ ಒಳ್ಳೆ ಊಟ ಹೊಟ್ಟೆತುಂಬ ಸಿಗುತ್ತದೆ. ಅಭ್ಯಾಸ ಮಾಡಲಿಕ್ಕೆ ಒಳ್ಳೆ ವಾತಾವರಣ ಉಂಟಾಗುತ್ತದೆ, ಬೀಡಿ ಕೆಲಸಗಾರರಿಗೆ ಹೆಚ್ಚು ಮಜೂರಿ ಸಿಗುತ್ತದೆ, ತಂಬಾಕಿನ ವಾಸನೆಯಿಂದ ಜಡ್ಡಾದವರಿಗೆಲ್ಲ ಪುಕ್ಕಟೆ ಔಷದೋಪಚಾರ ಸಿಗುತ್ತದೆ. ಇರಲು ಒಳ್ಳೆ ಮನೆ ಸಿಗುತ್ತದೆ. ಜಿಲ್ಲೆಯಲ್ಲಿ ಹೊಸ ಕಾರ್ಖಾನೆಗಳು ಹುಟ್ಟಿಕೊಳ್ಳುತ್ತವೆ. ನೌಕರಿಗಾಗಿ ಊರೂರು ತಿರುಗಾಡುವ ಅವಶ್ಯವಿಲ್ಲ. ದೇಸಾಯಿಯಂಥ ಭೂಮಾಲಕರ ಭೂಮಿ ರೈತರಿಗೆ ಸಿಗುತ್ತದೆ. ಉಳುವವನೇ ಭೂಮಿಯ ಒಡೆಯನಾಗುತ್ತಾನೆ"

ಆದರೆ ಕಳೆದ ಐವತ್ತು ವರ್ಷಗಳಲ್ಲಿ ನನ್ನ ಕನಸುಗಳು ನನಸಾಗಿಲ್ಲ, ಬಿಳಿಯರ ಬದಲಾಗಿ ಕರಿಯರು ಬಂದರು. ಆದರೆ ಆಡಳಿತೆಯ ಮೌಲ್ಯ, ಪ್ರಾಮಾಣಿಕತೆಯನ್ನು ನಾಶಮಾಡಿ ದರು ಎನ್ನುತ್ತಾರೆ ಕೆಲವರು. 1947 ರ ಆಗಸ್ಟ್ 15 ರಂದು ಶಾಲೆ ಕಲಿಯುತ್ತಿದ್ದ ಶಾರದ ಹೇಳುತ್ತಾಳೆ - "ನನ್ನ ಮೊಮ್ಮಗನನ್ನು ಒಂದನೇ ಕ್ಲಾಸಿಗೆ ಸೇರಿಸಲು ರೂ. 3000 ಡೊನೇಶನ್ ಕೊಟ್ಟಿದ್ದೇನೆ. ನಾನು ಕಲಿತ ಶಾಲೆ ಇಂದು ಹಂದಿ ವಾಸಕ್ಕೂ ಯೋಗ್ಯವಲ್ಲ ವಾದ್ದರಿಂದ ನನ್ನ ಮೊಮ್ಮಗನನ್ನು ಇಂಗ್ಲೀಷ್ ಶಾಲೆಗೆ ಹಾಕಿದ್ದೇನೆ. ನನ್ನ ಅಣ್ಣಂದಿರ ಪುಸ್ತಕ ಓದಿ ನಾನು ಮೆಟ್ರಿಕ್ ಪರೀಕ್ಷೆ ಮುಗಿಸಿದೆ. ಈಗ 600 ರೂ. ಪುಸ್ತಕ ಪ್ರತಿವರ್ಷ ಕೊಂಡುಕೊಳ್ಳಬೇಕು". ಫ್ರೀಬೋರ್ಡಿಂಗ್‌ನಲ್ಲಿ ಊಟಮಾಡಿ ಈಗ ಸರಕಾರಿ ನೌಕರಿ ಯಲ್ಲಿರುವ ಹೀರೆಮಠ ಹೇಳುತ್ತಾರೆ "ಅಂದು ನಾವು ಫ್ರೀಬೋರ್ಡಿನಲ್ಲಿದ್ದಾಗ ನನಗೆ ಬಿಸಿ ರೊಟ್ಟಿಯಾದರೂ ಸಿಗುತ್ತಿತ್ತು. ಈಗ ನಮ್ಮೂರ ಮಲ್ಲಪ್ಪನ ಮಗ ಹೇಳುತ್ತಾನೆ, ಮೂರು ದಿವಸದ ಒಣ ರೊಟ್ಟಿ ನನ್ನ ಪಾಲಿಗಂತ", ಬೀಡಿ ಕೆಲಸಗಾರ್ತಿ ಜೈನಾಬ್ಬಿ ಹೇಳುತ್ತಾಳೆ-"ಆಗ ನೀವು ಹೋರಾಡಿ ನಮಗೆ ಸಾವಿರ ಬೀಡಿಗೆ 1 ರೂಪಾಯಿ ಕೊಡಿಸಿದ್ದೀರಿ, ಅದರಿಂದ ನಾವು ಹೊಟ್ಟೆ ತುಂಬ ಊಟ ಮಾಡುತ್ತಿದ್ದೆವು. ಈಗ ನಮಗೆ 29 ರೂಪಾಯಿ ಸಿಗುತ್ತದೆ. ಒಪ್ಪೊತ್ತು ಉಂಡರೆ ಒಪ್ಪೊತ್ತು ಉಪವಾಸ. ಎಲ್ಲ ತುಟ್ಟಿ. ಮಕ್ಕಳು ಮೊಮ್ಮಕ್ಕಳನ್ನು ಬೇರೆ ಸಾಕಬೇಕು.

ಹೀಗೆ ಬೇರೆ ಬೇರೆ ವಿಭಾಗದ ಜನ ಕೂಗಾ ದುಸ್ವಾರೆ ರೋಷದಿಂದ. ಮೂರು ವರ್ಷದ ಮಗುವಿಗೆ ಡೊನೇಶನ್ ಕೊಟ್ಟು ಕಲಿಸಲು ಈ ಸ್ವಾತಂತ್ರ್ಯವೇ?, ಹೊಲಸು ನಾರುವ ಶಾಲೆಗೆ

ಪುಟ 7 ನೋಡಿ

ಪಶ್ಚಿಮ ಬಂಗಾಳದಲ್ಲಿ ಹಗರಣ ಸೃಷ್ಟಿಸುವ ಕಾಂಗ್ರೆಸ್ ಪ್ರಯತ್ನಕ್ಕೆ ಗಂಭೀರ ಧಕ್ಕೆ

ಹಗರಣಗಳಲ್ಲಿ ಮುಳುಗಿ ಹೋಗಿರುವ ಕಾಂಗ್ರೆಸ್ಸಿನ ಪಶ್ಚಿಮ ಬಂಗಾಳದ ಘಟಕ ಎಡರಂಗ ಸರಕಾರದಲ್ಲೂ ಒಂದು ಹಗರಣವಿದೆ ಎಂದು ಸಾಧಿಸುವ ಪ್ರಯತ್ನಕ್ಕೆ ಜುಲೈ 31 ರಂದು ಕಲ್ಕತ್ತ ಹೈಕೋರ್ಟಿನ ವಿಭಾಗೀಯ ಪೀಠದ ತೀರ್ಪಿನಿಂದ ಬಲವಾದ ಹೊಡೆತ ಬಿದ್ದಿದೆ.

ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಿದ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಈ ಬಗ್ಗೆ ಸಿಬಿಐ ತನಿಖೆ ಆಗಬೇಕೆಂದು ಒತ್ತಾಯಿಸ ುತ್ತಿದ್ದರೂ ಆಕೆಯ ವಕೀಲ ಅಜಿತ್ ಪಾಂಜಾ ನ್ಯಾಯಾಧೀಶರೆದುರು ಈ ವಾದವನ್ನೇ ಮುಂದಿಡಲಿಲ್ಲ. ಅವರು ಸಿ.ಎ.ಜಿ.(ಮಹಾ ಲೆಕ್ಕಪರೀಕ್ಷಣಾ ಧಿಕಾರಿ) ಈ ಆರೋಪದ ಬಗ್ಗೆ ಗುಪ್ತ ತನಿಖೆ ನಡೆಸಿ ಹೈಕೋರ್ಟ್‌ಗೆ ತಿಳಿಸುವಂತೆ ಆದೇಶಿಸಬೇಕೆಂದು ತಮ್ಮ ವಾದದಲ್ಲಿ ಕೇಳಿದ್ದರು. ಹೈಕೋರ್ಟ್ ಆ ಮನವಿಯನ್ನು ತಿರಸ್ಕರಿಸಿ ಸಿ.ಎ.ಜಿ. ಸಂವಿಧಾನರೀತ್ಯ ತನ್ನ ಕೆಲಸ ಮುಂದುವರೆಸಲು ಅವಕಾಶ ನೀಡಬೇಕೆಂಬ ಪಶಿಮ ಬಂಗಾಳ ರಾಜ್ಯ ಸರಕಾರದ ಮನವಿಯನ್ನು ಪುರಸ್ಕರಿಸಿದೆ. ಕಲ್ಕತ್ತಾ ಹೈಕೋರ್ಟ್ ವಿಭಾಗೀಯ ಪೀಠದ ನ್ಯಾಯಮೂರ್ತಿ ತರುಣ್ ಕುಮಾರ್ ಚಟರ್ಜಿ ಹಾಗೂ ನ್ಯಾಯಮೂರ್ತಿ ಸಿದ್ದೇಶ್ವರ ನಾರಾಯಣ್ ತಮ್ಮ ತೀರ್ಪನ್ನು ಓದಿ ಹೇಳುವಾಗ ಮಮತಾ ಬ್ಯಾನರ್ಜಿಯವರಾಗಲೀ, ಅಜಿತ್ ಪಾಂಜಾರವರಾಗಲೀ ಹಾಜರಿರಲಿಲ್ಲ. ಐ.ಎನ್.ಎಸ್. ಸುದ್ದಿ ಸಂಸ್ಥೆ ಮಮತಾ ಬ್ಯಾನರ್ಜಿಯವರನ್ನು ಈ ತೀರ್ಪಿನ ಬಗ್ಗೆ ಕೇಳಿದಾಗ ಈ ತೀರ್ಪಿನ ವಿರುದ್ಧ ವಿಭಾಗೀಯ ಪೀಠಕ್ಕೆ ಮನವಿ ಸಲ್ಲಿಸುವುದಾಗಿ ಹೇಳಿದರು.

ಅತ್ತ ಪಶ್ಚಿಮ ಬಂಗಾಳದ ಕಾರ್ಯನಿರ್ವಾಹಕ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರವರು ಈ ನಿರೀಕ್ಷಿತ ತೀರ್ಪಿನ ಬಗ್ಗೆ ಸಂತೋಷ ವ್ಯಕ್ತಪಡಿಸಿ ದರು. ಹಣಕಾಸು ಮಂತ್ರಿ ಅಶೀಮ್ ದಾಸ್ ಗುಪ್ತಾ ಕೂಡಾ ಈ ತೀರ್ಪಿನ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

"ಪತ್ರಿಕಾ ಮಾಧ್ಯಮದ ಒಂದು ವಿಭಾಗ ಹಾಗೂ *ಕಾಂಗ್ರೆಸ್ ಪಕ್ಷ ಪಶ್ಚಿಮ ಬಂಗಾಳದಲ್ಲೂ ಒಂದು ಹಗರಣವನ್ನು ಉತ್ಪಾದಿಸದ ಎಡರಂಗ ಸರಕಾರದ ಹೆಸರಿಗೆ ಮಸಿ ಬಳಿಯಲು ಆರಂಭಿಸಿದ ದುರುದ್ದೇಶಪೂರಿತ ಪ್ರಚಾರಕ್ಕೆ ಒಂದು ಗಂಭೀರ ಹಿನ್ನಡೆಯಾಗಿದೆ"* ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಲೋಕಲ್ ಫೌಂಡ್ ಅಕೌಂಟ್ (ಸ್ಥಳೀಯ ನಿಧಿ ಖಾತೆ) ಹಾಗೂ ಪರ್ಸನಲ್ ಲೆಡ್ಜರ್ ಅಕೌಂಟ್(ವೈಯಕ್ತಿಕ ಲೆಡ್ಜರ್ ಖಾತೆ) ನಡುವೆ ಉದ್ದೇಶ ಪೂರ್ವಕವಾಗಿ ಗೊಂದಲ ಸೃಷ್ಟಿಸುವ ಮಾಹಿತಿಗಳು ನಿಜವಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ ಎಂದೂ ಪೊಲಿಟ್ ಬ್ಯೂರೋ ಹೇಳಿದೆ. ತಾನು ತೆರೆದಿರುವ ಪರ್ಸನಲ್ ಲೆಡ್ಜರ್ ಖಾತೆ ಕಾನೂನು ಬಾಹಿರವಲ್ಲ ಎಂಬ ಎಡರಂಗ ಸರಕಾರದ ವಾದವನ್ನು ನ್ಯಾಯಾಲ ಎತ್ತಿಹಿಡಿದಿದೆ.

ಕಳೆದ ಮೇ ತಿಂಗಳಲ್ಲಿ ಕಲ್ಕತ್ತೆಯ 'ಆನಂದ್ ಬಝಾರ್ ಪತ್ರಿಕೆ' ಈ ಅಪಪ್ರಚಾರವನ್ನು ಆರಂಭಿ ಸಿತ್ತು. ಎಡರಂಗ ಸರಕಾರ ಜವಾಹರ್ ರೋಜಗಾರ್ ಯೋಜನೆಯಂತಹುಗಳಿಗೆ ಕೇಂದ್ರ ಸರಕಾರ ಕೊಡುವ ಹಣವನ್ನು ಪರ್ಸನಲ್ ಲೆಡ್ಜರ್ ಖಾತೆಯ ಮೂಲಕ ದುರುಪಯೋಗ ಮಾಡಿದೆ ಎಂಬುದು ಅವರ ಆಪಾದನೆಯ ಸಾರಾಂಶ. ಎಡರಂಗ ಸರಕಾರದ ಹೆಸರುಗೆಡಿಸುವ ಆತುರದಲ್ಲಿ ಅವರು ಸಿಎಜಿಯ ವಿವಿಧ ವರದಿಗಳನ್ನು ಏಕತ್ರಗೊಳಿಸಿ ಅತಿರಂಜಿತ ಗೊಳಿಸಲೂ ಹೇಸಲಿಲ್ಲ. ಕಾಂಗ್ರೆಸ್ಸಿನ ಮಮತಾ ಬ್ಯಾನರ್ಜಿ ಇನ್ನೂ ಮುಂದೆ ಹೋಗಿ ಈ ಆಧಾರದಲ್ಲಿ ಎಡರಂಗ ಸರಕಾರ ಕೇಂದ್ರದ ನಿಧಿಯ ೫೦೦೦ ಕೋಟಿ ರೂಗಳನ್ನು ಪರ್ಸನಲ್ ಲೆಡ್ಜರ್ ಖಾತೆಯ ಮೂಲಕ ದುರುಪಯೋಗ ಪಡಿಸಿದೆ ಎಂದು ಆಪಾದಿಸಿ 'ಸಾರ್ವಜನಿಕ ಹಿತಾಸಕ್ತಿ ಅರ್ಜಿ'ಯನ್ನು ಹೈಕೋರ್ಟ್ ನಲ್ಲಿ ಸಲ್ಲಿಸಿದರು. ತಾವೇಕೆ ಹಿಂದೆ ಬೀಳಬೇಕೆಂದು ಕಾಂಗ್ರೆಸ್‌ನ ಸೋಮೆನ್ ಮಿತ್ರಾ ಗುಂಪು ಬಂದ್‌ಗೆ ಕರೆ ನೀಡಿತು. ಬಿಜೆಪಿಯನ್ನೂ ಸೇರಿಸಿಕೊಂಡಿತು.

ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಎರಡೂ ಕಡೆಯ ವಾದಗಳನ್ನು ಆಲಿಸಿ ಈ ವಿಷಯವನ್ನು ಸಿಬಿಐಗೆ ಕೊಡಬೇಕೆಂಬ ಆದೇಶದ ಹೇಳಿಕೆಗೆ ಆಧಾರವಿಲ್ಲ ಎಂದರೂ ಸಿ.ಎ.ಜಿ. ಈ ಆಪಾದನೆಗಳ ತನಿಖೆ ನಡೆಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಹೇಳಿ ಈ ಅರ್ಜಿಯ ಸಾಂವಿಧಾನಿಕ ಅಂಶವಿರುವುದರಿಂದ ವಿಭಾಗೀಯ ಪೀಠಕ್ಕೆ ವರ್ಗಾಯಿಸಿದರು.

ಈ ಮಧ್ಯಂತರ ತೀರ್ಪನ್ನು ಪಶ್ಚಿಮಬಂಗಾಳ ಸರಕಾರ ಪ್ರಶ್ನಿಸಿ ಸಿ.ಎ.ಜಿ. ಸಂವಿಧಾನದ ಪ್ರಕಾರ ಕೆಲಸ ಮಾಡಲು ಬಿಡಬೇಕು ಎಂದು ವಾದಿಸಿತು. ಸಂವಿಧಾನದ ಪ್ರಕಾರ ಸಿ.ಎ.ಜಿ. ರಾಜ್ಯದ ರಾಜ್ಯಪಾಲ ರಿಗೆ ತನ್ನ ವರದಿ ಸಲ್ಲಿಸಬೇಕು. ಇದನ್ನು ಸರಕಾರ ವಿಧಾನ ಸಭೆಯ ಮುಂದಿಡುತ್ತದೆ. ಇದು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ಚರ್ಚೆಯಾಗಿ ಮತ್ತೆ ವಿಧಾನ ಸಭೆಯಲ್ಲಿ ಕೂಲಂಕುಷ ಚರ್ಚೆಯಾಗುತ್ತದೆ.

ಈ ಬಗ್ಗೆ ವಿಚಾರಣೆ ಎರಡು ವಾರಗಳ ಕಾಲ ನಡೆಯಿತು. ಮಮತಾ ಬ್ಯಾನರ್ಜಿಯವರ ಪರವಾಗಿ ವಾದಿಸಿದ ಅಜಿತ್ ಪಾಂಜಾ ಸಿ.ಎ.ಜಿ. ಗುಪ್ತ ತನಿಖೆ ನಡೆಸಿ ಹೈಕೋರ್ಟ್ ಗೆ ವರದಿ ಮಾಡಬೇಕು ಎಂದರು. ಸಿಎಜಿಯ ಪರವಾಗಿಯೂ ಒಂದು ಅಫಿಡವಿಟ್ ಸಲ್ಲಿಸಲಾಯಿತು. ಅದರಲ್ಲಿ ಸಿ.ಎ.ಜಿ ರಾಜ್ಯಪಾಲರಿಗೆ ಮಾತ್ರ ತನ್ನ ವರದಿ ಸಲ್ಲಿಸುವುದಾಗಿ ಹೇಳಿತು. ನಂತರ ಇದನ್ನು ಚರ್ಚಿಸುವ ಹಕ್ಕು ರಾಜ್ಯ ವಿಧಾನ ಸಭೆಗೆ ಮಾತ್ರ ಇದೆ. ನ್ಯಾಯಾಂಗ ಇದರಲ್ಲಿ ಮಧ್ಯ ಪ್ರವೇಶಿಸುವಂತಿಲ್ಲ.

ಕಲ್ಕತ್ತ ಹೈಕೋರ್ಟ್ ಈಗ ಎಡರಂಗ ಸರಕಾರದ ವಾದವನ್ನು ಎತ್ತಿ ಹಿಡಿದು ಪರ್ಸನಲ್ ಲೆಡ್ಜರ್ ಖಾತೆಗಳ ತನಿಖೆ ಮಾಡಬೇಕೆಂಬ ವಿಚಾರಣಾ ಕೋರ್ಟಿನ ಆದೇಶವನ್ನು ರದ್ದು ಮಾಡಿದೆ. ಹಾಗೂ ಇವುಗಳ ಉಸ್ತುವಾರಿಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರ್ ನೋಡಿಕೊಳ್ಳಬೇಕು ಎಂದೂ ಈ ತೀರ್ಪು ಹೇಳಿದೆ. ಇದು ಸಾಮಾನ್ಯವಾಗಿ ಬಳಕೆಯಲ್ಲಿರುವ ವಿಧಾನ ವಾದ್ದರಿಂದ ಪಶ್ಚಿಮಬಂಗಾಳ ರಾಜ್ಯ ಸರಕಾರಕ್ಕೆ ಈ ಬಗ್ಗೆ ಅಭ್ಯಂತರವೇನೂ ಇಲ್ಲ.

ವಾಸ್ತವವಾಗಿ ಸ್ಥಳೀಯ ಸಂಸ್ಥೆಗಳ ಲೆಕ್ಕ ಪತ್ರಗಳ ಪರಿಶೋಧನೆಯನ್ನು ರಾಜ್ಯ ಸರಕಾರ ತನ್ನ ಸಂಸ್ಥೆಗಳ ಮೂಲಕವೇ ಮಾಡಿಸಬಹುದು. ಆದರೆ ಎಡರಂಗ ಸರಕಾರ ಈ ಲೆಕ್ಕ ಪರಿಶೋಧನೆಯನ್ನು ಸಿ.ಎ.ಜಿ. ಅಂದರೆ ಮಹಾ ಲೆಕ್ಕ ಪರಿಶೋಧಕರಿಂದಲೇ ಮಾಡಿಸಬೇಕು ಎಂದು ನಿರ್ಧರಿಸಿದ್ದು ಈ ಸ್ಥಳೀಯ ಸಂಸ್ಥೆಗಳ ಲೆಕ್ಕ ಪತ್ರಗಳಲ್ಲಿ ಅವ್ಯವಹಾರಗಳು ನಡೆಯದಂತೆ ತಡೆಯಬೇಕೆಂಬ ಉದ್ದೇಶದಿಂದಲೇ. ಬೇರೆ ಯಾವ ರಾಜ್ಯ ಸರಕಾರವೂ ಇದನ್ನು ಮಾಡಿಲ್ಲ. ಈ ಅಂಶವನ್ನು ಎಡರಂಗದ ವಿರೋಧಿಗಳು ಉದ್ದೇಶಪೂರ್ವಕವಾಗಿಯೇ ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ. ಸಿ.ಎ.ಜಿಯ ಪರಿಶೋಧನೆ ಮುಗಿದು ಅದರ ವರದಿ ವಿಧಾನ ಸಭೆಯಲ್ಲಿ ಮಂಡನೆಯಾದಾಗ ಕೆಲವು ಪತ್ರಿಕೆಗಳು, ಕಾಂಗ್ರೆಸ್, ಬಿಜೆಪಿ ಗಳು ಹರಡುತ್ತಿರುವ ಸುಳ್ಳು ಬಯಲಿಗೆ ಬರುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ವಿಶ್ವಾಸ ವ್ಯಕ್ತಪಡಿಸಿದೆ.

> [illegible] ಸಂದರ್ಭದಲ್ಲಿ,
> [illegible]
> [illegible]
> [illegible]
> ಈ ಸಂದರ್ಭದಲ್ಲಿ ವಿಶೇಷ ಲೇಖನಗಳಿಗಾಗಿ
> ಪುಟ 4, 5 ಹಾಗೂ 8 ನ್ನು ನೋಡಿ.

ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ: ಉದಾರೀಕರಣದ ಗೀಳಿನಿಂದ ಸರಕಾರಕ್ಕೆ ಮುಖಭಂಗ

ಮಹಿಳಾ ಮೀಸಲಾತಿ ಮಸೂದೆ, ಕೃಷಿ ಕಾರ್ಮಿಕರಕ ಮಸೂದೆ ಇತ್ಯಾದಿ ತುರ್ತಾಗಿ ಮಂಡಿಸಿ ಅಂಗೀಕರಿಸಬೇಕಾದ ಹಲವು ಮಸೂದೆಗಳಿದ್ದರೂ, ಆ ಬಗ್ಗೆ ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಭರವಸೆ ನೀಡಿದ್ದರೂ ತಲೆಕೆಡಿಸಿಕೊಳ್ಳದ ಸಂಯುಕ್ತ ರಂಗ ಸರಕಾರದ ಹಣಕಾಸು ಮಂತ್ರಿ ಚಿದಂಬರಂಕಳೆದ ವಾರ ಅವಸರವಸರವಾಗಿ 'ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆ' ಯನ್ನು ಲೋಕಸಭೆಯಲ್ಲಿ ಮಂಡಿಸಿದರು. ಇದು ವಿಮಾ ರಂಗದ ಖಾಸಗೀಕರಣದತ್ತ ಮೊದಲ ಹೆಜ್ಜೆಯಾಗಿದ್ದು ದೇಶದ ಸ್ವಾವಲಂಬನೆಗೆ, ಆರ್ಥಿಕ ಸಾರ್ವಭೌಮತೆಗೆ ಧಕ್ಕೆ ತರುವ ಸಂಗತಿಯಾದ್ದರಿಂದ ಇದನ್ನು ಹಿಂತೆಗೆದು ಕೊಳ್ಳಬೇಕು ಎಂದು ಎಡಪಕ್ಷಗಳು ಎಚ್ಚರಿಸಿದವು. ಆದರೂ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲದಿಂದ ಇದನ್ನು ಪಾಸು ಮಾಡಿ ಕೊಳ್ಳಬಹುದೆಂಬ ಹಂಚಿಕೆಯಿಂದ ಚಿದಂಬರಂ ತನ್ನ ಪ್ರಯತ್ನ ಮುಂದುವರಿಸಿದರು.

ಲೋಕಸಭೆಯಲ್ಲಿ ಸಿಪಿಐ(ಎಂ) ನ ಬಸುದೇವ ಆಚಾರ್ಯರ ನೇತೃತ್ವದಲ್ಲಿ ಎಡ ಪಕ್ಷಗಳು ಇದನ್ನು ಖಂಡತುಂಡವಾಗಿ ವಿರೋಧಿಸಿದವು. ಬಿಜೆಪಿಯ ಕೆಲವು ಮುಖಂಡರು ಇದಕ್ಕೆ ವಿರೋಧವಾಗಿಯೇನೂ ಇಲ್ಲದಿದ್ದರೂ ಇನ್ನೂ ಕೆಲವರು ವಿದೇಶಿ ಕಂಪನಿಗಳಿಗೆ ಮಾತ್ರ ಅವಕಾಶವಿರಬಾರದು ಎಂದರು. ಈ ಬಗ್ಗೆ ಒಂದು ತಿದ್ದುಪಡಿಯನ್ನು ಬಿಜೆಪಿ ಸದಸ್ಯರು ಮಂಡಿಸಿದರು. ಇದಕ್ಕೆ ಮೊದಲು ಸಿಪಿಐ(ಎಂ) ಸದಸ್ಯರು ಮಂಡಿಸಿದ ದೇಶೀ-ವಿದೇಶಿ ಖಾಸಗಿಯವರಿಗೆ ವಿಮಾ ವಲಯದಲ್ಲಿ ಅವಕಾಶ ನೀಡಬಾರದು ಎಂಬ ತಿದ್ದುಪಡಿ ಯನ್ನು ಬಿಜೆಪಿ ಬೆಂಬಲಿಸದಿದ್ದರೂ ಬಿಜೆಪಿಯ ಆರೆ ತಿದ್ದುಪಡಿಯನ್ನು ಎಡಪಕ್ಷಗಳು ಬೆಂಬಲಿ ಸಿದವು. ಆಗ ಮಧ್ಯ ಪ್ರವೇಶಿಸಿದ ಪ್ರಧಾನ ಮಂತ್ರಿಗಳು ಈ ಮಸೂದೆಯನ್ನು ಹಿಂತೆಗೆದು ಕೊಳ್ಳುವುದಾಗಿ ಹೇಳಿದರು.

ಎಡಪಕ್ಷಗಳ ಎಚ್ಚರಿಕೆಯನ್ನು ಮೊದಲೇ ಗಮನಿಸಿದ್ದರೆ ಸಂಯುಕ್ತ ರಂಗ ಸರಕಾರ ಈ ಮುಖಭಂಗವನ್ನು ಎದುರಿಸಬೇಕಾಗಿರಲಿಲ್ಲ. ಈ ಹಿನ್ನಡೆಯಿಂದ ಕುಪಿತರಾದ ವಿದೇಶಿ ಹಣಕಾಸು ಬಂಡವಾಳಿಗರನ್ನು ಮೆಚ್ಚಿಸಲು ಈಗ ಸರಕಾರ ಈ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿ ಬೇಗನೇ ಈ ಮಸೂದೆಯನ್ನು ಮತ್ತೆ ತರುವುದಾಗಿ ಹೇಳುತ್ತಿದೆ.

ಸದ್ಯಕ್ಕೆ ಈ ಮಸೂದೆಯನ್ನು ಹಿಂತೆಗೆದು ಕೊಂಡದ್ದಕ್ಕೆ ವಿಮಾ ನೌಕರರು, ಇಡೀ ಕಾರ್ಮಿಕವರ್ಗ ಹಾಗೂ ಎಲ್ಲಾ ಪ್ರಜಾಪ್ರಭುತ್ವ ವಾದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಸಿಪಿಐ(ಎಂ) ಪೊಲಿಟ್ ಬ್ಯೂರೋ ಈ ಬಗ್ಗೆ ಹರ್ಷ ವ್ಯಕ್ತಪಡಿಸುತ್ತಾ ವಿಮಾ ವಲಯದ 'ಸುಧಾರಣೆ' ಮಾಡುವ ಅಂದರೆ ಖಾಸಗಿಯವರಿಗೆ ತೆರೆಯುವ ಪರವಾಗಿ ಚಿದಂಬರಂ ಒಡ್ಡುತ್ತಿರುವ ವಾದಗಳಲ್ಲಿ ಏನೂ ಹುರುಳಿಲ್ಲ ಎಂದು ಪುನರುಚ್ಚರಿಸಿದೆ. ಇತ್ತೀಚೆಗೆ ಸಿಪಿಐ(ಎಂ)ನ ರಾಷ್ಟ್ರೀಯ ಪ್ರಚಾರಾಂದೋಲನ ದಲ್ಲಿ ಈ ಮಸೂದೆಯನ್ನು ಹಿಂತೆಗೆದುಕೊಳ್ಳ ಬೇಕು ಎಂಬುದು ಒಂದು ಪ್ರಮುಖ ಬೇಡಿಕೆಯಾಗಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು. □

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಎನ್‌ಜಿಇಎಫ್ ಅನ್ನು ಪೂರ್ತಿ ಮುಳುಗಿಸಲು ಹುನ್ನಾರ

ಎನ್‌ಜಿಇಎಫ್ ಎಂಬುದು ಕರ್ನಾಟಕ ರಾಜ್ಯ ಸರಕಾರದ ಸ್ವಾಮ್ಯದ ಸಾರ್ವಜನಿಕ ವಲಯದ ಘಟಕ. ಇದು ಕರ್ನಾಟಕದ ಬಹುಮುಖ್ಯವಾದ ಸಾರ್ವಜನಿಕ ವಲಯ ಘಟಕವೂ ಹೌದು. ಈಗ ರೋಗಗ್ರಸ್ತವಾಗಿರುವ(ಸರಕಾರೀ ನೀತಿಗಳು ರೋಗಗ್ರಸ್ತಗೊಳಿಸಿರುವ?) ಈ ಘಟಕವನ್ನು ಪುನರುಜ್ಜೀವನಗೊಳಿಸುವ ಬದಲು ಪೂರ್ತಿ ಮುಳುಗಿಸಲು ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಖಾಸಗೀ ಬಂಡವಾಳಿಗರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ.

ಎನ್‌ಜಿಇಎಫ್ 1992 ರಿಂದ ಸುಮಾರು 100 ಕೋಟಿ ರೂಪಾಯಿಗಳ ಹಾನಿ ಮಾಡಿ ರೋಗಗ್ರಸ್ತ ಉದ್ದಿಮೆಯೆಂದು ಘೋಷಿತವಾಗಿದೆ. ರೋಗಗ್ರಸ್ತವಾದ ದೊಡ್ಡ ಉದ್ದಿಮೆಯಾದ್ದರಿಂದ ಇದನ್ನು ಬಿಐಎಫ್‌ಆರ್‌ಗೆ ವರದಿ ಮಾಡಲಾಯಿತು. ಬಿಐಎಫ್‌ಐರ್ ಈ ಘಟಕವನ್ನು ಪುನರುಜ್ಜೀವನಗೊಳಿಸಲು ಕೆಲವು ಕ್ರಮಗಳನ್ನು ಸೂಚಿಸಿತು.

ರೋಗಗ್ರಸ್ತ ಘಟಕವನ್ನು ಪುನರುಜ್ಜೀವನಗೊಳಿಸಲು ಮಾಲೀಕರು ಆಸಕ್ತಿ ತೋರುವುದು ಹಣಕಾಸು ತೊಡಗಿಸುವುದು ಅತಿ ಮುಖ್ಯ. ಆದರೆ ಕರ್ನಾಟಕ ಸರಕಾರಕ್ಕೆ ಅಂತಹ ಆಸಕ್ತಿ ಇಲ್ಲವೆಂಬುದು ಸ್ಪಷ್ಟ. ಹಣಕಾಸು ಸಂಗ್ರಹಿಸಲು ಎನ್‌ಜಿಇಎಫ್‌ಗೆ ಬೇರೆ ದಾರಿಯೇನು? ಬಂಡವಾಳಿಗರ ನ್ಯಾಯ ಎಂದಿಗೂ ಬಂಡವಾಳಿಗರಿಗೇ ಅನುಕೂಲಕರವಾಗಿರುತ್ತದಲ್ಲವೇ? ಹಾಗೆಯೇ ಅದು ದುಡಿವ ಜನರ ವಿರೋಧಿಯಾಗಿಯೂ ಇರುತ್ತದೆ. ಹಣ ಸಂಗ್ರಹಣೆಗೆ ಸೂಚಿತವಾದ ಮುಖ್ಯ ದಾರಿ ಈ ಘಟಕದ ಸ್ವಾಮ್ಯದಲ್ಲಿರುವ 220 ಎಕರೆ ಜಮೀನಿನಲ್ಲಿ 75 ಎಕರೆ ಮಾರುವುದು ಒಂದು. ಇನ್ನೊಂದು ಕ್ರಮ 1017 ಉದ್ಯೋಗಿಗಳನ್ನು ನೌಕರಿಯಿಂದ ನಿವೃತ್ತಿಗೊಳಿಸಿದ್ದು. ಇದಲ್ಲದೆ ಸದ್ಯದಲ್ಲೇ ಇನ್ನೂ 125 ಕೆಲಸಗಾರರನ್ನು ನಿವೃತ್ತಿಗೊಳಿಸಲಾಗುತ್ತದಂತೆ. ಇಷ್ಟೆಲ್ಲಾ ಕ್ರಮಗಳನ್ನು ಕೈಗೊಂಡರೂ ಈ ಪುನರುಜ್ಜೀವನ ಯೋಜನೆ ಯಶಸ್ವಿಯಾಗಿಲ್ಲ. ಕಳೆದ ಏಪ್ರಿಲ್‌ನಲ್ಲಿ ಉತ್ಪಾದನೆ ನಿಂತುಹೋಗಿದೆ.

ಇವೆಲ್ಲ ಅಲ್ಲದೆ ಈ ಘಟಕಕ್ಕೆ ಇನ್ನೊಂದು ಹಣಕಾಸು ಮೂಲದ ಆಸ್ತಿಯಿದೆ. ಅದು ಇಂದಿರಾ ನಗರದಲ್ಲಿರುವ 82 ಮನೆಗಳು. ಈ ಮನೆಗಳಲ್ಲಿ ಯಾರ್ಯಾರೋ ಇದ್ದಾರಂತೆ. ಈ ಮನೆಗಳನ್ನು ಮಾರಿದರೆ ಹಣ ಬರುತ್ತದಲ್ಲವೇ? ಆದರೆ ಪಟ್ಟಭದ್ರರು ಇದು ಆಗದಂತೆ ನೋಡಿಕೊಳ್ಳುತ್ತಿದ್ದಾರಂತೆ. ಈಗ ಈ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಮೂರುಕಾಸಿಗೆ ಈ ಮನೆಗಳನ್ನು ಮಾರಲು ಒತ್ತಡವನ್ನು ಹೇರಲಾಗುತ್ತಿದೆಯಂತೆ. ಆದ್ದರಿಂದ ಈ ಮೂಲವೂ ಉದ್ದಿಮೆಯ ಪುನರುಜ್ಜೀವನಕ್ಕೆ ಪ್ರಯೋಜನವಾಗದೆ ಹೋಗಬಹುದು.

ಈ ಮೇಲಿನ ಕತೆಗಳನ್ನೆಲ್ಲ ನೋಡಿದರೆ ಕರ್ನಾಟಕ ಸರಕಾರ ಈ ಉದ್ದಿಮೆಯ ಪುನರುಜ್ಜೀವನದಲ್ಲಿ ಏನೇನೂ ಆಸಕ್ತಿ ತಳೆದಿಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆಯಲ್ಲವೇ?

ಅಂದ ಹಾಗೆ ಈ ಉದ್ದಿಮೆಯನ್ನು ಮೂರು ಕಾಸಿಗೆ ಲಪಟಾಯಿಸಲು ಬಹುರಾಷ್ಟ್ರೀಯ ಕಂಪನಿಯೊಂದು ಹಾಗೆಯೇ ಹಲವು ಖಾಸಗಿ ಬಂಡವಾಳಿಗರೂ ಹುನ್ನಾರ ನಡೆಸಿದ್ದಾರಂತೆ.

ಕರ್ನಾಟಕ ಸರಕಾರ ತೆರೆಯ ಮರೆಯಲ್ಲಿ ನಿಂತು ಈ ಹುನ್ನಾರಕ್ಕೆ ಕುಮ್ಮಕ್ಕು ಕೊಡುತ್ತಿರಬಹುದೇ?

ಕೊಳ್ಳೆಗೆ ಕೊಳ್ಳೆ - ಹೊಸಮಂತ್ರ

ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಮಹಾಶಯರ ಮಂತ್ರ ಇದು. ಭಾರತದ ಹಣಕಾಸು ವಲಯವನ್ನು ವಿದೇಶಿಯರಿಗೆ ತೆರೆಯಬೇಕೆಂಬ ಒತ್ತಡಕ್ಕೆ ಉತ್ತರಿಸಿದ ಅವರು ಬೇರೆ ದೇಶಗಳವರು ನಮಗೆ ಅವರ ಹಣಕಾಸು ಮಾರುಕಟ್ಟೆಯನ್ನು ಎಷ್ಟು ತೆರೆಯುತ್ತಾರೋ ಅಷ್ಟೆ ನಾವೂ ನಮ್ಮ ಮಾರುಕಟ್ಟೆ ತೆರೆಯುತ್ತೇವೆ ಎಂದಿದ್ದಾರೆ.

ಬಹಳ ಚೆನ್ನಾಗಿ ಚೌಕಾಸಿ ಮಾಡಿದ್ದಾರೆ ಎಂದು ನಿಮಗನ್ನಿಸಬಹುದಲ್ಲವೇ? ಚೌಕಾಸಿ ಚೆನ್ನಾಗೇ ಇದೆ. ಆದರೆ ಯಾರಿಗಾಗಿ ಯಾರು ಮಾಡುತ್ತಿರುವ ಚೌಕಾಸಿ ಇದು? ಭಾರತದ ದೊಡ್ಡ ಬಂಡವಾಳಿಗರು ವಿದೇಶಿ ದೊಡ್ಡ ಬಂಡವಾಳಿಗರೊಡನೆ ಮಾಡುತ್ತಿರುವ ಚೌಕಾಸಿ ಇದು.

ದುಡಿವ ಜನರ ಹಿತಾಸಕ್ತಿ ಬೇಡ ಇವರಿಗೆ. ಅವರ ಬಂಡವಾಳಕ್ಕೆ ಬರಬೇಕಾದ ಲಾಭದ ಚಿಂತೆ ಅವರದು. ಇದಕ್ಕಲ್ಲವೇ ಮಾರ್ಕ್ಸ್ ಎಂಗೆಲ್ಸ್ 'ಜಗತ್ತಿನ ದುಡಿಯುವ ಜನರೇ ಒಂದಾಗಿ' ಎಂದು ಹೇಳಿದ್ದು?

ಸಾಲದ ಬಲೆಯಲ್ಲಿ ಭಾರತ

ಇದನ್ನು ಹಲವರು ಹೇಳುತ್ತಿದ್ದಾರೆ. ಆದರೆ ಈ ಸಾರಿ ಹೇಳಿರುವುದು ಉದಾರೀಕರಣದ ಫಲಾನುಭವಿಗಳಾದ ಬಂಡವಾಳಿಗರೆ. ಪಂಜಾಬ್, ಹರ್ಯಾಣ, ದಿಲ್ಲಿ ವಾಣಿಜ್ಯ ಮತ್ತು ಉದ್ದಿಮೆ ಮಂಡಳಿ (ಪಿಹೆಚ್‌ಡಿಸಿಸಿ ಐ) ನಡೆಸಿದ ಅಧ್ಯಯನದಿಂದ ಹೊರಬಂದ ವಿಷಯ ಇದು.

ಸರಕಾರ ಸಾಲ ಪಡೆಯುತ್ತಲೇ ಇರುವುದರಿಂದ ಬಡ್ಡಿಯ ಪ್ರಮಾಣ ಹೆಚ್ಚುತ್ತಿದೆ ಎಂದಿದೆ ಈ ಅಧ್ಯಯನ. ಹಣಕಾಸು ಕೊರತೆಯನ್ನು ಮಾರುಕಟ್ಟೆಯಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆದು ತುಂಬಿಸಬೇಕಾದ ಅವಶ್ಯಕತೆ ಇರುವುದರಿಂದ ಇದು ಆಗುತ್ತಿದೆ ಎಂದು ಅದು ಹೇಳಿದೆ.

ಹಣಕಾಸು ಕ್ರಮಗಳನ್ನು ಕೈಗೊಳ್ಳದೇ ಹೋದರೆ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗಬಹುದೆಂದು ಅದು ಹೇಳಿದೆ.

ಹಾಗೆಯೇ ಭಾರತದ ವಿದೇಶೀ ಸಾಲದ ಪ್ರಮಾಣವೂ ತೀವ್ರವಾಗಿ ಹೆಚ್ಚುತ್ತಿರುವುದೂ ಆತಂಕದ ವಿಷಯವೆಂದಿದೆ ಅದು. 1996 ರ ವೇಳೆಗೆ ಭಾರತದ ವಿದೇಶೀ ಸಾಲ 92 ಬಿಲಿಯ ಡಾಲರಗಳಷ್ಟಿತ್ತು.(ಅಂದರೆ ಮೂರು ಲಕ್ಷ ಇಪ್ಪತ್ತೆರಡು ಸಾವಿರ ಲಕ್ಷ ರೂಪಾಯಿಗಳು)

ಔದ್ಯಮಿಕ ಬೆಳವಣಿಗೆ ಶೇ 12 ರ ದರದಲ್ಲಿ ಆಗಬಹುದೆಂದು ನಿರೀಕ್ಷೆ ಈಗ ಹುಸಿಯಾಗುವಂತೆ ಕಾಣುತ್ತಿದೆ ಎಂದಿದೆ ಅದು. ಆದ್ದರಿಂದ ಮುಂಬರುವ ದಿನಗಳಲ್ಲಿ ಆರ್ಥಿಕದ ಪರಿಸ್ಥಿತಿ ಇನ್ನೂ ಹದಗೆಡುತ್ತಲೇ ಹೋಗಬಹುದೆಂದಿದೆ ಈ ಅಧ್ಯಯನ.

ಉದಾರೀಕರಣದ ಪ್ರತಿಪಾದಕರೇ ಎಚ್ಚರಿಕೆ ನೀಡುವ ಪರಿಸ್ಥಿತಿಯಿದೆಯೆಂದರೆ ಈ ಉದಾರೀಕರಣ ಎಂತಹ ಭಯಂಕರವಾದದ್ದಿರಬೇಕು ನೀವೇ ಹೇಳಿ.

ಹಸುಳೆಗಳ ಹೆಗಲ ಮೇಲೆ ದೊಡ್ಡ ಹೊರೆ

ಭಾರತಕ್ಕೆ ಸ್ವಾತಂತ್ರ್ಯ ಬಂದು, ಐವತ್ತು ವರ್ಷವಾಗುತ್ತಿದೆ. ಇದನ್ನು ದೇಶದಾದ್ಯಂತ ಆಚರಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಮುಂದಿನ ಒಂದು ವರ್ಷ ಈ ಕಾರ್ಯಕ್ರಗಳು ನಡೆಯಲಿವೆ. ಆದರೆ ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ (ವಿಶ್ವ ಸಂಸ್ಥೆಯ ಅಂಗ ಸಂಸ್ಥೆ) ಭಾರತದ ಆಳುವ ವರ್ಗಗಳಿಗೆ ಛಾಟಿಯೇಟನ್ನು ನೀಡಿದೆ.

ಅದರ ಪ್ರಕಾರ ಭಾರತದ ಪ್ರತಿ ನಾಲ್ಕು ಮಕ್ಕಳಲ್ಲಿ ಒಂದು ಮಗು ಬಾಲ ಕಾರ್ಮಿಕ ಅಂದರೆ ಶೇ 25 ರಷ್ಟು ಬಾಲರು ಕಾರ್ಮಿಕರು. ಅಪ್ಪ ಅಮ್ಮಂದಿರ ಪ್ರೀತಿಯಲ್ಲಿ, ಶಾಲೆ, ಆಟಪಾಠಗಳಲ್ಲಿ ತೊಡಗಿರಬೇಕಾದವರು ಬರ್ಬರ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾದ ದುರಂತಮಯ ಸನ್ನಿವೇಶ.

ಜಗತ್ತಿನ ಅನಕ್ಷರಸ್ಥರ ಅರ್ಧ ಭಾಗವನ್ನು ಹೊಂದಿರುವ ಭಾರತಕ್ಕೆ ಇದು ಇನ್ನೊಂದು ಗರಿಯೇಯೋ ಉದಾರೀಕರಣವಾದಿಗಳಿಗೆ ಬಹುಶಃ ಇಂತಹವೆಲ್ಲ ಕಾಣಲಿಕ್ಕಿಲ್ಲ, ಬಂಡವಾಳಿಗರ ಬಂಡವಾಳಕ್ಕೆ ಲಾಭ ತಂದುಕೊಡುವುದೇ ಉದಾರೀಕರಣ ವಾದಿಗಳ ಘನ ಉದ್ದೇಶವಲ್ಲವೇ?

ನಿಜ ಪರಿಸ್ಥಿತಿ ಹೀಗಿರುವಾಗ ನಮಗೆ ಸ್ವಾತಂತ್ರ್ಯ ಬಂದು ಐವತ್ತು ವರ್ಷವಾಗಿದೆಯೆಂದು ಆಚರಣೆ ಮಾಡುವುದು ಎಷ್ಟು ಅರ್ಥಪೂರ್ಣ?

ಭೂತಾಕಾರವಾಗಿ ಬೆಳೆಯುತ್ತಿರುವ ವ್ಯಾಪಾರ ಬಾಕಿ

ಭಾರತದ ವ್ಯಾಪಾರ ಬಾಕಿ ಭೂತಾಕಾರವಾಗಿ ಬೆಳೆಯುತ್ತಿದೆ. 1997-98 ರ ಮೊದಲ ಕಾಲು ವರ್ಷದಲ್ಲಿ ಈ ಬಾಕಿ ಶೇ 50 ರಷ್ಟು ಹೆಚ್ಚಾಗಿದೆಯಂತೆ. ಮೌಲ್ಯರೂಪದಲ್ಲಿ ಹೇಳುವುದಾದರೆ ಅದು ಈ ಮೂರು ತಿಂಗಳುಗಳಲ್ಲಿ 1397 ದಶಲಕ್ಷ ಡಾಲರುಗಳಷ್ಟಾಗಿದೆ.

ಕಳೆದ ವರ್ಷ ಅಂದರೆ 1996-97 ರ ಸಾಲಿನ ಮೊದಲ ಮೂರು ತಿಂಗಳ ಅವಧಿ ಅಂದರೆ ಏಪ್ರಿಲ್ 96 ರಿಂದ ಜೂನ್ 96 ರ ವೇಳೆಗೆ 933 ದಶಲಕ್ಷ ಡಾಲರುಗಳಷ್ಟಿದ್ದ ಈ ವ್ಯಾಪಾರ ಬಾಕಿ ಇಷ್ಟು ಹೆಚ್ಚಿರುವುದಕ್ಕೆ ಮುಖ್ಯ ಕಾರಣ ಆಮದು ಹೆಚ್ಚಿರುವುದು. ಆಮದು ಹೆಚ್ಚಿದಂತೆ ರಫ್ತು ಹೆಚ್ಚಿಲ್ಲ. ಬದಲಿಗೆ ರಫ್ತು ಕಡಿಮೆಯಾಗಿದೆ. ಆದ್ದರಿಂದಲೇ ಈ ವ್ಯಾಪಾರ ಬಾಕಿ.

ಕೇಂದ್ರ ಸರಕಾರದ ವಾಣಿಜ್ಯ ಮಂತ್ರಾಲಯ ಮುಂಬರುವ ದಿನಗಳಲ್ಲಿ ರಫ್ತು ದರ ಹೆಚ್ಚಾಗಲಿದೆ ಎಂಬ ಆಶಾವಾದ ವ್ಯಕ್ತಪಡಿಸಿದೆ.

ಆದರೆ ಇಷ್ಟೊಂದು ಉದಾರೀಕರಣ ಮಾಡಿದ ಮೇಲೂ ಇಷ್ಟೊಂದು ವ್ಯಾಪಾರ ಬಾಕಿ ಉಳಿಯುವುದಾದರೆ ಈ ಉದಾರೀಕರಣದ ಪ್ರಯೋಜನವಾದರೂ ಏನು?

ದೇಶವನ್ನು ಲೂಟಿ ಮಾಡುವವರಿಗೆ ಅನುಕೂಲ ಮಾಡಿಕೊಡುವುದೇ ಅಲ್ಲವೇ?

ಟೋಮ್ಯಾಟೋ ಬೆಳೆಗಾರರ ಸಂಕಟಕ್ಕೆ ಪರಿಹಾರವೇನು?


ಎನ್.ಕೆ.ಉಪಾಧ್ಯಾಯ

ಕೋಲಾರ ಜಿಲ್ಲೆಯ ರೈತರು ಈ ವರ್ಷ ಅತಿ ಹೆಚ್ಚು ಟೋಮ್ಯಾಟೋವನ್ನು ಬೆಳೆದಿದ್ದು ಅದರ ಬೆಲೆ ಕೆಜಿಗೆ 40-50 ಪೈಸೆಗಳಿಗೆ ಕುಸಿದಾಗ ಕಂಗಾಲಾಗಿ ತಾವು ಬೆಳೆದ ಟೋಮ್ಯಾಟೋಗಳನ್ನು ರಸ್ತೆಗೆ ಸುರಿದು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಬಿತ್ತನೆ ಬೀಜದ ಬೆಲೆಯೂ ಸಿಗದೆ ಹತಾಶರಾಗಿದ್ದಾರೆ. ಕೋಲಾರ ಜಿಲ್ಲೆಯ ರೈತರು, ವರ್ಷ ಎರಡು ವರ್ಷಕ್ಕೊಮ್ಮೆ ಈರುಳ್ಳಿ (ಉಳ್ಳಾಗಡ್ಡಿ) ಬೆಳೆಗಾರರೂ ಬಟಾಟೆ ಬೆಳೆಗಾರರೂ ಇಂಥದೇ ಮಸ್ಯೆಯನ್ನು ಎದುರಿಸುತ್ತಿರುವ ಕೂಗಾಟಗಳು ಕಿವಿಗಡಚಿಕ್ಕುತ್ತವೆ. ಪತ್ರಿಕೆಗಳಲ್ಲಿ ದಪ್ಪಕ್ಷರಗಳಲ್ಲಿ ಛಾಪಿಸಲ್ಪಡುತ್ತಿವೆ. ಅಸೆಂಬ್ಲಿಗಳಲ್ಲಿ ಶಾಸಕರ ಕೂಗಾಟ ಎಲ್ಲೆಮೀರಿ ಕೇಳಬರುತ್ತದೆ. ಆದರೆ ಇಂಥ ಸಮಸ್ಯೆಗಳುಂಟಾಗಲು ಕಾರಣಗಳೇನು, ರೈತರು ಎದುರಿಸಬೇಕಾಗಿ ಬರುತ್ತಿರುವ ಇಂಥ ಅಸಹಾಯಕತೆಯಿಂದ ಅವರಿಗೆ ಪರಿಹಾರವೇನೆಂಬುದರ ಕುರಿತು ಸರಕಾರವಾಗಲೀ, ಶಾಸಕರಾಗಲೀ, ರೈತರಾಗಲೀ ವಿಚಾರಮಾಡಿ ಕಾಯಂ ಪರಿಹಾರ ಕಂಡು ಹಿಡಿಯುವುದಲ್ಲಿ ವಿಫಲರಾಗಿದ್ದಾರೆ.

ಈರುಳ್ಳಿ, ಬಟಾಟೆ, ಟೋಮ್ಯಾಟೋಗಳು ಹೆಚ್ಚು ಬೆಳೆದಾಗ, ಅದಕ್ಕೆ ಸರಿಯಾದ ಮಾರುಕಟ್ಟೆ ಇಲ್ಲದಂತಾಗಿ ಈ ಸಮಸ್ಯೆ ಉಂಟಾಗುತ್ತದೆ. ಕರ್ನಾಟಕ ಪ್ರಾಂತ ರೈತಸಂಘ ರೈತರೆದುರಿಸುತ್ತಿರುವ ಈ ಸಮಸ್ಯೆಗೆ ಒಂದು ಪರಿಹಾರ ಸೂಚಿಸಿತ್ತು. ಮಾರುಕಟ್ಟೆ ಕುಸಿದಾಗ ನ್ಯಾಯಯುತವಾದಂಥ ಬೆಲೆ ಲಭ್ಯವಾಗದಂಥ ಪರಿಸ್ಥಿತಿ ಉಂಟಾದಾಗ, ಅವುಗಳನ್ನು ಕೆಡದಂತೆ ನೋಡಿಕೊಳ್ಳಲು ಸರಕಾರ ಶೈತ್ಯಾಗಾರಗಳನ್ನು ವ್ಯವಸ್ಥೆ ಮಾಡಬೇಕು, ಆ ಮೂಲಕ ರೈತರಿಗೆ ರಕ್ಷಣೆ ನೀಡಿ, ಅವರಿಗೆ ಸರಿಯಾದ ಬೆಲೆ ಸಿಗುವಂತಾಗಬೇಕು ಎಂಬ ಸೂಚನೆ ನ್ಯಾಯಯುತವಾಗಿದೆ. ಸರಕಾರ ಈ ಸೂಚನೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಕೃಷಿ ಮಂತ್ರಿ ಬೈರೇಗೌಡರು ವಿರೋಧಪಕ್ಷದಲ್ಲಿದ್ದಾಗ ಇಂಥದ್ದೇ ಸೂಚನೆಯನ್ನು ಮುಂದೆ ಮಾಡಿದ್ದರು. ಆದರೆ ಈಗ ಕಳೆದ 2 ವರ್ಷಗಳಿಂದ ಕೃಷಿ ಮಂತ್ರಿಯಾಗಿದ್ದರೂ ಈ ವಸ್ತುಗಳ ರಕ್ಷಣೆಗಾಗಿ ಶೈತ್ಯಾಗಾರಗಳನ್ನು ಸ್ಥಾಪಿಸುವ ಕುರುತು ವಿಚಾರ ಮಾಡದಿರುವುದು ಅವರ ಕರ್ತವ್ಯ ಲೋಪವನ್ನು ತೋರಿಸಿ ಕೊಡುತ್ತದೆ.

ಇದರ ಜೊತೆಯಲ್ಲಿಯೇ ಸರಕಾರದ ಕೃಷಿಯೋಜನೆಯ ವೈಫಲ್ಯವೂ ಎದ್ದು ಕಾಣುತ್ತದೆ. ಕೃಷಿಯೋಜನೆಯಡಿಯಲ್ಲಿ ಸರಕಾರ ಯಾವ ಬೆಳೆಯನ್ನು ಎಷ್ಟು ಕ್ಷೇತ್ರದಲ್ಲಿ ಎಲ್ಲಿ ಬೆಳೆಯಬೇಕೆಂದು ನಿರ್ಧರಿಸಬೇಕು. ಆ ರೀತಿಯ ಕಟ್ಟು ನಿಟ್ಟಿನ ಆದೇಶ ಇಲ್ಲದಿರುವುದರಿಂದ ರೈತ ತನಗೆ ಲಾಭದಾಯಕವಾದ ಹೆಚ್ಚು ಇಳುವರಿ ಬರುವ ಬೆಳೆಗಳನ್ನೆ ಬೆಳೆಯಲು ಪ್ರಾರಂಭ ಮಾಡುತ್ತಾನೆ. ರಾಗಿ ಬೆಳೆಯುವಲ್ಲಿ ಟೋಮ್ಯಾಟೋ ಬೆಳೆಸುತ್ತಾನೆ. 5 ಟನ್ ಬೆಳೆಯುತ್ತಿದ್ದಲ್ಲಿ ಹೊಸತಳಿಯಿಂದಾಗಿ 10 ಟನ್ ಬೆಳೆಯುತ್ತಾನೆ. ಜೋಳ ಬೆಳೆಯುವ ಭೂಮಿಯಲ್ಲಿ ಈಗ ಸೂರ್ಯಕಾಂತಿ ಬೆಳೆಯುತ್ತಾನೆ. ಅದಕ್ಕೆ ಹೆಚ್ಚು ಬೆಲೆ ಸಿಗುತ್ತದೆ. ಈಗ ಬಿಜಾಪುರ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿ ಹತ್ತಿ ಬೆಳೆಯುವ ಬದಲಾಗಿ ಸೂರ್ಯಪಾನ ಬೆಳೆಯಲಾಗುತ್ತಿದೆ. ಹತ್ತಿಯ ಅಭಾವದಿಂದಾಗಿ ಜಿನ್ನಿಂಗ್ ಕಾರ್ಖಾನೆಗಳು ಮುಚ್ಚಲ್ಪಡುತ್ತಿವೆ. ಆಹಾರ ಧಾನ್ಯ ಬೆಳೆಯುವ ಕ್ಷೇತ್ರಗಳೂ ಕುಂಠಿತಗೊಳ್ಳುತ್ತಿವೆ. ಇದು ಅಪಾಯಕಾರಿ. ಇದರ ಕುರಿತು ಸರಕಾರ ನಿರ್ದಿಷ್ಟ ನಿರೂಪಣೆ ತಯಾರಿಸಿ ರೈತರಿಗೆ ಸರಿಯಾಗಿ ತಿಳಿಹೇಳುವುದು ಅಗತ್ಯ.

ಇದರ ಜೊತೆಯಲ್ಲೆ ಸರಕಾರ ಮತ್ತೊಂದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದೆ, ಕೃಷಿಬೆಳೆಗಳಿಗೆ ಸಂಬಂಧಪಟ್ಟಂಥ ಕೃಷಿಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ರೈತ ಸಂಘ ಸರಕಾರಗಳನ್ನು ಒತ್ತಾಯಪಡಿಸುತ್ತಲೇ ಬಂದಿವೆ. ಹೆಚ್ಚು ಲಾಭದಾಯಕ ಬೆಲೆಗಳತ್ತ ರೈತರ ಗಮನ ಹರಿಯುತ್ತಿರುವಾಗ ಹೆಚ್ಚುವರಿ ಬೆಳೆಗಳ ಸಂಸ್ಕರಣೆಗೆ ಕೃಷಿ ಆಧಾರಿತ ಕೈಗಾರಿಕೆಗಳು ಅತ್ಯಗತ್ಯ. ಈ ದಿವಸಗಳಲ್ಲಿ ಜನರ ಅಭಿರುಚಿಗಳಲ್ಲಿ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಟೋಮ್ಯಾಟೋ ಸಾಸ್, ಕೇಚಪ್, ಜಾಮ್‌ಗಳಲ್ಲಿ ಹೆಚ್ಚೆಚ್ಚಾಗಿ ಬಳಕೆಯಾಗುತ್ತಿವೆ. ಹಾಗೆಯೇ ಬಟಾಟೆ ಚಿಪ್ಸ ಕೂಡ ಜನರ ಅಭಿರುಚಿಯ ವಸ್ತುವಾಗಿದೆ. ನಮ್ಮ ದೇಶದಲ್ಲಿ ಟೋಮ್ಯಾಟೋ ಸಂಸ್ಕರಣ ಪ್ರಮಾಣ ಅತಿಕಡಿಮೆ ಇರುವುದರಿಂದ ಬೆಲೆ ಇಳಿಯಲು ಕಾರಣವಾಗಿದೆ ಎಂದು ಸಚಿವ ಬೈರೇಗೌಡರು ಹೇಳುತ್ತಿರುವಾಗ, ಬೆಳೆದ ಟೋಮ್ಯಾಟೋ, ಮಾವಿನಹಣ್ಣು, ದ್ರಾಕ್ಷಿಗಳ ಸಂಸ್ಕರಣಕ್ಕಾಗಿ ಬೇರೆ ರೂಪದಲ್ಲಿ ಜನರಿಗೆ ಅದು ಉಪಯೋಗವಾಗುವಂತೆ ಮಾಡಲು ಹೆಚ್ಚು ಸಂಸ್ಕರಣ ಕೇಂದ್ರಗಳನ್ನೂ, ಕೃಷಿಕೈಗಾರಿಕೆಗಳನ್ನು ಸ್ಥಾಪಿಸುವತ್ತ ಗಮನ ಹರಿಸಬೇಕಾಗಿದೆಂಬುದನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ. ನೀರಾವರಿ ವಿಸ್ತಾರಗೊಳ್ಳುತ್ತಿರುವಾಗ, ಹೊಸ ತಳಿಗಳ ಸಂಶೋಧನೆ ನಡೆಯುತ್ತಿರುವಾಗ, ರೈತ ಹೆಚ್ಚು ಲಾಭ ಸಿಗುವ, ಮಾರ್ಕೆಟಿಗೆ ಅಗತ್ಯ ಇರುವ ಬೆಳೆಗಳನ್ನು ಬೆಳೆಯುವತ್ತ ಗಮನ ಹರಿಸುತ್ತಿರುವಾಗ, ಗ್ರಾಮಾಂತರ ಯುವಕರಿಗೆ ಅನುಕೂಲಕರವಾಗುವ ಉದ್ದೇಶದಿಂದ ಸರಕಾರದವರು ಕೃಷಿಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆ ರೂಪಿಸಿದರೆ ಮಾತ್ರ ಟೋಮ್ಯಾಟೋ ಬೆಳೆಗಾರರು ಎದುರಿಸುವಂಥ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯ.



ಮೊರಾಳ ವೀರ ಕೆ.ಪಿ.ಆರ್. ನಿಧನ

ಇತಿಹಾಸ ಪ್ರಸಿದ್ಧವಾದ ಮೊರಾಳ ಕೇಸ್‌ನಲ್ಲಿ ಗಲ್ಲುಶಿಕ್ಷೆಗೆ ಒಳಗಾಗಿದ್ದ ಪ್ರಖ್ಯಾತ ಸ್ವತಂತ್ರ ಸಮರ ಸೇನಾನಿಯೂ, ಕಮ್ಯುನಿಸ್ಟ್-ರೈತ ಚಳುವಳಿಯ ನೇತಾರರೂ ಆಗಿದ್ದ 88 ವಯಸ್ಸಿನ ಕೆ.ಪಿ.ಆರ್. ಗೋಪಾಲನ್‌ರವರು ಆಗಸ್ಟ 4 ರಂದು ಕೇರಳದ ಕಣ್ಣೂರಿನಲ್ಲಿ ನಿಧನರಾದರು.

ಕೇರಳದ ಕ್ರಾಂತಿಕಾರಿ ಕೊಡುಗೆಗಳಲ್ಲಿ ಪ್ರಮುಖರಾದ ಮಲಬಾರ್‌ನ ವೀರ ಪುತ್ರರಾದ ಕಾ.ಕೆ.ಪಿ.ಆರ್. 1909 ಜೂನ್ ಒಂದರಲ್ಲಿ ಕಲ್ಯಸೇರಿಯ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದರು.

ಕ್ರಾಂತಿಕಾರಿ ರಾಜಕೀಯದ ಮಧ್ಯೆ ಸಂಸಾರಿಕ ಜೀವನವನ್ನೇ ಮರೆತ ಕೆ.ಪಿ.ಆರ್. ತಮ್ಮ 75ನೇ ವಯಸ್ಸಿನಲ್ಲಿ ಮದುವೆಯಾದರು. ಐದು ವರ್ಷಗಳ ಮುಂಚೆ ಅವರ ಪತ್ನಿ ತೀರಿಕೊಂಡರು.

ಕೇರಳದ ಕಮ್ಯುನಿಸ್ಟ್ ಚಳುವಳಿಯ ಪ್ರಜ್ವಲವಾದ ಉದಯವನ್ನು ಜಗಜ್ಜಾಹೀರುಗೊಳಿಸಿದ, ಎಲ್ಲ ಅಡೆತಡೆಗಳನ್ನು ಎದುರಿಸಿ ನಿಂತಂತಹ ಇತಿಹಾಸ ಪುರುಷರ ಹಾಗೆ ಜನಸಮುದಾಯದ ಮನಸ್ಸಿನಲ್ಲಿ ಚಿರಪರಿಚಿತರಾದ ಕೆ.ಪಿ.ಆರ್. ಕೊನೆಯವರೆವಿಗೂ ಕೆಂಬಾವುಟವನ್ನು ಎತ್ತಿ ಹಿಡಿದರು.

ಕೇರಳದ ಕೆಂಪುಗ್ರಾಮ ಎಂದು ಗುರುತಿಸಲ್ಪಡುವ ಕಲ್ಯಸೇರಿಗೆ ಈ ಬಿರುದು ಬರಲು ಕೆ.ಪಿ.ಆರ್. ಕುಟುಂಬ ದೊಡ್ಡ ಕೊಡುಗೆಯನ್ನೇ ನೀಡಿದೆ.

ಕಾಂ॥ ಕೆ.ಪಿ.ಆರ್. ಸರಕಾರಿ ನೌಕರರಾಗಿದ್ದು 1930 ರಲ್ಲಿ ರಾಜಿನಾಮೆ ನೀಡಿ ಪ್ರಸಿದ್ಧ ಕಾನೂನು ಭಂಗ ಚಳುವಳಿಯಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದರು. ಕೆ.ಪಿ.ಆರ್. ಇದ್ದ ಕಣ್ಣೂರು ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ಉತ್ತರ ಭಾರತದ ಕ್ರಾಂತಿಕಾರಿ ಸಂಗಾತಿಗಳ ಜೊತೆ ಒಡನಾಟ ಬೆಳೆಯಿತು. ಹಾಗೆಯೇ ಗಾಂಧೀಜಿಯವರ ಹೋರಾಟದ ಮಾರ್ಗ ಸಮಂಜಸವಲ್ಲವೆಂಬುದು ಈ ಜೈಲು ವಾಸದಿಂದ ಮನವರಿಕೆಯಾಯಿತು. ಜೈಲಿನಿಂದ ಬಿಡುಗಡೆಯಾದ ಕೆ.ಪಿ.ಆರ್. ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಮುಖಂಡರುಗಳಾದ ಪಿ.ಕೃಷ್ಣಪಿಳ್ಳೆ, ಇ.ಎಂ.ಎಸ್.ರ ಸಲಹೆಯಂತೆ ಆ ಕಾಲದಲ್ಲಿ ರೈತ-ಕಾರ್ಮಿಕ ಚಳುವಳಿ ಕಟ್ಟಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದರು.

1936 ರಲ್ಲಿ ಕಾಂ॥ ಎ.ಕೆ.ಜಿ. ಯವರ ನಾಯಕತ್ವದಲ್ಲಿ ಕಣ್ಣೂರಿನಿಂದ ಮದ್ರಾಸಿನವರಗೆ ನಡೆದ 'ಬಡತನ ಜಾಥಾ' ದಲ್ಲಿ ಘೋಷಣೆಗಳನ್ನು ಕೂಗುವುದು ಹಾಗೂ

ಪುಟ 7 ನೋಡಿ

ರಾಜ್ಯಾದ್ಯಂತ ಪ್ರಚಾರಾಂದೋಲನ ಕಾರ್ಯಕ್ರಮಗಳು

ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯ ಮೇರೆಗೆ ಎರಡು ವಾರಗಳ ರಾಷ್ಟ್ರೀಯ ಪ್ರಚಾರಾಂದೋಲನ ಅಂಗವಾಗಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಸಿಪಿಐ(ಎಂ) ನೇತೃತ್ವದ ರಾಜ್ಯದ ದುಡಿಯುವ ಜನತೆಯಿಂದ ನಡೆದ ಪ್ರಚಾರಾಂದೋಲನ, ಪ್ರತಿಭಟನೆ, ರ್‍ಯಾಲಿ ಮುಂತಾದ ಕಾರ್ಯಕ್ರಮಗಳ ವರದಿ.

ಉತ್ತರ ಕನ್ನಡ: ಜಿಲ್ಲೆಯ ದಾಂಡೆಲಿ, ಹೊನ್ನಾವರ, ಅಂಕೋಲ, ಭಟ್ಕಳ, ಶಿರಸಿ ಮತ್ತು ಮುಂಡಗೋಡು ಗಳಲ್ಲಿ ಪ್ರಚಾರಾಂದೋಲನ ಕಾರ್ಯಕ್ರಮಗಳನ್ನು ನಡೆಸಿ, ಮೆರವಣಿಗೆಗಳು, ಬಹಿರಂಗ ಸಭೆಗಳು ನಡೆಸಿದ್ದರ ಜೊತೆಗೆ ಮನೆ-ಮನೆಗಳಿಗೆ ತೆರಳಿ ಕರಪತ್ರಗಳನ್ನು ಹಂಚಲಾಯ್ತು. ಜಿಲ್ಲಾದ್ಯಂತ ನೂರಕ್ಕೂ ಹೆಚ್ಚು ಬಹಿರಂಗ ಸಭೆಗಳನ್ನು ನಡೆಸಲಾಯಿತು. ಜಿಲ್ಲೆಯ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಈ ಕಾರ್ಯಕ್ರಮಗಳಲ್ಲಿ ಸೀತಾರಾಂ ಯೆಚೂರಿ ಯವರು ಬರೆದ ಪೆಟ್ರೋಲಿಯಂ ಬೆಲೆ ಏರಿಕೆಗೆ ಸಂಬಂಧಪಟ್ಟ ಪುಸ್ತಕವನ್ನು ಮಾರಾಟ ಮಾಡಲಾಯಿತು.

ಜಿಲ್ಲಾ ಮಟ್ಟದ ರ್‍ಯಾಲಿ

ಜುಲೈ 22 ರಂದು ಕಾರ್ಮಿಕರು, ಮಹಿಳೆಯರು, ರೈತರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ರ್‍ಯಾಲಿಯನ್ನು ಕಾರವಾರದಲ್ಲಿ ನಡೆಸಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ನಿತ್ಯಾನಂದ ಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ನಾಯ್ಕ, ಶಾಂತರಾಮ ನಾಯಕ್ ಮುಂತಾದವರು ಮಾತನಾಡಿದರು. ಸಮಾರಂಭದಲ್ಲಿ ಮಂಜುನಾಥ ಪುಲೆಕರ್, ಎಂ.ಬಿ.ನಾಯಕ್, ಮಾಧವ ಶೆಟ್ಟಿಗಾರ್, ತಿಲಕ್ ಗೌಡ, ಪಿ.ಜಿ. ಮಶಾಲ್ದಿ ಮುಂತಾದವರು ಪಾಲ್ಗೊಂಡಿದ್ದರು.

ಮಂಗಳೂರು: ಪಕ್ಷದ ನಗರ ಸಮಿತಿ ಆಶ್ರಯದಲ್ಲಿ ಜುಲೈ 29 ರಂದು ಬಹಿರಂಗ ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ||ಪಿ.ರಾಮಚಂದ್ರರಾವ್ ಮಾತನಾಡುತ್ತಾ ಕೇಂದ್ರ ಸರ್ಕಾರ ಸಾಮಾನ್ಯ ಜನತೆಯ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದರು. ವಿಮಾ ಕ್ಷೇತ್ರವನ್ನು ಖಾಸಗೀಕರಣ ಗೊಳಿಸುವುದನ್ನು ತೀವ್ರವಾಗಿ ವಿರೋಧಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಬಿ.ಮಾಧವ ಮಾತನಾಡುತ್ತಾ ಜನಪರವಾದ ನೀತಿ ರೂಪಿಸುವುದರಿಂದ ಸಂಯುಕ್ತ ರಂಗ ಬಲಪಡಿಸಬಹುದೆಂದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಮಾತನಾಡಿ ಲೋಕಪಾಲ್ ಮಸೂದೆ ಜಾರಿಗೆ ತಂದು ಭ್ರಷ್ಟಾಚಾರವನ್ನು ತಡೆಗಟ್ಟಬೇಕೆಂದರು. ಸಭೆಯಲ್ಲಿ ಜೆ.ಬಾಲಕೃಷ್ಣ ಶೆಟ್ಟಿ ಹಾಗೂ ವಸಂತ ಆಚಾರಿ ಮತ್ತಿತರರು ಪಾಲ್ಗೊಂಡಿದ್ದರು.

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಾದ್ಯಂತ ಸೈಕಲ್ ಜಾಥಾ ನಡೆಸಿ, ಕರಪತ್ರಗಳನ್ನು ಹಂಚುವುದರ ಮುಖಾಂತರ ಪ್ರಚಾರಾಂದೋಲನ ಕಾರ್ಯಕ್ರಮ ಆರಂಭಿಸಿ ಬ್ಲಾಕ್‌ವಾರು ಹಾಗೂ ಗ್ರಾಮವಾರು ಸಭೆ ಸಮಾರಂಭಗಳನ್ನು ನಡೆಸಿ ಪ್ರಚಾರಾಂದೋಲನದ ಮಹತ್ವವನ್ನು ಜನತೆಗೆ ವಿವರಿಸಿದ್ದಾರೆ. ಪ್ರಚಾರಾಂದೋಲನದ ನೇತೃತ್ವವನ್ನು ಮಲ್ಲಯ್ಯ ಜಾಲಹಳ್ಳಿ, ಅಮರೇಶ್, ಪಿ.ಗಿರಿಯಪ್ಪ, ಬಸವಲಿಂಗಪ್ಪ ಮುಂತಾದ ಸಂಗಾತಿಗಳು ವಹಿಸಿದ್ದರು.

ರಾಮದುರ್ಗ: ಬೆಳಗಾವಿಯ ರಾಮದುರ್ಗದಲ್ಲಿ ಜುಲೈ 15 ರಂದು ಬೃಹತ್ ಮತ ಪ್ರದರ್ಶನ ನಡೆಸಲಾಯಿತು. ಸುಮಾರು 500 ಮಂದಿ ಜನರ ಮೆರವಣಿಗೆಯು ಪಟ್ಟಣದ ವಿವಿಧ ಭಾಗಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ನಡೆಯಿತು. ನಂತರ ಸಭೆಯಲ್ಲಿ ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ವಿ.ಪಿ.ಮುರಳಿ ಹಾಗೂ ಗೇಬುಸಾಬ್ ಮಾತನಾಡಿದರು. ನಂತರ ತಹಶೀಲ್ದಾರರಿಗೆ ಮನವಿ ನೀಡಲಾಯಿತು.

ತುಮಕೂರು: ಜುಲೈ 15 ರಂದು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು 3 ಗಂಟೆಗಳ ಧರಣಿ ಸತ್ಯಾಗ್ರಹ ನಡೆಸಿದರು. ಇದಕ್ಕೆ ಮೊದಲು ನಗರದ ನಜರ್‌ಬಾದ್, ವೀರಸಾಗರ, ಜಯನಗರ, ಫಕೀರ್ ಪಾಳ್ಯ, ಪಿ.ಹೆಚ್.ಕಾಲೋನಿ ಮುಂತಾದ ಕಡೆಗಳಲ್ಲಿ ಬೀದಿ ಬದಿ ಸಭೆಗಳನ್ನು ನಡೆಸಲಾಯಿತು.

ಮಂಡ್ಯ: ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿ ಸಭೆಗಳನ್ನು ನಡೆಸಿ ಪ್ರಚಾರ ನಡೆಸಿ, ಕರಪತ್ರಗಳನ್ನು ಹಂಚಿ ಜುಲೈ 25 ರ ರಾಜ್ಯಮಟ್ಟದ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಭೆಗಳನ್ನು ನಡೆಸಲಾಯಿತು. ತಾಲ್ಲೂಕು ಕಾರ್ಯದರ್ಶಿ ಜಿ.ರಾಮಕೃಷ್ಣ ಮಾತನಾಡಿದರು. ನೆಲಮಾಕನ ಹಳ್ಳಿಯಲ್ಲಿ ನಡೆದ ಸಭೆಯಲ್ಲಿ ಎನ್.ಎಲ್.ಭರತ್‌ರಾಜ್, ನಂದೀಶ್, ಶಿವಣ್ಣ ಮತ್ತು ಪಂಚಾಯತ್ ಸದಸ್ಯರಾದ ಬಸವೇಗೌಡರು ಪಾಲ್ಗೊಂಡಿದ್ದರು.

ಟೊಮೊಟೊ ಬೆಳೆಗಾರರ ಹೋರಾಟ ಸಮಿತಿ ರಚನೆ

ಕೋಲಾರ: ವಿಪರೀತವಾದ ಬಂಡವಾಳ ಹಾಕಿ ಟೊಮೋಟೋ ಬೆಳೆದಿರುವ ರೈತರು ಕೆ.ಜಿ. ಟೊಮೋಟೋವನ್ನು 20-30 ಪೈಸೆಗೆ ಮಾರಾಟ ಮಾಡುವ ದುಸ್ಥಿತಿ ಬಂದಿದ್ದು, ಈ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವ ನಿಟ್ಟಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಟಮೋಟೋ ಬೆಳೆಗಾರರ ಹೋರಾಟ ಸಮಿತಿಯನ್ನು ರಚಿಸಲಾಯಿತು.

ಆಗಸ್ಟ್ ಒಂದರಂದು ಚಿಂತಾಮಣಿಯ ಪ್ರವಾಸಿ ಮಂದಿರದಲ್ಲಿ ಸೇರಿದ್ದ ಜಿಲ್ಲಾ ಟಮೋಟೋ ಬೆಳೆಗಾರರ ಸಭೆಯನ್ನು ಕರೆಯಲಾಗಿತ್ತು. ಪಕ್ಷಾತೀತವಾಗಿ ಪಾಲ್ಗೊಂಡಿದ್ದ ಸಭೆಯಲ್ಲಿ 27 ಜನರ ಜಿಲ್ಲಾ ಮಟ್ಟದ ಒಂದು ಹೋರಾಟ ಸಮಿತಿಯನ್ನು ರಚಿಸಲಾಯಿತು.

ಹೋರಾಟ ಸಮಿತಿಯ ಪ್ರಥಮ ಹಂತದ ಹೋರಾಟದ ಅಂಗವಾಗಿ ಆಗಸ್ಟ್ 14 ರಂದು ಮುಖ್ಯ ಮಂತ್ರಿಗಳಿಗೆ, ಮಂತ್ರಿಗಳಿಗೆ ಹಾಗೂ ಪ್ರತಿಪಕ್ಷಗಳ ಮುಖಂಡರಿಗೆ ಮನವಿ ಸಲ್ಲಿಸಲು ನಿಯೋಗವೊಂದು ತೆರಳಲಿದೆ.

ಮುಖ್ಯ ಬೇಡಿಕೆಗಳು

1. ರೈತರು ಬೆಳೆಯುವ ಕೆ.ಜಿ. ಟಮೋಟೊಗೆ ಕನಿಷ್ಟ 2 ರೂ. ಬೆಲೆ ನಿಗದಿ ಮಾಡಿ. ಸರ್ಕಾರವೇ ಖರೀದಿಸಬೇಕು.
2. ಪ್ರತಿ ಎಕರೆಗೆ 20 ಸಾವಿರ ನಷ್ಟ ಪರಿಹಾರ ನೀಡಬೇಕು.
3. ಕೃಷಿ ಮಾರುಕಟ್ಟೆಯಲ್ಲಿ ಅಕ್ರಮವಾಗಿ ಶೇ 10 ಕಮಿಷನ್ ವಸೂಲಿ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು.

ಆಟೋಚಾಲಕನ ಕೊಲೆ: ಸಿಐಟಿಯು ಖಂಡನೆ

ಬಳ್ಳಾರಿ: ಹಗರಿಬೊಮ್ಮನ ಹಳ್ಳಿ ತಾಲ್ಲೂಕಿನ ಕೊಟ್ಟೂರಿನ ಯಾಳ್ಯದ ಹಳ್ಳದಲ್ಲಿ ಇತ್ತೀಚೆಗೆ ವಲಿ ಸಾಹೇಬ್ ಎಂಬ ಆಟೋ ಚಾಲಕ ಕೊಲೆಯಾಗಿರುವುದನ್ನು ಹಗರಿಬೊಮ್ಮನಹಳ್ಳಿ ಆಟೋಚಾಲಕರ ಸಂಘ(ಸಿಐಟಿಯು) ಖಂಡಿಸಿದೆ.

ಆಸ್ತಿಯ ವಿಷಯವಾಗಿ ಬಾಡಿಗೆಗೆ ಕೊಲೆಗಾರರಿಂದ ಈತನ ಕೊಲೆಯಾಗಿದೆ ಎಂದಿರುವ ಆಟೋಚಾಲಕರ ಸಂಘ ಇತ್ತೀಚಿನ ದಿನಗಳಲ್ಲಿ ಇಂತಹ ಘಟನೆಗಳು ಪಟ್ಟಣ ಪ್ರದೇಶಗಳಲ್ಲಿ ನಡೆಯುತ್ತಿದ್ದು ಈಗ ಗ್ರಾಮಾಂತರ ಪ್ರದೇಶಗಳಿಗೆ ಈ ಪಿಡುಗು ಹಬ್ಬಿರುವುದಕ್ಕೆ ಆತಂಕ ವ್ಯಕ್ತಪಡಿಸಿದೆ. ಕೊಲೆಗಾರರನ್ನು ಕೂಡಲೇ ಬಂಧಿಸಿ, ಕೊಲೆಯಾದವನ ಕುಟುಂಬಕ್ಕೆ ಪರಿಹಾರ ಒದಗಿಸಬೇಕೆಂದು ಸಿಐಟಿಯು ಒತ್ತಾಯಿಸಿದೆ.

ನಿಷೇಧಾಜ್ಞೆ ಜಾರಿಗೆ ಸಿಐಟಿಯು ಖಂಡನೆ

ಭಟ್ಕಳ: ಅನಂತವಾಡಿ ಪೃಥ್ವೀಶ ಟೈಲ್ ಕಾರ್ಖಾನೆಯ ಕಾರ್ಮಿಕರ ಕೈಗಾರಿಕಾ ವಿವಾದವು ಕಳೆದ 4 ತಿಂಗಳಿಂದ ನೆನೆಗುದಿಗೆ ಬಿದ್ದಿದ್ದು ಘನ ಸರಕಾರದ ಕಾರ್ಮಿಕ ಇಲಾಖೆ ಸಂವಿಧಾನ ಮಾತುಕತೆ ಬಗ್ಗೆ ಸ್ಪಷ್ಟ ಧೋರಣೆ ತಾಳದೆ ಇದ್ದುದರಿಂದ ಕೆಲಸಕ್ಕೆ ಬಂದ ಕಾರ್ಮಿಕರಿಗೆ ಕೆಲಸ ನಿರಾಕರಿಸಿ ಬೇರೆ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿ ಕಾರ್ಖಾನೆ ಮಾಲಿಕರಾದ ಆರ್.ಎಸ್.ಶೆಟ್ಟಿಯವರು ಅನಫೇರ್ ಲೇಬರ್ ಪ್ರಾಕ್ಟೀಸ್ ನಿರ್ಬಂಧವಿಲ್ಲದೇ ಮುಂದುವರಿಯುತ್ತಿದ್ದಾರೆ.

ಬೇರೆ ಜನರನ್ನು ತಂದು ಉತ್ಪಾದನೆಯನ್ನು ಮಾಡುತ್ತಿದ್ದ, ಶಾಂತಿಯುತ ಚಳುವಳಿ ನಡೆಸುವ ಬಡ ಕಾರ್ಮಿಕರನ್ನು ಪೋಲಿಸರ ಮುಖಾಂತರ ಬಾಡಿಗೆ ಗೂಂಡಾಗಳ ಮುಖಾಂತರ ಬೆದರಿಕೆ ಹಾಕುತ್ತಿದ್ದು, ಪೋಲೀಸ್ ಇಲಾಖೆಯೂ ಸಹ ಅನ್ಯಾಯಕ್ಕೆ ಒಳಗಾದ ಕಾರ್ಮಿಕರನ್ನು ರಕ್ಷಿಸುವ ಬದಲು ಮಾಲಿಕ ವರ್ಗದ ಹಿತ ಕಾಪಾಡಲು ಮುಂದಾಗಿದೆ.

ಈ ಸಮಸ್ಯೆ ಉತ್ತರ ಕನ್ನಡ ಜಿಲ್ಲಾ ಮತ್ತು ರಾಜ್ಯದ ಇತರ ಔದ್ಯಮಿಕ ಕೇಂದ್ರಗಳಲ್ಲಿಯೂ ಪ್ರತಿಧ್ವನಿಸಿದ್ದು ಇಡೀ ರಾಜ್ಯಾದ್ಯಂತ ಹೋರಾಟ ಕಾರ್ಯಕ್ರಮ ರೂಪುಗೊಳ್ಳಲಿದೆ. ಜುಲೈ 22 ರಂದು ಕಾರವಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಪತ್ರ ಸಹ ಸಲ್ಲಿಸಲಾಯಿತು.

ಕಾರ್ಮಿಕರ ಶಾಂತಿಯುತ ಚಳುವಳಿಯನ್ನು ಗೊಂದಲಮಯ ಗೊಳಿಸಲು ಹೊನ್ನಾವರ ತಹಶೀಲ್ದಾರರು ಅನಾವಶ್ಯಕವಾಗಿ ಮತ್ತೆ 144 ಕಲಂ ಪ್ರಕಾರ ನಿಷೇದಾಜ್ಞೆ ಹೇರಿದ್ದು ಖಂಡನೀಯವಾಗಿದೆ. ಈ ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ ನೀತಿ ವಿರುದ್ಧ ಜುಲೈ 28 ರಂದು ಹೊನ್ನಾವರ ತಹಶೀಲ್ದಾರರ ಕಛೇರಿ ಎದುರು ನೊಂದ ಕಾರ್ಮಿಕರು ಮತ್ತು ಜಿಲ್ಲಾ ಹಂಚು ಕಾರ್ಮಿಕ ಸಂಘದ ಧುರೀಣರು ಧರಣಿ ಸತ್ಯಾಗ್ರಹ ನಡೆಸಲಿದ್ದು ಈ ವಿವಾದವನ್ನು ಗಂಭೀರವಾಗಿ ಪರಿಗಣಿಸದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದೆಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಲಕಗೌಡ ಮತ್ತು ಸಿಐಟಿಯು ಜಿಲ್ಲಾ ಸಮಿತಿ ಕಾರ್ಯದರ್ಶಿ ಸುಭಾಶ್ ಕೊಪ್ಪಿಕರ ತಿಳಿಸಿದ್ದಾರೆ.

ಅಕ್ರಮವಾಗಿ ಮನೆಗಳ ನೆಲಸಮ ಪರಿಹಾರಕ್ಕೆ ರೈತ ಸಂಘದ ಒತ್ತಾಯ

ಬೆಂಗಳೂರು : ಜುಲೈ 28 ರಂದು ಬೆಳಗಿನ ಜಾವ 4 ಗಂಟೆಯಿಂದ ಕನಕಪುರ ರಸ್ತೆಯ ಸುಬ್ರಮಣ್ಯಪುರದ ನೂರಾರು ನಿವಾಸಿಗಳು ಸರ್ಕಾರ ಹಕ್ಕು ಪತ್ರ ನೀಡಿ, ಮನೆಗಳನ್ನು ಕಟ್ಟಿ ವಾಸ ಮಾಡ ತೊಡಗಿದ್ದಾಗ ಮತ್ತೆ ಆ ಮನೆಗಳನ್ನು ನೆಲಸಮ ಮಾಡುವ ಕ್ರಮವನ್ನು ವಿರೋಧಿಸಿ ಮುಖ್ಯ ಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಮನವಿ ಪತ್ರ ಸ್ವೀಕರಿಸಿದ ಮುಖ್ಯ ಮಂತ್ರಿಗಳು ನೀಡಿದ ಮನೆಗಳನ್ನು ಕೆಡುವುದನ್ನು ನಿಲ್ಲಿಸಲಾಗಿದೆ ಎಂಬ ಭರವಸೆಯೊಂದಿಗೆ ಹಿಂದಿರುಗಿದ ವರದಿಯನ್ನು ಕಳೆದ ಸಂಚಿಕೆಯಲ್ಲಿ ಓದಿದ್ದೀರಿ ಆದರೆ..

ಮುಖ್ಯಮಂತ್ರಿಗಳ ಭರವಸೆಯಿಂದ ನಿಟ್ಟುಸಿರು ಬಿಟ್ಟು, ಇಡೀ ರಾತ್ರಿಯಲ್ಲಿ ನಿದ್ರೆಗೆಟ್ಟು, ಮುಂಜಾನೆ 20. ಕಿ.ಮಿ. ಮೆರವಣಿಗೆ ನಡೆಸಿ ದಣಿದಿದ್ದರಿಂದ ವಿಶ್ರಾಂತಿ ಪಡೆಯುವ ಆಸೆಯಿಂದ ನಿವಾಸಿಗಳು ತಮ್ಮ ಮನೆಗಳಿಗೆ ಹಿಂದಿರುಗಿದಾಗ ತಮ್ಮ ಮನೆಗಳು ಕಾಣೆಯಾಗಿರುವುದನ್ನು ಕಂಡು ಆಘಾತವಾಯ್ತು. ಸುಮಾರು 200 ಮನೆಗಳನ್ನು ಹೊಡೆದು ಹಾಕಿದ್ದರು. ಅನಂತರ 29 ಮತ್ತು 30 ರಂದು ಹಗಲು ರಾತ್ರಿ ಎರಡು ದಿವಸ ಪುನಃ ಮುಖ್ಯಮಂತ್ರಿಯವರ ಮನೆ ಮುಂದೆ ಹೆಂಗಸರು, ಮಕ್ಕಳಾದಿಯಾಗಿ ಧರಣಿ ಸತ್ಯಾಗ್ರಹವನ್ನು ಪಿ.ಜಗನ್ನಾಥ್ ರವರ ನೇತೃತ್ವದಲ್ಲಿ ನಡೆಸಲಾಯಿತು.

ಜುಲೈ 31 ರಂದು ಕಂದಾಯ ಸಚಿವ ಜಿಗಜಿಣಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಅಲ್ಲಿ ಮನೆ ಒಡೆಯುವುದು ಅಕ್ರಮ ಎಂದು ಗೊತ್ತಾಗಿ ಕೂಡಲೇ ಸರ್ವೆ ಮಾಡಿ ಇದರ ಬಗ್ಗೆ ವರದಿ ಕೊಡುವಂತೆ ಆದೇಶಿಸಿದರು. ಇಲ್ಲಿ ಮುಖ್ಯವಾಗಿ ಸರ್ವೆ ನಂ 6 ರಲ್ಲಿ ಕೃಷ್ಣಾ ಮಿಲ್ ಮಾಲೀಕರಾದ ಯಾದಾಳಂ ಸುಬ್ಬಯ್ಯ ಶೆಟ್ಟರ ಜಮೀನಿದ್ದು ಇದನ್ನು ಕೆನಲ್ ಸೊಸೈಟಿಯವರಿಗೆ ಮಾರಾಟ ಮಾಡಿದ್ದು ಇದರಲ್ಲಿ ಸೈಟು ಮಾಡಲು ಪ್ರಯತ್ನ ಮಾಡಿ ಇದಕ್ಕೆ ದಾರಿ 64ನೇ ನಂಬರಿನಲ್ಲಿರಬೇಕು, ಆದ್ದರಿಂದ ಸರಕಾರದ ನಗರಾಭಿವೃದ್ಧಿ ಸಚಿವ ಅನಂತ್ ನಾಗ್ ಮತ್ತು ಬಿ.ಡಿ.ಎ. ಇವೆರೆಲ್ಲರು ಇದರಲ್ಲಿ ಒಳಗಾಗಿರುವುದು ಸ್ಪಷ್ಟವಾಗುತ್ತದೆ.

ನಿರಾಶ್ರಿತರಿಗೆ ಕೂಡಲೇ ಸರಕಾರ ವತಿಯಿಂದ ಮನೆಗಳನ್ನು ಕಟ್ಟಿಸಿಕೊಟ್ಟು ಅವರಿಗೆ ಪರಿಹಾರ ಕೊಡಬೇಕು, ಟಾಸ್ಕ್‌ಫೋರ್ಸ್ ಕಮಿಟಿ ಪಿಐಜಿ ಮುಖಂಡ ಮುನಿಕೃಷ್ಣರನ್ನು ಅಮಾನತು ಮಾಡಿ, ಬಿ.ಡಿ.ಎ. ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಇದರ ಹೊಣೆ ಹೊತ್ತು ನಗರಾಭಿವೃದ್ಧಿ ಸಚಿವ ಅನಂತನಾಗ್ ರಾಜೀನಾಮೆ ನೀಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ. ಇದಕ್ಕೆ ತಪ್ಪಿದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಅದು ಎಚ್ಚರಿಸಿದೆ.

ಮನೆಗಳು ನೆಲಸಮವಾಗಿರುವ ದೃಶ್ಯವನ್ನು ವೀಕ್ಷಿಸುತ್ತಿರುವ ಕಂದಾಯ ಸಚಿವರು.



ಪೋಲೀಸ್ ಠಾಣೆಯಲ್ಲಿ ಅನುಮಾನಾಸ್ಪದ ಸಾವು: ಬೃಹತ್ ಪ್ರತಿಭಟನೆ

ಬಳ್ಳಾರಿ : ಬಳ್ಳಾರಿ ನಗರದ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ತಿರಿವಾರ ಗ್ರಾಮದ ಸುಂಕಮ್ಮಳು ಸಾವಿಗೀಡಾಗಿರುವುದನ್ನು ಉನ್ನತಮಟ್ಟದ ನ್ಯಾಯಾಂಗ ತನಿಖೆಗೆ ಒಳಪಡಿಸುವಂತೆ ಒತ್ತಾಯಿಸಿ ಆಗಸ್ಟ್ 1 ರಂದು ಕುರುಗೋಡಿನಲ್ಲಿ ಸಿಪಿಐ(ಎಂ) ಹಾಗೂ ಬೋವಿ ಸಂಘದ ನೇತೃತ್ವದಲ್ಲಿ 500 ಕ್ಕೂ ಹೆಚ್ಚು ಜನರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸಿಪಿಐ(ಎಂ) ಪಕ್ಷದ ಮುಖಂಡರಾದ ಪ್ರಸನ್ನಕುಮಾರ್ ಮಾತನಾಡಿ ಸಾವಿಗೀಡಾದ ಸುಂಕಮ್ಮಳ ಕುಟುಂಬಕ್ಕೆ 5 ಲಕ್ಷ ಪರಿಹಾರ ನೀಡಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು. ಈ ಪ್ರಕರಣದಲ್ಲಿ ಭಾಗಿಯಾಗಿರುವ ವೃತ್ತಿ ನಿರೀಕ್ಷಕರಾದ ಪಿ.ಟಿ. ಸುದ್ದಿಯವರನ್ನು ಅಮಾನತು ಗೊಳಿಸಿರುವುದನ್ನು ಇದೇ ಸಂದರ್ಭದಲ್ಲಿ ಸ್ವಾಗತಿಸಿದರು. ಈ ಪ್ರತಿಭಟನೆಯಲ್ಲಿ ವಿ.ಎಂ. ಶಿವಶಂಕರ್, ಗಾದಿ ಲಿಂಗಪ್ಪ, ರಾಮಣ್ಣ, ಕೆ.ಬಸವರಾಜ್, ರಾಜಾಸಾಬು, ಎರ್ರಿ ಸ್ವಾಮಿ ಅಂಬಣ್ಣ ಮುಂತಾದವರು ಪಾಲ್ಗೊಂಡಿದ್ದರು.

ಬೀಡಿ ಕಾರ್ಮಿಕರ ಸಭೆ

ಮಂಗಳೂರು: ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಇರುವೈಲು ಗ್ರಾಮದ ಬೀಡಿ ಮಜೂರರ ಸಭೆಯು ಪದ್ಮನಾಭ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರುಗಿತು. ಈ ಸಭೆಗೆ ಮುಖ್ಯ ಅತಿಥಿಯಾಗಿ ಸಂಘದ ಕಾರ್ಯದರ್ಶಿ ಕಾಂ|| ಸದಾಶಿವದಾಸ್ ಭಾಗವಹಿಸಿ ಸಂಘಟನೆಯ ಬಗ್ಗೆ ವಿವರಿಸುತ್ತಾ ಬೀಡಿ ಕಾರ್ಮಿಕರಿಗೆ ಸಿಐಟಿಯು ಮುಖಂಡರ ಹಾಗೂ ಬೀಡಿ ಮಾಲಕರ ಒಪ್ಪಂದದ ಪ್ರಕಾರ ಏಪ್ರಿಲ್ 1-97 ರಿಂದ ಸಾವಿರ ಬೀಡಿಗೆ 40 ರೂ. ಮಜೂರಿ ಜಾರಿಯಾಗಿರುತ್ತದೆ. ಇದರಲ್ಲಿ 3.33 ಪಿ.ಎಫ್(ಪ್ರಾವಿಡೆಂಟ್ ಫಂಡ್) ಕಟ್ಟಾಗಿ 36.67 ಕಾರ್ಮಿಕರ ಕೈಗೆ ಸಿಗಬೇಕಾದ ಮಜೂರಿ ಆದರೆ ಮಾಲಕರ ಮತ್ತು ಕಾರ್ಮಿಕರ ಮಧ್ಯೆ ಇರುವ ಕಂಟ್ರಾಕ್ಟ್‌ದಾರರು(ಮಧ್ಯವರ್ತಿಗಳು) ಈ ಮಜೂರಿಯಲ್ಲಿ ತೀರ ಕಡಿಮೆ ಕೊಟ್ಟು ಕಾರ್ಮಿಕರನ್ನು ಶೋಷಣೆ ಮಾಡುವುದು ಒಂದು ದೊಡ್ಡ ಅನ್ಯಾಯವಾಗಿದೆ ಎಂದರು. ಕಾರ್ಮಿಕರ ಕೈಯಲ್ಲಿ ಲಾಗ್ ಪುಸ್ತಕ ಕೂಡದೆ ಇರುವುದು, ಕೊಟ್ಟರೂ ವರ್ಷ ಗಟ್ಟಲೆ ಬೀಡಿ ಬರೆಯದಿರುವುದು ಈ ರೀತಿಯ ಶೋಷಣೆಯನ್ನು ಕಂಟ್ರಾಕ್ಟ್‌ದಾರರು ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಕರ್ನಾಟಕದಲ್ಲಿ ಕಳೆದ ವಾರ

— ಜುಲೈ 31 —

- ವಿದ್ಯುತ್ ದರ ಏರಿಕೆ ವಿಚಾರದಲ್ಲಿ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಪ್ರತಿಪಕ್ಷಗಳ ಧರಣಿ ಅಂತ್ಯ.
- ವೀರಪ್ಪನ್ ಒತ್ತೆಯಿಟ್ಟು ಕೊಂಡಿರುವ ಎಲ್ಲಾ ಅರಣ್ಯ ಇಲಾಖೆ ಸಿಬ್ಬಂದಿಯನ್ನು ರಕ್ಷಿಸಲು ಪ್ರಯತ್ನ ನಡೆದಿದೆ, ವೀರಪ್ಪನ್‌ಗೆ ಶರಣಾಗಿಲ್ಲ ಎಂದು ಮುಖ್ಯಮಂತ್ರಿಗಳು

— ಆಗಸ್ಟ್ 1 —

- ಜಲಮಂಡಳಿಯಲ್ಲಿ ನಡೆದಿದೆ ಯೆನ್ನಲಾದ ಅವ್ಯವಹಾರದ ವಿಚಾರಣೆಗೆ ಉನ್ನತ ಮಟ್ಟದ ಸಮಿತಿ ರಚಿಸುವಂತೆ ವಿಧಾನ ಮಂಡಲದ ವಿಷಯ ಸಮಿತಿ ಶಿಫಾರಸು.
- ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಪ್ರಯುಕ್ತ ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದ ಸಾಲದ ಒಟ್ಟು ಬಾಕಿಯ ಕಂತನ್ನು ಮರುಪಾವತಿ ಮಾಡುವ ರೈತರಿಗೆ ಸುಸ್ತಿ ಬಡ್ಡಿ ಮನ್ನಾ ಎಂದು ಬ್ಯಾಂಕಿನ ಉಪಾಧ್ಯಕ್ಷರು.
- ಉಡುಪಿ ಅಷ್ಟಮಠಗಳಲ್ಲೊಂದಾದ ಪುತ್ತಿಗೆ ಮಠದ ಸ್ವಾಮಿಯವರ ಅಮೆರಿಕಾ ಪ್ರವಾಸದ ಕಾರಣ ಅವರನ್ನು ಬಹಿಷ್ಕರಿಸುವುದಾಗಿ ಇನ್ನೊಂದು ಮಠದ(ಕಾಣಿಯೂರು ಮಠದ) ಸ್ವಾಮಿಗಳ ಬೆದರಿಕೆ.

— ಆಗಸ್ಟ್ 2 —

- ಕೆ.ಆರ್.ಎಸ್., ತುಂಗಭದ್ರ ಭರ್ತಿ ಆಲಮಟ್ಟಿ ಭರ್ತಿಯಿಂದ ಸುತ್ತಲಿನ ಗ್ರಾಮಸ್ಥರಿಗೆ ಪ್ರವಾಹ ಭೀತಿ.
- 'ಸೈಬರ್ ಮಧ್ಯ ಸಂಘ' ದ ಆಹ್ವಾನದ ಮೇಲೆ ತತ್ವ ಪ್ರಚಾರಕ್ಕೆ ವಿದೇಶಕ್ಕೆ ಹೋಗುತ್ತಿರುವುದರಿಂದ ಶತ ಶತಮಾನಗಳಿಂದ ಬಂದ ಬಾಲ್ಯ ವಿವಾಹ, ಬಾಲ ಸನ್ಯಾಸ ಮೊದಲಾದ ಪದ್ಧತಿಗಳನ್ನು ನೂತನ ವೈಚಾರಿಕ ಕ್ರಾಂತಿಯಿಂದ ತಿರಸ್ಕರಿಸುತ್ತಿರುವ ಸಂದರ್ಭದಲ್ಲಿ ಈ ವಿದೇಶ ಯಾತ್ರೆಯ ಬಗ್ಗೆ ಅಪಪ್ರಚಾರಕ್ಕೆ ಕಿವಿಕೊಡಬಾರದೆಂದು ಪುತ್ತಿಗೆ ಮಠದ ಸ್ವಾಮಿಗಳ ಪತ್ರಿಕಾ ಹೇಳಿಕೆ. ಪಾಶ್ಚಿಮಾತ್ಯ ದೇಶಗಳು ಭಾರತ ದೇಶದಂತೆ ಕರ್ಮ ಭೂಮಿಗಳಲ್ಲ, ಭೋಗ ಭೂಮಿಗಳು, ಅಲ್ಲಿಗೆ ಸನ್ಯಾಸಿಗಳು ಹೋಗುವುದು ನಿಷಿದ್ಧ ಎಂದು ಫಲಿಮಾರು ಮಠಾಧೀಶರು.

— ಆಗಸ್ಟ್ 3 —

- ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ ಅಭಿವೃದ್ಧಿ ನಿಗಮದ ಕಿಯೋನಿಕ್ಸ್ ತನ್ನ ಮೂಲ ಉದ್ದೇಶವನ್ನು ಸಾಕಾರ ಗೊಳಿಸುವಲ್ಲಿ ಸಂಪೂರ್ಣವಾಗಿ ಸೋತಿದೆ ಎಂದು ಶಾಸಕಾಂಗದ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಟೀಕೆ.

— ಆಗಸ್ಟ್ 4 —

- ಕೋಲಾರದ ಟೇಕಲ್ ಬಳಿ ಮಧುರೈ - ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಸಣ್ಣ ಸ್ಫೋಟ - 17 ಮಂದಿಗೆ ಗಾಯ.

— ಆಗಸ್ಟ್ 5 —

- ಸೀಮೆಎಣ್ಣೆ ವಿತರಣೆಯಲ್ಲಿರುವ ಅಕ್ರಮ, ಅವ್ಯವಸ್ಥೆಗಳನ್ನು ಸುಧಾರಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು ಸ್ವತಃ ವಿಧಾನಸಭಾಧ್ಯಕ್ಷರಿಂದ ಸರಕಾರಕ್ಕೆ ತರಾಟೆ.

— ಆಗಸ್ಟ್ 6 —

- ಆಲಮಟ್ಟಿ ಭರ್ತಿ - 36 ಹಳ್ಳಿಗಳು, ಬೀಳಗಿ ತಾಲ್ಲೂಕು ಜಲಾವೃತ್ತ.
- ಕಾಡುಗಳ್ಳ ವೀರಪ್ಪನಿಂದ ಒಬ್ಬ ಒತ್ತೆಯಾಳುವಿನ ಬಿಡುಗಡೆ. ಇತರರ ಬಿಡುಗಡೆ, ತನ್ನ ಶರಣಾಗತಿಗೆ ಹೊಸ ಶರತ್ತುಗಳು.



ರಾಷ್ಟ್ರೀಯ ವಿಮೋಚನೆಯ ಆಂದೋಲನ ಕಾಂಗ್ರೆಸ್ಸಿನ ಸ್ಥಾಪನೆಯೊಂದಿಗೆ ಆರಂಭವಾದುದಲ್ಲ, ಭಾರತಕ್ಕೆ ಈಸ್ಟ್ ಇಂಡಿಯಾ ಕಂಪೆನಿಯ ಪ್ರವೇಶದೊಂದಿಗೇ ಅದು ಆರಂಭವಾಯಿತು. ಮತ್ತು ನಮಗೆ ಸ್ವಾತಂತ್ರ್ಯ ದೊರೆತದ್ದು ಕೇವಲ ಕಾಂಗ್ರೆಸ್ಸಿನಿಂದಾಗಿಯಲ್ಲ. ಸ್ವಾತಂತ್ರ್ಯ ಹೋರಾಟಕ್ಕೆ ಅಮೂಲ್ಯ ಕಾಣಿಕೆ ನೀಡಿದ ಅಸಂಖ್ಯ ವ್ಯಕ್ತಿಗಳನ್ನು, ಶಕ್ತಿಗಳನ್ನು ಸ್ವತಃ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಇಲ್ಲಿ ನೆನಪಿಸುತ್ತಿದ್ದಾರೆ.

ಸ್ವಾತಂತ್ರ್ಯ ಸಮರದ ಮಹಾಪ್ರವಾಹದ ಅಸಂಖ್ಯ ತೊರೆಗಳನ್ನು ಸ್ಮರಿಸಿಕೊಳ್ಳಬೇಕಾದ ಸಮಯವಿದು ....

ಈ ಆಗಸ್ಟ್ 15 ರಂದು ಇಡೀ ದೇಶ ಸ್ವಾತಂತ್ರ್ಯದ 50 ವಾರ್ಷಿಕೋತ್ಸವವನ್ನು ಆಚರಿಸುತ್ತದೆ. ದೇಶದ ಎಲ್ಲಾ ರಾಜಕೀಯ ಶಕ್ತಿಗಳು ಈ ಆಚರಣೆಗಳಲ್ಲಿ ಭಾಗವಹಿಸುತ್ತವೆ. ಭಾರತದ ಎಲ್ಲಾ ಜನ ವಿಭಾಗಗಳನ್ನು ಅಣಿನೆರಸಿ ಸ್ವಾತಂತ್ರ್ಯ ಹೋರಾಟಕ್ಕೆ ತಂತಮ್ಮ ಕಾಣಿಕೆ ನೀಡಿದ ಎಲ್ಲಾ ತೊರೆಗಳನ್ನು ಅವರು ನೆನಪಿಸಿಕೊಳ್ಳುವಂತೆ ಮಾಡಬೇಕಾದ ಸಂದರ್ಭವಿದು.

ನಗುನಗುತ್ತಾ ನೇಣುಗಂಬವೇರಿದ, ಬ್ರಿಟಿಶ್ ಸಾಮ್ರಾಜ್ಯಶಾಹಿ ಗುಂಡುಗಳನ್ನು ಎದುರಿಸಿದ, ಅಂಡಮಾನ್ ಸೆಲ್ಯೂಲರ್ ಜೈಲಿನಂತಹ ಭಯಾನಕ ಜೈಲುಗಳಲ್ಲಿ ಇಡೀ ಬದುಕನ್ನೇ ಕಳೆದ, ಕಾಂಗ್ರೆಸ್ ನೇತೃತ್ವದಲ್ಲಿ ಸತ್ಯಾಗ್ರಹ ನಡೆಸಿದ ಸಾವಿರ-ಸಾವಿರ ಮಂದಿಯ ಅಪಾರ ತ್ಯಾಗಗಳನ್ನು ಸ್ಮರಿಸಿಕೊಳ್ಳಬೇಕಾದ ಸಂದರ್ಭವಿದು. ಇವೆಲ್ಲಾ ಸೇರಿದ ಸ್ವಾತಂತ್ರ್ಯ ಹೋರಾಟದ ಆಂದೋಲನ ಈ ದೇಶದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಬುಡವನ್ನೇ ಅಲ್ಲಾಡತೊಡಗಿಸಿತು. ಬ್ರಿಟಿಶರು ಆರಂಭದಿಂದಲೇ ಜನಗಳನ್ನು ಧರ್ಮದ ಆಧಾರದಲ್ಲಿ ಒಡೆದು ತಮ್ಮ ಆಳ್ವಿಕೆಯನ್ನು ಶಾಶ್ವತಗೊಳಿಸಲು ಪ್ರಯತ್ನಿಸಿದ್ದಲ್ಲದೆ, ಹೆಚ್ಚಿನ ರಾಜ-ಮಹಾರಾಜರುಗಳಿಗೆ ತಮ್ಮ ಲೂಟಿಯಲ್ಲಿ ಒಂದು ಪಾಲು ನೀಡಿ ಅವರನ್ನು ತಮ್ಮ ಬಾಲಂಗೋಚಿಯಾಗಿ ಮಾಡಿಕೊಂಡಿದ್ದರು. ಆದರೆ ಸ್ವಾತಂತ್ರ್ಯ ಆಂದೋಲನ ನಮ್ಮ ಜನಗಳಲ್ಲಿ ದೇಶಪ್ರೇಮ, ಧರ್ಮನಿರಪೇಕ್ಷತೆ ಹಾಗೂ ರಾಷ್ಟ್ರೀಯ ಐಕ್ಯತೆಯ ಭಾವನೆಗಳನ್ನು ತುಂಬಿ ಬ್ರಿಟಿಶರ ಆಟಗಳು ಸಾಗದಂತೆ ಮಾಡಿತು.

ರಾಷ್ಟ್ರೀಯ ವಿಮೋಚನೆಯ ಆಂದೋಲನ ಕಾಂಗ್ರೆಸ್‌ನ ಸ್ಥಾಪನೆಯಿಂದೇನೂ ಆರಂಭವಾದುದಲ್ಲ. ಆ ಹೋರಾಟ ಭಾರತದೊಳಗೆ ಈಸ್ಟ್ ಇಂಡಿಯಾ ಕಂಪೆನಿಯ ಪ್ರವೇಶದೊಂದಿಗೇ ಆರಂಭವಾಯಿತು. ಹಲವೆಡೆ ರೈತರ ಅಸಂತೃಪ್ತಿ ಭುಗಿಲೆದ್ದು ಕೊನೆಗೆ 1857 ರಲ್ಲಿ ಮೊದಲ ಸ್ವಾತಂತ್ರ್ಯ ಯುದ್ಧ ನಡೆಯಿತು. ಇದರಲ್ಲಿ ರೈತರಷ್ಟೇ ಅಲ್ಲ, ಸೈನಿಕರೂ ಭಾಗವಹಿಸಿ ಬ್ರಿಟಿಶ್ ಆಳರಸರಿಗೆ ಸವಾಲೆಸೆದರು. ಆದರೆ ಈ ಸ್ವಾತಂತ್ರ್ಯ ಯುದ್ಧ ವಿಫಲವಾಯಿತು. ಏಕೆಂದರೆ ಇದಕ್ಕೆ ಊಳಿಗಮಾನ್ಯ ಪ್ರಭುಗಳು ನೇತೃತ್ವ ನೀಡಿದ್ದು ಅದರಲ್ಲಿ ಬಹಳ ತಪ್ಪುಗಳಾದವು. ಆದರೂ ಈ ಹೋರಾಟ ಅಚ್ಚಳಿಯದ ಪ್ರಭಾವ ಬೀರಿತು. ಬ್ರಿಟಿಶರು ಕೊನೆಗೂ ಈ ಬಂಡಾಯವನ್ನು ದಮನಿಸುವಲ್ಲಿ ಯಶಸ್ವಿಯೇನೋ ಆದರು. ಆದರೆ ತಮ್ಮ ವಸಾಹತುಶಾಹೀ ಯಜಮಾನಿಕೆಯ ಕಾರ್ಯತಂತ್ರವನ್ನು ಅವರು ಬದಲಿಸಬೇಕಾಗಿ ಬಂತು. ಈಸ್ಟ್ ಇಂಡಿಯಾ ಕಂಪೆನಿಯಿಂದ ಬ್ರಿಟಿಶ್ ಸರಕಾರವೇ ಸ್ವತಃ ಆಡಳಿತ ವಹಿಸಿಕೊಂಡು ಪಾಳೆಯಗಾರಿ ಪ್ರಭುಗಳಿಗೆ ಹಲವಾರು ರಿಯಾಯ್ತಿಗಳನ್ನು ಕೊಟ್ಟು ಅವರ ಸಹಾನುಭೂತಿ ಮತ್ತು ಬೆಂಬಲವನ್ನು ಗೆದ್ದುಕೊಂಡಿತು.

ಈ ಬಂಡಾಯದ ಸೋಲಿನೊಂದಿಗೆ ಭಾರತ ಬ್ರಿಟಿಶ್ ವಸಾಹತುಶಾಹಿಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುವ ಹಾಗೂ ಅವರ ಸರಕುಗಳಿಗೆ ದೊಡ್ಡ ಮಾರುಕಟ್ಟೆ ಒದಗಿಸುವ ಪ್ರದೇಶವಾಯಿತು. ಇದರಿಂದ ದೇಶದ ಹಳ್ಳಿಗಳಲ್ಲೂ, ಪಟ್ಟಣಗಳಲ್ಲೂ ಸರಕು-ಹಣದ ಸಂಬಂಧಗಳು ಬೆಳೆದುಬರಲಾರಂಭಿಸಿದವು. ಸರಳ ಸರಕು ಉತ್ಪಾದನೆಯ ವ್ಯವಸ್ಥೆ ಬೆಳೆದು ಕೃಷಿ ಉತ್ಪಾದನೆ ಮತ್ತು ಕೈಕಸಬು ವಲಯಗಳಲ್ಲಿ ವ್ಯಾಪಾರೀ ಬಂಡವಾಳ ಮತ್ತು ದುಬಾರಿ ಬಡ್ಡಿಯ ಬಂಡವಾಳ ತೂರಿಬರಲಾರಂಭಿಸಿತು. ರೈತರು ದಿವಾಳಿಯಾಗಲಾರಂಭಿಸಿದರು. ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ಅನುಕೂಲವಾದ ಪರಿಸ್ಥಿತಿ ಮೆಲ್ಲಮೆಲ್ಲನೆ ಸೃಷ್ಟಿಯಾಗಲಾರಂಭಿಸಿತು.

ಇನ್ನಷ್ಟು ರೈತ ಹೋರಾಟಗಳು

20ನೇ ಶತಮಾನದ ಆರಂಭದಲ್ಲಿ ರೈತ ಹೋರಾಟಗಳು ಇನ್ನಷ್ಟು ಹೆಚ್ಚಿದವು. 1905 ರಲ್ಲಿ ಬಂಗಾಳದ ವಿಭಜನೆ ಒಂದು ತಕ್ಷಣದ ಸಮಸ್ಯೆಯಾಗಿ ಜನಗಳ ಮುಂದೆ ಬಂತು. 1905 ರಿಂದ 1911 ರವರೆಗೆ ನಡೆದ ಈ ದೀರ್ಘ ಕಾಲದ ಹೋರಾಟ ರಾಷ್ಟ್ರೀಯ ಭಾವನೆಗಳನ್ನು ಇನ್ನಷ್ಟು ಉದ್ದೀಪನಗೊಳಿಸಿತು. ಬಂಗಾಳದ ವಿಭಜನೆಯ ವಿರುದ್ಧ ಭುಗಿಲೆದ್ದ ಕ್ರೋಧ ವಿದೇಶೀ ಆಳ್ವಿಕೆಯ ವಿರುದ್ಧ ಆಂದೋಲನಕ್ಕೆ ಪ್ರಚೋದನೆ ನೀಡಿತು. 1905 ರ ಆಗಸ್ಟ್ 7 ರಂದು ವಿದೇಶಿ ಸರಕುಗಳ ಬಹಿಷ್ಕಾರ ಮಾಡಬೇಕೆಂದು ಕೊಟ್ಟ ಕರೆಯೊಂದಿಗೆ ಈ ಆಂದೋಲನ ತಾರಕಕ್ಕೇರಿತು. ಪಂಜಾಬಿನಲ್ಲಿ ಲಾಲಾ ಲಜಪತರಾಯ್ ಮತ್ತು ಅಜಿತ್ ಸಿಂಗ್ ನೇತೃತ್ವದಲ್ಲಿ ವಸಾಹತೀಕರಣ ಕಾನೂನಿನ ವಿರುದ್ಧ ಒಂದು ಬಲಿಷ್ಟ ಆಂದೋಲನ ನಡೆಯಿತು. ಬ್ರಿಟಿಶರು ಎಷ್ಟೇ ದಮನ ಮಾಡಿದರೂ ರೈತರ ಬೇಡಿಕೆಗಳಿಗೆ ಒಪ್ಪಬೇಕಾಯಿತು.

ಬ್ರಿಟಿಶರು ಆಸ್ತಿವಂತ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸಲು ಹಾಗೂ ರಾಷ್ಟ್ರೀಯ ಆಂದೋಲನದ ಮಂದಗಾಮಿ ಮುಖಂಡರನ್ನು ತಮ್ಮ ಪರವಾಗಿಸಿಕೊಳ್ಳಲು ವಿವಿಧ ರಾಜಕೀಯ ಕ್ರಮಗಳನ್ನು ಕೈಗೊಂಡರು. 1904ರಿಂದ 1914 ರ ನಡುವೆ ಹಲವು ಕಾನೂನುಗಳನ್ನು ರಚಿಸಿ ಆಡಳಿತವನ್ನು ವಿರೋಧಿಸಿದ ಉಗ್ರಗಾಮಿಗಳನ್ನು ಅತ್ಯಂತ ಅಮಾನವೀಯ ದಮನಕ್ಕೊಳಪಡಿಸಲಾಯಿತು.

ಸ್ವದೇಶಿ ಆಂದೋಲನದಲ್ಲಿ ವಿದೇಶಿ ಸರಕುಗಳ ಬಹಿಷ್ಕಾರದಿಂದ ಭಾರತದ ಬಂಡವಾಳಶಾಹಿ ವರ್ಗಕ್ಕೆ ಬಹಳ ಪ್ರಯೋಜನವಾಯಿತು. ಉದಾಹರಣೆಗೆ, ಭಾರತದ ಬಟ್ಟೆಗಳ ಬೆಲೆ 8% ಹೆಚ್ಚಿದರೆ ಬ್ರಿಟಿಶ್ ಬಟ್ಟೆಗಳ ಬೆಲೆ 25% ದಷ್ಟು ಇಳಿಯಿತು. ಇದರಿಂದಾಗಿ ಈ ವರ್ಗದ ಪ್ರಮುಖ ವಿಭಾಗಗಳಿಂದಲೂ ಸ್ವದೇಶಿ ಆಂದೋಲನ ಸಹಾನುಭೂತಿ, ಬೆಂಬಲ ಪಡೆಯಿತು.

ಸ್ವದೇಶಿ ಆಂದೋಲನದ ಭಾವನೆಗಳು ದೀರ್ಘಕಾಲ ಉಳಿದವು. ಈ ನಡುವೆ ರಶ್ಯಾದಲ್ಲಿ ಮೊದಲ ಬೂರ್ಜ್ವಾ ಕ್ರಾಂತಿ (1905-07) ನಡೆದ ಮೇಲೆ 1907 ರ ನಂತರ ಭಾರತದಲ್ಲಿ ಸ್ವರಾಜ್ಯದ ವಿಚಾರ ಮೂಡಿಬಂತು.

ಮಹಾಯುದ್ಧದ ಅವಧಿ-ಸ್ವಾತಂತ್ರ್ಯದ ನಿರೀಕ್ಷೆ

ಮೊದಲ ಮಹಾಯುದ್ಧ ಸಿಡಿದಾಗ ನಮಗೆ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗಬಹುದು ಎಂಬ ನಿರೀಕ್ಷೆ ರಾಷ್ಟ್ರೀಯವಾದಿಗಳಲ್ಲಿ ಹೊಮ್ಮಿತು. ವಿದೇಶಕ್ಕೆ ಹೋದ ಭಾರತದ ಕ್ರಾಂತಿಕಾರಿಗಳು ವಿವಿಧ ರೀತಿಗಳಲ್ಲಿ ಭಾರತದ ಸ್ವಾತಂತ್ರ್ಯದ ವಿಚಾರವನ್ನು ಪ್ರಚುರಪಡಿಸಲು ಕೇಂದ್ರಗಳನ್ನು ರಚಿಸಿದರು. ಲಾಲಾ ಹರ್ದಯಾಲ್ ಮತ್ತಿತರರು ಅಮೇರಿಕಾದಲ್ಲಿ 1913 ರಲ್ಲಿ ಗದರ್ ಪಾರ್ಟಿ (ಬಂಡಾಯ ಪಕ್ಷ) ಸಂಘಟಿಸಲು ನೆರವಾದರು. ಈ ಪಕ್ಷ ಭಾರತವನ್ನು ಸ್ವತಂತ್ರಗೊಳಿಸಲು ಸೇನಾ ಪಡೆಗಳಲ್ಲಿ ಬಂಡಾಯ ಸಂಘಟಿಸಲೆಂದು 8000 ವಲಸೆಗಾರರನ್ನು ಭಾರತಕ್ಕೆ ಕಳಿಸಿತು. ಇವರಲ್ಲಿ ಹತ್ತಾರು ಜನಗಳನ್ನು ನೇಣು ಹಾಕಲಾಯಿತು. ನೂರಾರು ಜನರನ್ನು ಜೈಲಿಗಟ್ಟಿದರು. ಕೆಲವರು ಜೀವಾವಧಿ ಶಿಕ್ಷೆಗೂ ಗುರಿಯಾದರು. 1500 ಜನರನ್ನು ಅವರವರ ಹಳ್ಳಿಗಳಲ್ಲಿ ದಿಗ್ಬಂಧನಗೊಳಿಸಲಾಯಿತು. ರಾಜಾ ಮಹೇಂದ್ರ ಪ್ರತಾಪ್ ಮತ್ತು ಮೌಲಾನಾ ಬರ್ಕತುಲ್ಲಾ ಕಾಬೂಲಿನಲ್ಲಿ ಸ್ವತಂತ್ರಭಾರತದ ಸರಕಾರವನ್ನು ರಚಿಸಿ ವಿದೇಶದ ವಿವಿಧ ಸರಕಾರಗಳಿಂದ ಭಾರತದ ಸ್ವಾತಂತ್ರ್ಯಕ್ಕೆ ನೆರವು ಕೇಳಿದರು. ಇಂತಹ ಕ್ರಾಂತಿಕಾರಿಗಳ ಗುಂಪು ಜರ್ಮನಿ ಮತ್ತಿತರ ದೇಶಗಳಲ್ಲೂ ರಚನೆಗೊಂಡವು. ಯುದ್ಧದಿಂದ ಉಂಟಾದ ಪರಿಸ್ಥಿತಿಯ ಪೂರ್ಣ ಪ್ರಯೋಜನ ಪಡೆಯಲು ಅವರು ಪ್ರಯತ್ನಿಸಿದರು.

ಆ ವೇಳೆಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ಎಲ್ಲಾ ಅಧಿವೇಶನಗಳಲ್ಲಿ ಸಾಮ್ರಾಜ್ಯಶಾಹಿ ಯುದ್ಧಕ್ಕೆ ಬೆಂಬಲ ವ್ಯಕ್ತಪಡಿಸುತ್ತಿತ್ತು ಎಂಬುದನ್ನು ನಾವು ಗಮನಿಸಬೇಕು. 1918 ರಲ್ಲಿ ದಿಲ್ಲಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲೂ ಬ್ರಿಟಿಶ್ ಅರಸನಿಗೆ ತಾವು ವಿಧೇಯ ಎಂಬ ಹಾಗೂ ಯಶಸ್ವಿಯಾಗಿ ಯುದ್ಧ ಪೂರೈಸಿದುದಕ್ಕೆ ಆತನನ್ನು ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಈ ಅವಧಿಯಲ್ಲಿ ಕಾರ್ಮಿಕ ಆಂದೋಲನ ವೇಗವಾಗಿ ಬೆಳೆಯಲಾರಂಭಿಸಿತು. 1920 ರಲ್ಲಿ ಎಐಟಿಯುಸಿ ಸ್ಥಾಪನೆಯಾಗುವಂತಾಯಿತು. ಇದಕ್ಕೆ ಮೊದಲೇ 1908 ರಲ್ಲಿ ಮುಂಬೈ ಜವಳಿ ಕಾರ್ಮಿಕರು ಬಾಲ ಗಂಗಾಧರ ತಿಲಕರ ಬಂಧನವನ್ನು ಪ್ರತಿಭಟಿಸಿ ಒಂದು ರಾಜಕೀಯ ಮುಷ್ಕರ ನಡೆಸಿದ್ದರು ಎಂಬುದನ್ನು ನೆನಪಿಸಿಕೊಳ್ಳಬೇಕು.

ವಿಶ್ವದ [illegible] - ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿ

ನಂತರದ ದಶಕದಲ್ಲಿ ಸಾಮೂಹಿಕ ಆಂದೋಲನ ಇಳಿಮುಖವಾದರೂ ದೇಶಪ್ರೇಮದ ಭಾವನೆ ತುಂಬಿದ, ಆದರೆ ಯಾವುದೇ ವರ್ಗಪ್ರಜ್ಞೆಯಿಲ್ಲದ ಕ್ರಾಂತಿಕಾರಿ ಯುವಜನರ ಒಂದು ವಿಭಾಗ ಭಯೋತ್ಪಾದನೆಯ ಮಾರ್ಗ ಹಿಡಿಯಿತು. ಬ್ರಿಟಿಶ್ ಆಳರಸರು ಅವರನ್ನು ಅಮಾನುಷ ಚಿತ್ರಹಿಂಸೆಗೊಳಪಡಿಸಿದರು. ಸ್ವಾತಂತ್ರ್ಯ ಪಡೆಯುವ ದಾರಿಯ ಬಗ್ಗೆ ಅವರ ಅಭಿಪ್ರಾಯಗಳು ಎಷ್ಟೇ ಭ್ರಾಮಕವಾಗಿದ್ದರೂ ಪುಟ್ಟ ಬಂಡವಾಳಶಾಹಿ ವರ್ಗಗಳಿಂದ ಬಂದ ಈ ಯುವಜನ ನಿಸ್ವಾರ್ಥ ತ್ಯಾಗಭಾವನೆ, ವಿದೇಶಿ ಯಜಮಾನಿಕೆಯನ್ನು ಅಂತ್ಯಗೊಳಿಸುವ ಅವರ ಕನಸು ಇವಕ್ಕೆಲ್ಲಾ ಹಳ್ಳಿ-ಪಟ್ಟಣಗಳ ಜನಸಾಮಾನ್ಯರಿಂದ ಭಾವನಾತ್ಮಕ ಸಹಾನುಭೂತಿ ದೊರೆಯಿತು. ಅವರ ಧೈರ್ಯ, ಸಾಹಸ, ತ್ಯಾಗ ನಮ್ಮ ಸ್ವಾತಂತ್ರ್ಯ ಆಂದೋಲನದ ಇತಿಹಾಸದ ಅಮೂಲ್ಯ ಭಾಗ.

ಯುದ್ಧ ಮುಗಿದಾಗ ಭಾರತದ ಜನಸಮೂಹಗಳ ನಡುವೆ ಅಸಂತೃಪ್ತಿ ಇನ್ನಷ್ಟು ವೇಗವಾಗಿ ಹೆಚ್ಚಲಾರಂಭಿಸಿತು. ಅಕ್ಟೋಬರ್ ಕ್ರಾಂತಿಯ ಯಶಸ್ಸಿನಿಂದ ಅದು ಇನ್ನಷ್ಟು ತೀವ್ರಗೊಂಡಿತು. ವಸಾಹತು ದೇಶಗಳ ಸ್ವಾತಂತ್ರ್ಯ ಹೋರಾಟಗಳಿಗೆ ದೃಢಬೆಂಬಲ ನೀಡಬೇಕೆಂಬ ಲೆನಿನ್ ಕರೆಯಿಂದಾಗಿ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಜನಗಳ ಮನಸ್ಸಿನಲ್ಲಿ ಹೊಸ ಹುರುಪು ಮೂಡಿತು. ಹೊರಗಿದ್ದ ಹಲವು ಕ್ರಾಂತಿಕಾರಿ ಗುಂಪುಗಳು ರಶ್ಯಾಕ್ಕೆ ಹೋಗಿ ಲೆನಿನ್‌ರೊಂದಿಗೆ, ಮತ್ತಿತರ ಹಲವು ಮುಖಂಡರೊಂದಿಗೆ ಮಾತುಕತೆ ನಡೆಸಿದರು. ಉನ್ನತ ಧ್ಯೇಯಗಳಿಗೆ ಅವರ ಬದ್ಧತೆ, ಸಾಮ್ರಾಜ್ಯಶಾಹಿಯ ವಿರುದ್ಧ ಅವರ ಹೋರಾಟ ಹಾಗೂ ಅಕ್ಟೋಬರ್ ಕ್ರಾಂತಿ ಸಾಧಿಸಿದ ಯಶಸ್ಸು ಇವುಗಳಿಂದ ಅವರು ಅಗಾಧ ಸ್ಫೂರ್ತಿ ಪಡೆದರು. ಹೊರಗಿದ್ದ ಕ್ರಾಂತಿಕಾರಿಗಳು ರಶ್ಯಾದ ಕಡೆಗೆ ಹೆಚ್ಚೆಚ್ಚು ಸೆಳೆಯಲ್ಪಟ್ಟರು. ನೆರವು ಮತ್ತು ಬೆಂಬಲಕ್ಕಾಗಿ ಬೋಲ್ಶೆವಿಕ್ ಸರಕಾರದತ್ತ ನೋಡಲಾರಂಭಿಸಿದರು.

ಜಲಿಯನ್‌ವಾಲಾಬಾಗ್ ಹತ್ಯಾಕಾಂಡ - ಅಸಹಕಾರ ಆಂದೋಲನ

ಇನ್ನೊಂದು ಕಡೆ ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಆಂದೋಲನವನ್ನು ದಮನ ಮಾಡಲು ಕಠಿಣ ಕ್ರಮಗಳನ್ನು ಕೈಗೊಂಡರು. ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಇದಕ್ಕೊಂದು ಉದಾಹರಣೆ. ಅಲ್ಲಿ ಜನರಲ್ ಡಾಯರ್ ಯಾವುದೇ ಮುನ್ಸೂಚನೆಯಿಲ್ಲದೆ ನೆರೆದಿದ್ದ ಮುಗ್ಧ ಪ್ರತಿಭಟನಾಕಾರರ ಮೇಲೆ ಗುಂಡಿನ ಮಳೆಗರೆಸಿದ. ದೇಶದ ಸ್ವಾತಂತ್ರ್ಯಕ್ಕಾಗಿ ಹಿಂದೂಗಳು, ಮುಸಲ್ಮಾನರು, ಸಿಖ್ಖರ ರಕ್ತ ಒಟ್ಟಾಗಿ ಹರಿದ ಒಂದು ಘಟನೆ ಇದು. ಈ ಹತ್ಯಾಕಾಂಡ, ನಂತರ ತಂದ ಲಷ್ಕರಿ ಶಾಸನ(ಮಾರ್ಷಲ್ ಲಾ) ದೇಶಾದ್ಯಂತ ಜನರ ಮನಸ್ಸನ್ನು ಕಲಕಿತು. ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ಕೊನೆಗೊಳಿಸಬೇಕೆಂದು ಜನ ಹಂಬಲಿಸಲಾರಂಭಿಸಿದರು. ಈ ಹಂಬಲದ ಬುನಾದಿಯ ಮೇಲೆಯೇ ಕಾಂಗ್ರೆಸ್ ಬಾವುಟದಡಿ ಮಹಾತ್ಮಗಾಂಧೀಜಿಯ ನೇತೃತ್ವದಲ್ಲಿ ಅಸಹಕಾರ ಆಂದೋಲನ ನಡೆದದ್ದು. ಆದರೆ ಚೌರಿಚಾರಾದ ಘಟನೆಯ ನಂತರ ಗಾಂಧೀಜಿ ಈ ಆಂದೋಲನವನ್ನು ಹಿಂದೆಗೆದುಕೊಂಡರು. ಈ ಅವಧಿಯಲ್ಲೇ ಜನಗಳಲ್ಲಿನ ಅಸಂತೃಪ್ತಿ ವಿವಿಧ ರೀತಿಗಳಲ್ಲಿ ಅಭಿವ್ಯಕ್ತಗೊಂಡಿತು. ತುರ್ಕಿಯಲ್ಲಿ ಖಲೀಫಾನ ಸ್ಥಾನಮಾನ ಮತ್ತೆ ಕೊಡಬೇಕೆಂದು ಆರಂಭವಾದ ಖಿಲಾಫತ್ ಆಂದೋಲನ ರಾಷ್ಟ್ರೀಯ ಆಂದೋಲನದ ಭಾಗವಾಗಿಬಿಟ್ಟಿತು. ವಿಶೇಷವಾಗಿ ಪಂಜಾಬ್, ಯು.ಪಿ.ಗಳಿಂದ ಹಲವಾರು ಮುಸ್ಲಿಮರು ತಮ್ಮ ಮನೆ-ಮಾರು ಬಿಟ್ಟು ತುರ್ಕಿಗೆ ಹೋಗಿ ಖಿಲಾಫತ್‌ಗಾಗಿ ಹೋರಾಡಲು ಮುಂದಾದರು. ಅವರಲ್ಲಿ ಕೆಲವರು ತಾಷ್ಕೆಂಟ್‌ಗೆ ಹೋಗಿ ಬೋಲ್ಶೆವಿಕ್ ಸಂಪರ್ಕಕ್ಕೆ ಬಂದರು. ಅಕ್ಟೋಬರ್ ಕ್ರಾಂತಿಯಿಂದ ಪ್ರಭಾವಿತರಾಗಿ 'ಪೂರ್ವದ ಶ್ರಮಜೀವಿಗಳ ವಿಶ್ವವಿದ್ಯಾಲಯ'ದಲ್ಲಿ ಅಧ್ಯಯನ ಮಾಡಿ ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನು ಮುಡಿಪಿಡುವ ಉದ್ದೇಶ ಹೊತ್ತು ಹಿಂದಿರುಗಿದರು. ಆದರೆ ಬ್ರಿಟಿಶ್ ಸಾಮ್ರಾಜ್ಯಶಾಹಿಗಳು ಈ ಆಂದೋಲನವನ್ನು ದಮನ ಮಾಡಲು ಮುಂದಾದರು. ಈ ಪಕ್ಷದ ಹಾಗೂ ಇತರ ಮುಖಂಡರುಗಳ ಬಂಧನ ಆರಂಭವಾಯಿತು. ಇವರೆಲ್ಲರ ವಿರುದ್ಧ ಪಿತೂರಿ ಮೊಕದ್ದಮೆ ಹೂಡಲಾಯಿತು. ಮೀರತ್ ಪಿತೂರಿ ಮೊಕದ್ದಮೆ ನಾಲ್ಕೂವರೆ ವರ್ಷ ಕಾಲ ನಡೆಯಿತು. ಈ ಮೊಕದ್ದಮೆಯಲ್ಲಿ ಆರೋಪಿಗಳಾದವರು ನ್ಯಾಯಾಲಯದಲ್ಲಿನ ವಿಚಾರಣೆಯನ್ನು ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯದ ಧ್ಯೇಯೋದ್ದೇಶಗಳನ್ನು ಹಾಗೂ ಸ್ವಾತಂತ್ರ್ಯದ ನಂತರ ಸಮಾಜವಾದವನ್ನಾಧರಿಸಿದ ಒಂದು ನವ ಸಮಾಜದ ಕಣ್ಣೋಟವನ್ನು ಪ್ರಚುರಪಡಿಸಲು ಬಳಸಿಕೊಂಡರು.

ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ - ಭಗತ್‌ಸಿಂಗ್ ಬಲಿದಾನ

ಬಂಡವಾಳಶಾಹಿ ಜಗತ್ತಿನಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರಗೊಂಡ ಸಮಯವದು. ಭಾರತದ ಮೇಲೂ ಅದರ ಪ್ರಭಾವ ಬೀಳುತ್ತಿತ್ತು. ಇಪ್ಪತ್ತರ ದಶಕದಿಂದಲೂ ಕಮ್ಯುನಿಸ್ಟರು ಸತತವಾಗಿ ಎತ್ತಿ ಕೊಂಡು ಬರುತ್ತಿದ್ದ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಕೊನೆಗೂ ಕಾಂಗ್ರೆಸ್ 1930 ರಲ್ಲಿ ಲಾಹೋರ್ ಅಧಿವೇಶನದಲ್ಲಿ ಅಂಗೀಕರಿಸಿತು. ಅದು ಭಾರತೀಯ ಜನಗಳ ಮನದಲ್ಲಿ ಹೊಸ ವಿಶ್ವಾಸ ಮೂಡಿಸಿತು. ಕಾಂಗ್ರೆಸ್ ನಾಗರೀಕ ಅಸಹಕಾರ ಆಂದೋಲನವನ್ನು ಆರಂಭಿಸಿತು. ಈ ಅವಧಿಯಲ್ಲೇ ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು ನಗುನಗುತ್ತಾ ನೇಣುಗಂಬಗಳನ್ನೇರಿದರು. ಭಗತ್ ಸಿಂಗ್ 'ತನ್ನ ಕೊನೆಯ ಉಯಿಲಿನಲ್ಲಿ ಸ್ವಾತಂತ್ರ್ಯ ಪಡೆಯುವ ಹಾಗೂ ಸಾಮಾಜಿಕ ಪರಿವರ್ತನೆಯ ದಾರಿಯೆಂದರೆ ಕಾರ್ಮಿಕವರ್ಗ ಮತ್ತು ರೈತಾಪಿ ಜನಗಳ ವರ್ಗ ಹೋರಾಟಗಳನ್ನು ತೀವ್ರಗೊಳಿಸುವುದು ಎಂದಿದ್ದರು. ಸಮಾಜವಾದದ ವಿಚಾರಧಾರೆ ಜನಪ್ರಿಯತೆ ಗಳಿಸಲಾರಂಭಿಸಿತ್ತು. ಸಾಮೂಹಿಕ ಉತ್ಕ್ರಾಂತಿಗಳನ್ನು ಕಂಡ ಸಾಮ್ರಾಜ್ಯಶಾಹಿಗಳು ದುಂಡು ಮೇಜಿನ ಪರಿಷತ್ತುಗಳನ್ನು ನಡೆಸಿದರು. ಆದರೆ ಅದರಿಂದ ಏನೂ ಇತ್ಯರ್ಥವಾಗಲಿಲ್ಲ. ಇನ್ನೊಂದು ಕಡೆ ಅವರು 'ಭಾರತ ಸರಕಾರ ಕಾನೂನಿ'ನ ಮೂಲಕ ಒಂದು ಹೊಸ ಸಂವಿಧಾನವನ್ನು ಹೇರಿದರು. ವಿವಿಧ ವಿಭಾಗಗಳಲ್ಲಿ ಕೋಮುಭಾವನೆ ಉಂಟುಮಾಡಲು ಪ್ರತ್ಯೇಕ ಚುನಾವಣಾ ಕ್ಷೇತ್ರಗಳ ಒಂದು ವ್ಯವಸ್ಥೆಯನ್ನು ಭಾರತೀಯರ ಮೇಲೆ ಹೇರಲಾಯಿತು.

ಸಮಾಜವಾದಿ ವಿಚಾರಧಾರೆ

ಮತ್ತೆ ನಾಗರೀಕ ಅಸಹಕಾರ ಆಂದೋಲನ ಬೇರೂರಲಾರಂಭಿಸಿದಾಗ, ರೈತಾಪಿ ಜನ ಭೂಮಾಲಕರ ವಿರುದ್ಧ ಎರಗಲಾರಂಭಿಸಿದಾಗ ಗಾಂಧೀಜಿ ಆಂದೋಲನವನ್ನು ಹಿಂತೆಗೆದುಕೊಂಡರು. ಇದರಿಂದ ಪುಟ್ಟ ಬಂಡವಾಳಶಾಹಿ ವರ್ಗಗಳಿಂದ ಬಂದ ಬುದ್ಧಿಜೀವಿಗಳಲ್ಲಿ ಮತ್ತು ಯುವಜನರಲ್ಲಿ ತೀವ್ರ ನಿರಾಸೆ ಉಂಟಾಯಿತು. ಅವರು ಸ್ವಾತಂತ್ರ್ಯ ಹೋರಾಟವನ್ನು ಸಮಾಜವಾದೀ ವಿಚಾರಗಳೊಡನೆ ಬೆಸೆಯಲು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ರಚಿಸಿದರು. ಈ ಪಕ್ಷ ಕಾಂಗ್ರೆಸ್ಸಿನ ನಿಲುವುಗಳಲ್ಲಿ ತೀವ್ರತೆ ತರುವಲ್ಲಿ ಒಂದು ಪಾತ್ರ ವಹಿಸಿತು; ಅಲ್ಲದೆ ಆಗ ಕಾನೂನುಬಾಹಿರವಾಗಿ ಕೆಲಸ ಮಾಡಬೇಕಿದ್ದ ಕಮ್ಯುನಿಸ್ಟರಿಗೆ ಒಂದು ವೇದಿಕೆಯನ್ನು ಒದಗಿಸಿತು. ಈ ಸಮಯದಲ್ಲೇ ಕಮ್ಯುನಿಸ್ಟರು ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಆಂದೋಲನದಲ್ಲಿ ಪೂರ್ಣವಾಗಿ ಭಾಗವಹಿಸಲು ಅದೇ ವೇಳೆಗೆ ಕಾರ್ಮಿಕ ವರ್ಗ, ರೈತಾಪಿ ಜನಸಮೂಹಗಳು ಹಾಗೂ ಇತರ ಶ್ರಮಜೀವಿ ಜನಗಳನ್ನು ಸ್ವತಂತ್ರವಾಗಿ ಸಂಘಟಿಸಿ ರಾಷ್ಟ್ರೀಯ ಆಂದೋಲನದಲ್ಲಿ ಈ ಶ್ರಮಜೀವಿ ವರ್ಗಗಳು ಹೆಚ್ಚೆಚ್ಚು ಮಧ್ಯ ಪ್ರವೇಶಿಸಲು ಸಾಧ್ಯವಾಗುವಂತೆ ಶ್ರಮಿಸಲು ನಿರ್ಧರಿಸಿದರು. 1936 ರಲ್ಲಿ ಕಾಂಗ್ರೆಸ್‌ನಲ್ಲಿದ್ದ ತೀವ್ರಗಾಮಿಗಳು, ಕಾಂಗ್ರೆಸ್ ಸೋಶಲಿಸ್ಟರು ಮತ್ತು ಕಮ್ಯುನಿಸ್ಟರು ಸೇರಿ ಅಖಿಲ ಭಾರತ ಕಿಸಾನ್

ಪುಟ 6 ನೋಡಿ

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿವಿಧ ರಾಜಕೀಯ ಶಕ್ತಿಗಳ ಅಂತಿಮ ಗುರಿ ಏನೇ ಇದ್ದರೂ ಅವುಗಳಲ್ಲೆಲ್ಲಾ ಒಂದು ಸಮಾನ ಅಂಶವಿತ್ತು-ಸ್ವಾತಂತ್ರ್ಯವೆಂದರೆ ದೇಶದ ವಿಶಾಲ ನೈಸರ್ಗಿಕ ಸಂಪನ್ಮೂಲಗಳನ್ನು ಎಲ್ಲಾ ದೇಶಬಾಂಧವರಿಗೆ ಸಮಾನ ಪ್ರಯೋಜನಕ್ಕಾಗಿ ಬಳಸುವುದು ಎಂದು ಅವರು ಅರ್ಥ ಮಾಡಿಕೊಂಡಿದ್ದರು. ಸ್ವತಂತ್ರ್ಯ ಹೋರಾಟಾದ ಪ್ರವಾಹದ ವಿಭಿನ್ನ ತೊರೆಗಳ ಈ ಸಮಾನ ಕನಸು ಈಡೇರಿದೆಯೇ? ಕಾಂ॥ ಸುರ್ಜಿತ್ ತಮ್ಮ ಲೇಖನದ ಎರಡನೇ ಭಾಗದಲ್ಲಿ ಪರಿಶೀಲಿಸುತ್ತಾರೆ.

....ಸ್ವಾತಂತ್ರ್ಯ ಸಮರದ ಹುತಾತ್ಮರ ಕನಸುಗಳ ನನಸಿಗಾಗಿ ಹೋರಾಡಬೇಕಾದ ಸಮಯವಿದು

ಬ್ರಿಟಿಶ್ ಸಾಮ್ರಾಜ್ಯಶಾಹಿಗಳನ್ನು ದೇಶದಿಂದ ಹೊರದಬ್ಬಲು ಸೆಣಸುತ್ತಿದ್ದಾಗ ಭಾರತದ ವಿಶಾಲ ಜನಸಮೂಹದ ಮನದಲ್ಲಿದ್ದ ಆಶಯಗಳೇನು? ಅವರ ಕಣ್ಣೋಟವೇನಿತ್ತು? ಸ್ವಾತಂತ್ರ್ಯ ಎಂದರೆ ಏನೆಂದು ಅವರು ಅರ್ಥಮಾಡಿಕೊಂಡಿದ್ದರು? ಸ್ವಾತಂತ್ರ್ಯವೆಂದರೆ ಬ್ರಿಟಿಶ್ ಆಳರಸರನ್ನು ಕಳಿಸಿ ದೇಶೀ ಆಳರಸರನ್ನು ಕುಳ್ಳಿರಿಸುವುದೆಂದು ಅವರು ಬಗೆದಿದ್ದರೆ?

ಸ್ವಾತಂತ್ರ್ಯಕ್ಕಾಗಿ ನಡೆದ ಆಂದೋಲನದಲ್ಲಿ ಭಾಗವಹಿಸಿದ ವಿಭಿನ್ನ ರಾಜಕೀಯ ಶಕ್ತಿಗಳು ಅಂತಿಮ ಧ್ಯೇಯದ ಬಗ್ಗೆ, ಗುರಿಯ ಬಗ್ಗೆ ಹೊಂದಿದ್ದ ದೃಷ್ಟಿ ಕೋನ, ಕಣ್ಣೋಟ ಬೇರೆ-ಬೇರೆಯಾಗಿದ್ದರೂ ಅವುಗಳಲ್ಲೆಲ್ಲಾ ಒಂದು ಸಾಮಾನ್ಯ ಅಂಶವಿತ್ತು. ಅವರೆಲ್ಲಾ ಬ್ರಿಟಿಶ್ ಅಡಿಯಾಳುತನದ ಸಂಕೋಲೆಯಿಂದ ಮುಕ್ತವಾದ ಭಾರತದ ಕನಸು ಕಂಡಿದ್ದರಷ್ಟೇ ಅಲ್ಲ, ನಿರ್ಭಯವಾಗಿ ತಲೆಎತ್ತಿ ನಡೆಯಬಹುದಾದ, ತಮ್ಮ ದೇಶ ಎಂದು ಹೆಮ್ಮೆಯಿಂದ ಹೇಳಬಹುದಾದ ಭಾರತದ ಕನಸು ಕಂಡಿದ್ದರು. ಸ್ವಾತಂತ್ರ್ಯವೆಂದರೆ ದೇಶದ ವಿಶಾಲ ನೈಸರ್ಗಿಕ ಸಂಪನ್ಮೂಲಗಳನ್ನು ಎಲ್ಲಾ ದೇಶಬಾಂಧವರ ಸಮಾನ ಪ್ರಯೋಜನಕ್ಕಾಗಿ ಬಳಸುವುದು ಎಂದು ಅವರು ಅರ್ಥಮಾಡಿಕೊಂಡಿದ್ದರು. ಸ್ವಾತಂತ್ರ್ಯ ಆಂದೋಲನದ ಪ್ರವಾಹದ ವಿಭಿನ್ನ ತೊರೆಗಳು ಹೊಂದಿದ್ದ ಸಮಾನ ಕನಸು ಇದಾಗಿತ್ತು.

ಇದೇ ಕನಸನ್ನು ಕಮ್ಯುನಿಸ್ಟರೂ ಹೊಂದಿದ್ದರು. ಆದರೆ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋದರು. ಸಂಪೂರ್ಣ ಸ್ವಾತಂತ್ರ್ಯ ಬೇಕು ಎಂದು ಮೊತ್ತಮೊದಲು ದನಿಯೆತ್ತಿದವರು ಅವರು. ವಸಾಹತುಶಾಹೀ ಶೋಷಣೆಯಿಂದ ಮುಕ್ತವಾದ ಭಾರತಕ್ಕಾಗಿ ಶ್ರಮಿಸುತ್ತಾ ಅವರು ಅದೇ ವೇಳೆಗೆ ಕಾರ್ಷಿಕ ಕ್ರಾಂತಿಯನ್ನು ಪೂರ್ಣಗೊಳಿಸಬೇಕೆಂದು ಬಯಸಿದವರು. ಏಕೆಂದರೆ ನಿಜವಾದ ಸ್ವಾತಂತ್ರ್ಯದ ಸಾರ ಇದೇ. ಇದರಿಂದ ಉತ್ಪಾದಕ ಶಕ್ತಿಗಳನ್ನು ಕಟ್ಟಿಹಾಕಿದ ಸಂಕೋಲೆ ಮುರಿದು ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಸರ್ವರ ಪ್ರಯೋಜನಕ್ಕಾಗಿ ಬಳಸಲು ಸಾಧ್ಯವಾಗುತ್ತಿತ್ತು.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕಮ್ಯುನಿಸ್ಟರು ದೇಶದ ಮುಂದಿಟ್ಟ ಕಣ್ಣೋಟದ ವಿವರವನ್ನು ಪರಿಶೀಲಿಸುವುದು ಇಲ್ಲಿ ನಮ್ಮ ಉದ್ದೇಶವಲ್ಲ. ನಾವಿಲ್ಲಿ ಎಲ್ಲರೂ ತಮ್ಮ ಮುಂದೆ ಇಟ್ಟುಕೊಂಡ ಸಮಾನ ಗುರಿಯತ್ತ ಎಷ್ಟರ ಮಟ್ಟಿಗೆ ಸಾಗಿದ್ದೇವೆ, ಯಾವ ವಚನಗಳನ್ನು ಈಡೇರಿಸಿದ್ದೇವೆ, ಎಲ್ಲಿ ಹಿಂದೆ ಬಿದ್ದಿದ್ದೇವೆ, ನಮ್ಮ ನ್ಯೂನ್ಯತೆಗಳೇನು ಎಂದು ಪರಿಶೀಲಿಸಲು, ವಿಶ್ಲೇಷಿಸಲು ಪ್ರಯತ್ನಿಸೋಣ.

ಕಾಂಗ್ರೆಸ್ಸಿನ ವಚನ

ಆಗ ಕಾಂಗ್ರೆಸ್ ರಾಷ್ಟ್ರೀಯ ಆಂದೋಲನದ ನೇತೃತ್ವದಲ್ಲಿತ್ತು. ಅದು ಜನರ ಆಶೋತ್ತರಗಳನ್ನು ಆಗ ಪ್ರತಿಪಾದಿಸಿತ್ತು ಕೂಡ. ಬಡತನ, ಹಸಿವು, ನಿರುದ್ಯೋಗ, ಪೋಷಕ ಆಹಾರದ ಕೊರತೆ ಹಾಗೂ ಅಸಮಾನತೆಗಳಿಂದ ಮುಕ್ತವಾದ ಒಂದು ಭಾರತವನ್ನು [illegible]ವಾಗಿಯೂ ಪ್ರಜಾಸತ್ತಾತ್ಮಕವಾದ ಆಡಳಿತ ರಚನೆಯಿರುವ, ಧರ್ಮನಿರಪೇಕ್ಷ ಮೌಲ್ಯಗಳನ್ನು ಬಲಗೊಳಿಸುವ ಹಾಗೂ ಒಂದು ಸ್ವಚ್ಛ ಆಡಳಿತವಿರುವ ಭಾರತವನ್ನು ಕಟ್ಟುವ ಕಣ್ಣೋಟವನ್ನಿಟ್ಟಿತ್ತು. ಪಂಡಿತ ಜವಾಹರ ಲಾಲ್ ನೆಹರೂರವರು ಸ್ವಾತಂತ್ರ್ಯದ ಮುನ್ನಾದಿನ ಆಗಸ್ಟ್ 14,1947 ರಂದು ಸಂವಿಧಾನ ಸಭೆಯಲ್ಲಿ ಮಾತನಾಡುತ್ತಾ

> *"ಭಾರತದ ಸೇವೆ ಎಂದರೆ ಸಂಕಟ ಪಡುತ್ತಿರುವ ಕೋಟ್ಯಾಂತರ ಜನಗಳ ಸೇವೆ. ಬಡತನ, ನಿರುದ್ಯೋಗ, ರೋಗ-ರುಜಿನ, ಅಸಮಾನ ಪರಿಸ್ಥಿತಿಯನ್ನು ಕೊನೆಗೊಳಿಸುವುದು ಎಂದು ಅದರರ್ಥ"* ಎಂದಿದ್ದರು.

ಆಗಸ್ಟ್ 15 ರಂದು ದೇಶವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದಲ್ಲಿ ನೆಹರೂ

> *"ನಾವು ಯಾರಿಗೂ ಕೇಡು ಬಗೆಯುವುದಿಲ್ಲ. ಆದರೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ದೀರ್ಘಕಾಲದಿಂದ ನರಳುತ್ತಿರುವ ನಮ್ಮ ಜನಸಮೂಹಗಳ ಹಿತಾಸಕ್ತಿಗಳಿಗೆ ಮೊದಲ ಸ್ಥಾನ, ಅದಕ್ಕೆ ಅಡ್ಡಿ ಬರುವ ಪ್ರತಿಯೊಂದು ಪಟ್ಟಭದ್ರ ಹಿತಾಸಕ್ತಿ ಅದಕ್ಕೆ ತಲೆಬಾಗಬೇಕು. ನಾವು ತ್ವರಿತವಾಗಿ ನಮ್ಮ ಹಳಸಲಾದ ಭೂಮಿ ಗೇಣಿ ಪದ್ಧತಿಯನ್ನು ಬದಲಿಸಬೇಕು. ದೊಡ್ಡ ಪ್ರಮಾಣದಲ್ಲಿ ಮತ್ತು ಸಮತೋಲನ ರೀತಿಯಲ್ಲಿ ಕೈಗಾರೀಕರಣವನ್ನು ಪ್ರೋತ್ಸಾಹಿಸಬೇಕು. ಈ ಮೂಲಕ ದೇಶದ ಸಂಪತ್ತನ್ನು ಹೆಚ್ಚಿಸಲು ಹಾಗೂ ಅದರಿಂದ ರಾಷ್ಟ್ರೀಯ ಪ್ರತಿಫಲವನ್ನು ಹೆಚ್ಚಿಸಲು ಸಾಧ್ಯವಾಗಬೇಕು. ಇದನ್ನು ಸಮಾನಾತ್ಮಕವಾಗಿ ವಿತರಿಸಬೇಕು"*

ಕೆಲವು ತಿಂಗಳ ನಂತರ ಒಬ್ಬ ಧರ್ಮಾಂಧನಿಂದ ಜನವರಿ 30, 1948 ರಂದು ಮಹಾತ್ಮಾಗಾಂಧಿಯವರ ಹತ್ಯೆ ನಡೆಯಿತು. ಗಾಂಧೀಜಿಯವರ ಚಿತಾಭಸ್ಮವನ್ನು ನದಿಯಲ್ಲಿ ಹರಿಯಬಿಡುವ ಸಂದರ್ಭದಲ್ಲಿ ಮಾತನಾಡುತ್ತಾ ನೆಹರೂ ಹೀಗೆ ಹೇಳಿದ್ದರು -

> "ನಮಗೆ ಅನಾಹುತ ತಂದಿರುವ ಕೋಮುವಾದಿ ವಿಷ ನಾವು ಜಾಗರೂಕರಾಗದಿದ್ದರೆ, ಸೂಕ್ತ ಸಮಯದಲ್ಲಿ ಕಾರ್ಯಾಚರಣೆಗಿಳಿಯದಿದ್ದರೆ ನಮ್ಮ ಸ್ವಾತಂತ್ರ್ಯವನ್ನೂ ಮುಗಿಸಿಬಿಡುತ್ತದೆ" ಎಂದಿದ್ದರು.

ಏಪ್ರಿಲ್ 3, 1948 ರಂದು ಸಂವಿಧಾನ ಸಭೆಯಲ್ಲಿ ಕೋಮುವಾದದ ಕುರಿತಂತೆ ಮಂಡಿಸಿದ ಒಂದು ನಿರ್ಣಯದ ಮೇಲೆ ಮಾತನಾಡುತ್ತಾ

> *"ನಮ್ಮ ಮನದಲ್ಲಿ ಹಾಗೂ ದೇಶದ ಮನದಲ್ಲಿ ಒಂದಂಶವಂತೂ ಸ್ಪಷ್ಟವಾಗಿರಬೇಕು. ಅದೆಂದರೆ ಕೋಮುವಾದದ ಸ್ವರೂಪದಲ್ಲಿ ಧರ್ಮ ಮತ್ತು ರಾಜಕೀಯದ ಮೈತ್ರಿಯಿಂದ ಒಂದು ಅತ್ಯಂತ ಅತಿರೇಕದ ಕಾನೂನು ಬಾಹಿರ ಸಂತಾನ ಉಂಟಾಗುತ್ತದೆ...... ಅತ್ಯಂತ ಸಂಕುಚಿತ ಅರ್ಥದಲ್ಲಿ ಧರ್ಮ ಮತ್ತು ರಾಜಕೀಯ ಬೆರಸುವುದರಿಂದ ಉಂಟಾಗುವ ಕೋಮುವಾದಿ ರಾಜಕೀಯ ಒಂದು ಅಪಾಯಕಾರಿ ಬೆದರಿಕೆ ಎಂಬುದರಲ್ಲಿ ಏನೇನೂ ಸಂದೇಹವಿಲ್ಲ. ಅದನ್ನು ಕೊನೆಗೊಳಿಸಬೇಕು"* ಎಂದರು.

ಅದೇ ಭಾಷಣದಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾ ನೆಹರೂರವರು

> *"ಈಗ ಭಾರತದಲ್ಲಿ ಕೆಲವು ಗುಂಪುಗಳು, ವರ್ಗಗಳು ಮತ್ತು ವ್ಯಕ್ತಿಗಳ ನಡುವೆ ಅಪಾರ ಭಿನ್ನತೆಗಳಿರುವುದೂ ಸ್ಪಷ್ಟ. ಮೇಲ್ತುದಿಯಲ್ಲಿರುವವರು ಹಾಗೂ ಬುಡದಲ್ಲಿರುವವರ ನಡುವೆ ದೊಡ್ಡ ಕಂದರವಿದೆ. ನಮಗೆ ಪ್ರಜಾಪ್ರಭುತ್ವ ಬೇಕೆಂದಾದರೆ ಈ ಅಂತರವನ್ನು ತುಂಬುವುದು ಅಗತ್ಯ ಮತ್ತು ಅನಿವಾರ್ಯ ಮಾತ್ರವೇ ಅಲ್ಲ, ಅದನ್ನು ಬಹಳಷ್ಟು ಕಮ್ಮಿ ಮಾಡಲೇಬೇಕು. ... ಜೀವನ ಪರಿಸ್ಥಿತಿ ಮತ್ತು ಜೀವನಾವಶ್ಯಕತೆಗಳಿಗೆ ಸಂಬಂಧಪಟ್ಟಂತೆ ಅವರನ್ನು ನಿಕಟತರುವುದು ಅತ್ಯಗತ್ಯ".* ಎಂದಿದ್ದರು.

ಇನ್ನೂ ನೆರವೇರದ ವಚನಗಳು

ಹೀಗಿದ್ದವು ನೆಹರೂರವರ ನುಡಿಗಳಲ್ಲಿ ವ್ಯಕ್ತಗೊಂಡ ರಾಷ್ಟ್ರೀಯ ಆಂದೋಲನದ ಆಕಾಂಕ್ಷೆಗಳು. ಈ ವಚನಗಳು ಈಡೇರಿವೆಯೇ? ಈ ಎಲ್ಲಾ ಪ್ರತಿಜ್ಞೆಗಳು ಈಡೇರದೆ ಹಾಗೆಯೇ ಉಳಿದಿವೆ ಎಂಬ ಅರಿವಿನಿಂದಲೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಿಗೆ ಅತೀವ ನಿರಾಸೆಯಾಗಿರುವುದು ಖಂಡಿತ. ನಮ್ಮ ಜನಸಾಮಾನ್ಯರ ಜೀವನ ಪರಿಸ್ಥಿತಿಗಳಲ್ಲಿ ಸುಧಾರಣೆ, ಪ್ರಜಾಪ್ರಭುತ್ವದ ವಿಸ್ತರಣೆ, ನಮ್ಮ ಸಮಾಜದ ಧರ್ಮನಿರಪೇಕ್ಷ ಸ್ವರೂಪವನ್ನು ಬಲಪಡಿಸುವುದು ಇತ್ಯಾದಿಗಳು ಇನ್ನೂ ನೆರವೇರದ ಕರ್ತವ್ಯಗಳು. ಈ ನಡುವೆ ದೇಶ ಸ್ವಲ್ಪ ಪ್ರಗತಿ ಸಾಧಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. ಒಂದು ಉತ್ತಮ ಮೂಲಸೌಕರ್ಯ ವ್ಯವಸ್ಥೆಯನ್ನು ಕಟ್ಟಿ ಬೆಳೆಸಿದೆ, ಪ್ರಧಾನ ಉದ್ದಿಮೆಗಳನ್ನು ಬೆಳೆಸಿದೆ, ಹಲವು ರಂಗಗಳಲ್ಲಿ ಸ್ವಾವಲಂಬನೆ ಸಾಧಿಸಿದೆ, ದೇಶೀ ತಂತ್ರಜ್ಞಾನ ಮತ್ತು ಉದ್ದಿಮೆಗಳನ್ನು ಬೆಳೆಸಿದೆ ಇತ್ಯಾದಿ. ಸಾಮಾಜಿಕ ವಲಯಗಳಲ್ಲೂ ಸ್ವಾತಂತ್ರ್ಯದ ಹಿಂದಿನ ದಿನಗಳಿಗೆ ಹೋಲಿಸಿದರೆ ಶೈಕ್ಷಣಿಕ ಮತ್ತು ಆರೋಗ್ಯ ಸೌಲಭ್ಯಗಳು ಹೆಚ್ಚಿವೆ.

ಆದರೂ ಸ್ವತಂತ್ರ ಭಾರತದಲ್ಲಿ ಏನೇನು ಸಾಧಿಸಬೇಕೆಂದಿದ್ದೇವೋ ಅವಕ್ಕೂ, ನಿಜಕ್ಕೂ ಸಾಧಿಸಿದ್ದಕ್ಕೂ ಅಪಾರ ಅಂತರವಿದೆ. ಕೈಗಾರಿಕೆ ಬೆಳವಣಿಗೆಯೇನೋ ಇದೆ. ಆದರೆ ಅದರೊಡನೆ ಬೆಳೆದದ್ದು ಗುತ್ತೇದಾರಿ ಕುಟುಂಬಗಳಷ್ಟೆ. ಸಣ್ಣ ಮತ್ತು ಮಧ್ಯಮ ಘಟಕಗಳು ನರಳುತ್ತಿವೆ. ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಬಹಳಷ್ಟು ಹೆಚ್ಚಿದೆ. ಈಗಲೂ ಅಧಿಕೃತವಾಗಿಯೂ ನಮ್ಮ 39% ಜನ ಬಡತನದ ರೇಖೆಯ ಕೆಳಗಿದ್ದಾರೆ. ಅಂದರೆ ಎರಡು ಹೊತ್ತಿನ ಕೂಳಿನಿಂದಲೂ ವಂಚಿತರಾಗಿದ್ದಾರೆ. ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಗಳಲ್ಲಿಯೇ ಅಧಿಕೃತವಾಗಿ ನಿರುದ್ಯೋಗಿಗಳ ಸಂಖ್ಯೆ ನಾಲ್ಕು ಕೋಟಿಯಷ್ಟು. ಆದರೆ ಅನಧಿಕೃತ ಅಂದಾಜುಗಳ ಪ್ರಕಾರ ಈ ಸಂಖ್ಯೆ 12 ಕೋಟಿ. ಹಳ್ಳಿ ಪ್ರದೇಶಗಳಲ್ಲಿನ ಪರಿಸ್ಥಿತಿ ಈಗಲೂ ಶೋಚನೀಯ. ದೇಶದ ಕೆಲವು ಭಾಗಗಳಲ್ಲಿ ಕುಡಿಯುವ ನೀರೂ ಸಿಗುವುದಿಲ್ಲ. ದೇಶದ ಒಂದೆಡೆ ಪ್ರವಾಹವಿದ್ದರೆ ಇನ್ನೊಂದೆಡೆ ಬರ. ನೀರಿನ ತೀವ್ರ ಅಭಾವ. ನಗರಗಳಲ್ಲಿ ನೈರ್ಮಲ್ಯ, ಮೂಲಭೂತ ಸೌಕರ್ಯಗಳೇನೂ ಇಲ್ಲದ ಕೊಳೆಗೇರಿಗಳಲ್ಲಿ ಶೋಚನೀಯ, ಅಮಾನವೀಯ ಪರಿಸ್ಥಿತಿಗಳಲ್ಲಿ ಹಲವಾರು ಮಂದಿ ಬದುಕಬೇಕಾಗಿ ಬಂದಿದೆ. ಭೂ ಮಾಲಕರೊಂದಿಗೆ ರಾಜಿ ಮಾಡಿಕೊಂಡಿದ್ದರಿಂದಾಗಿ ಹಳೆ ಭೂ ಸಂಬಂಧಗಳು ಹಾಗೆಯೇ ಉಳಿದಿವೆ. ಎಡ ಶಕ್ತಿಗಳು ಬಲಿಷ್ಠವಾಗಿರುವಲ್ಲಿ ಮಾತ್ರ ಇದು ಬದಲಾಗಿದೆ. ಶಿಕ್ಷಣ ಸೌಲಭ್ಯಗಳು ಸ್ವಲ್ಪ ಮಟ್ಟಿಗೆ ಹೆಚ್ಚಾದರೂ ಅವು ಹೆಚ್ಚುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ಇಲ್ಲ. "... ನಾವು ಜಾಣ್ಮೆಯಿಂದ ಯೋಚಿಸಬೇಕು. ಆ ಮೂಲಕ ಜನಸಮೂಹಗಳ ಮೇಲಿನ ಹೊರೆ ಕಮ್ಮಿಯಾಗುತ್ತಾ ಬರಬೇಕು ಅವರ ಜೀವನ ಮಟ್ಟ ಮೇಲಕ್ಕೇರುತ್ತಿರಬೇಕು" ಎಂದು ನೆಹರೂರವರ ಮಾತಿನ ಅರ್ಥ ಇದೇ ಏನು?

ಮರೆತಿರುವ ಅನುಭವ

ಸ್ವಾತಂತ್ರ್ಯ ದೊರೆತ ಹೊಸದರಲ್ಲಿ ಸ್ವಾವಲಂಬನೆ ಮತ್ತು ಸ್ವದೇಶಿ ತಂತ್ರಜ್ಞಾನದ ಮೇಲೆ ಒತ್ತು ಹಾಕಲಾಗುತ್ತಿತ್ತು. ಆದರೆ ಈಗಿನ ಮಂತ್ರವೆಂದರೆ ಉದಾರೀಕರಣ ಮತ್ತು ಜಾಗತೀಕರಣ. ಅದರ ವಾಸ್ತವ ಅರ್ಥ ಎಂದರೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬಹಿರಂಗ ಆಹ್ವಾನ ಹಾಗೂ ಐಎಂಎಫ್ - ವಿಶ್ವಬ್ಯಾಂಕ್ ಆದೇಶಗಳಿಗೆ ಹೆಚ್ಚೆಚ್ಚು ಶರಣು. ಭಾರತೀಯ ಜನಗಳ ಶ್ರಮ ಮತ್ತು ಹಣದಿಂದ ಕಟ್ಟಿದ ಸಾರ್ವಜನಿಕ ವಲಯವನ್ನು ಈಗ ಕಳಚಿ ಹಾಕುವ ಪ್ರಯತ್ನ ಸಾಗಿದೆ. ಅವನ್ನು ಅತೀ ಅಗ್ಗದರದಲ್ಲಿ ಮಾರಿ ತಿನ್ನುವ ಪ್ರಯತ್ನ ನಡೆದಿದೆ. ಈ ಧೋರಣೆಗಳನ್ನು ಅನುಸರಿಸುವುದರಿಂದಾಗುವ ಪರಿಣಾಮಗಳ ಪರಿವೆಯೇ ಈಗಿನ ಆಳರಸರಿಗೆ ಇದ್ದಂತಿಲ್ಲ. ಈಸ್ಟ್ ಇಂಡಿಯಾ ಕಂಪೆನಿ ಏನು ಮಾಡಿತು, ಆರ್ಥಿಕ ಶೋಷಣೆ ಹೇಗೆ ರಾಜಕೀಯ ಪರಿಣಾಮ ಬೀರುತ್ತದೆ ಎಂಬುದನ್ನು ಎಷ್ಟೊಂದು ಸುಲಭವಾಗಿ ಅವರು ಮರೆತುಬಿಟ್ಟಿದ್ದಾರೆ! ಅಷ್ಟೇ ಅಲ್ಲ, ಸರಕಾರ ಶಿಕ್ಷಣ, ಆರೋಗ್ಯ, ಸಾರಿಗೆ ಮತ್ತು ಇತರ ಸಾಮಾಜಿಕ ವಲಯಗಳಿಂದ ಹಿಂದೆ ಸರಿದು ಖಾಸಗಿಯವರಿಗೆ ಅವನ್ನು ಒಪ್ಪಿಸಲು ಮುಂದಾಗುತ್ತಿದೆ. ಕೃಷಿ ರಂಗದಲ್ಲಿ ಒಂದು ಹಸಿರುಕ್ರಾಂತಿ ನಡೆದರೂ, ಆಹಾರಧಾನ್ಯಗಳಲ್ಲಿ ಸ್ವಯಂಪೂರ್ಣತೆ ಸಾಧಿಸಿದರೂ ನಮ್ಮ ಬಹುಪಾಲು ಜನ ಸಮೂಹ ಪೋಷಕ ಆಹಾರದಿಂದ ವಂಚಿತರಾಗಿದ್ದಾರೆ. ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳಂತೂ ಅವಿರತವಾಗಿ ಏರುತ್ತಲೇ ಇವೆ. ಕೃಷಿ ಕಾರ್ಮಿಕರ ಪರಿಸ್ಥಿತಿ ಅತ್ಯಂತ ಶೋಚನೀಯ. ಅವರಿಗೆ ಕನಿಷ್ಟ ಕೂಲಿ ಹಾಗೂ ಕೆಲಸದ ಪರಿಸ್ಥಿತಿ ಒದಗಿಸುವಂತಹ ಒಂದು ಕೇಂದ್ರೀಯ ಶಾಸನ ಬೇಕೆಂಬ ದೀರ್ಘ ಕಾಲದ ಬೇಡಿಕೆ ಇನ್ನೂ ಈಡೇರಿಲ್ಲ.

ಅಸಮಾನ ಆರ್ಥಿಕ ಬೆಳವಣಿಗೆ

ಸ್ವಲ್ಪ ಮಟ್ಟಿಗೆ ಅಧಿಕಾರಗಳ ವಿಕೇಂದ್ರೀಕರಣವಾಗಿದೆ, ವಿಶೇಷವಾಗಿ ರಾಜ್ಯ ಮಟ್ಟದಿಂದ ಪಂಚಾಯತುಗಳಿಗೆ. ಆದರೆ ಇನ್ನೊಂದೆಡೆ ಸಮವರ್ತಿ ಪಟ್ಟಿಯಲ್ಲಿದ್ದ ಕೆಲವು ವಿಷಯಗಳನ್ನು ಕೇಂದ್ರದ ಪಟ್ಟಿಗೆ ಸೇರಿಸಿಕೊಳ್ಳುವ ಕೆಲಸವೂ ನಡೆದಿದೆ. ಅಂದರೆ ಕೆಲವು ವಲಯಗಳಲ್ಲಿ ರಾಜ್ಯಗಳಿಗೆ ಇದ್ದ ಅಲ್ಪಸ್ವಲ್ಪ ಅಧಿಕಾರಗಳನ್ನು ಕೇಂದ್ರವೇ ವಹಿಸಿಕೊಳ್ಳಲು ಪ್ರಯತ್ನಿಸಿದೆ. ನೆಹರೂ ಒಂದು ಬಲಿಷ್ಠ ಪ್ರಜಾಪ್ರಭುತ್ವ ದೇಶವನ್ನು ಕಟ್ಟುವ ಮಾತನಾಡುತ್ತಿದ್ದಾಗ ಅವರಾಗಲೀ, ಸಂವಿಧಾನವನ್ನು ರೂಪಿಸಿದವರಾಗಲೀ ಮೀಸಾ, ಎನ್.ಎಸ್.ಎ., ಎಸ್ಮಾದಂತಹ ಕರಾಳ ಶಾಸನಗಳನ್ನು ತರಬಹುದು ಎಂದು ಮುಂಗಂಡಿರಲಿಕ್ಕಿಲ್ಲ; ತುರ್ತು ಪರಿಸ್ಥಿತಿಯ ಕರಾಳ ದಿನಗಳು ಬರಬಹುದೆಂದೂ ಊಹಿಸಿರಲಿಕ್ಕಿಲ್ಲ. ಸಂವಿಧಾನದ ಕಲಮು 356 ರಂತಹವುಗಳನ್ನು ಇಷ್ಟೊಂದು ದುರುಪಯೋಗಪಡಿಸಿಕೊಳ್ಳಬಹುದು ಎಂದೂ ಅವರು ಕನಸಿನಲ್ಲೂ ನಿರೀಕ್ಷಿಸಿರಲಿಕ್ಕಿಲ್ಲ. ನಿಜ, ಜನಸಮೂಹಗಳ ಪ್ರತಿರೋಧದಿಂದ ಈ ಸಮಸ್ಯೆಯನ್ನು ಎದುರಿಸಿ ನಿಲ್ಲಲು ಸಾಧ್ಯವಾಯಿತು.

ಈಗ ಜನಗಳ ಇಚ್ಛೆಯನ್ನು ತುಳಿದು ಹಾಕುವ ಪ್ರಯತ್ನ ನಡೆಯುತ್ತಿದೆ, ಕುತಂತ್ರ ಹಾಗೂ ಕಸರತ್ತುಗಳನ್ನು ನಡೆಸಲಾಗುತ್ತಿದೆ. ಚುನಾಯಿತ ಪ್ರತಿನಿಧಿಗಳು ಮನಬಂದಂತೆ ನಿಲುವು ಬದಲಾಯಿಸುತ್ತಾರೆ. ಪಕ್ಷ ಬದಲಾಯಿಸುತ್ತಾರೆ ಕೇವಲ ದುಡ್ಡಿಗಾಗಿ.

ಅಸಮಾನ ಆರ್ಥಿಕ ಬೆಳವಣಿಗೆ ಹಾಗೂ ವಿವಿಧ ಪ್ರದೇಶಗಳ ಜನರ ಬೇಡಿಕೆಗಳ ನಿರ್ಲಕ್ಷ್ಯದಿಂದಾಗಿ ಪ್ರತ್ಯೇಕತಾವಾದಿ ಹಾಗೂ ಛಿದ್ರಕಾರಿ ಪ್ರವೃತ್ತಿಗಳು ಹೆಚ್ಚುವಂತಾಗಿದೆ. ಇವರ ಜೊತೆ ಜೊತೆಗೇ ಕೋಮುವಾದದ ವಿಷ ಹರಡಲು ಇದು ಅವಕಾಶ ನೀಡಿದೆ. ಇವನ್ನಲ್ಲಿ ಸ್ವತಂತ್ರ ಭಾರತದ ಆಳುವ ಮಂದಿ ಕೋಮುವಾದಿ ಶಕ್ತಿಗಳತ್ತ ರಾಜಿ ಮನೋಭಾವ ತೋರ್ಪಡಿಸುತ್ತಾ ತಮ್ಮ ಕಾಣಿಕೆಯನ್ನೂ ಅರ್ಪಿಸುತ್ತಿದ್ದಾರೆ! ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವ ಬಗ್ಗೆ ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಯನ್ನು ಈಗ ಮತ್ತೆ ನೆನಪಿಸಿಕೊಳ್ಳಬೇಕಾಗಿದೆ.

ಜಾತಿ ಭಾವನೆಗಳನ್ನು ರಾಜಕೀಯ ಪ್ರಯೋಜನ ಪಡೆಯಲು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ವರ್ಷ ಹೋದಂತೆ ಈ ಪ್ರವೃತ್ತಿ ಬಲವಾಗುತ್ತಿದೆ. ಜಾತಿವಾದಿ ಪಕ್ಷಗಳು, ಕೂಟಗಳು ಹುಟ್ಟಿಕೊಳ್ಳುತ್ತಿವೆ.

ಹಗರಣಗಳು-ಹಗರಣಗಳು

ಇನ್ನು ಸ್ವಚ್ಛ ಸರಕಾರದ ಭರವಸೆಯ ಬಗ್ಗೆ ಹೇಳದಿರುವುದೇ ಉತ್ತಮ. ಕಳೆದ ಕೆಲವು ವರ್ಷಗಳಲ್ಲಿ ಹಗರಣಗಳ ನಂತರ ಹಗರಣಗಳು ಬಯಲಿಗೆ ಬರುತ್ತಿವೆ. ವಿಶ್ವದೆದುರು ಭಾರತದ ಪ್ರತಿಷ್ಠೆಗೆ ಕಳಂಕ ತರುತ್ತಿವೆ. ನಾವು ನಾಚಿಕೆಯಿಂದ ತಲೆತಗ್ಗಿಸಬೇಕಾದ ಪರಿಸ್ಥಿತಿ ಬರುತ್ತಿದೆ. ಜನ ಒಟ್ಟಾರೆಯಾಗಿ ರಾಜಕಾರಣಿಗಳನ್ನು ತಿರಸ್ಕಾರದಿಂದ ನೋಡುವಂತಾಗಿದೆ. ಒಬ್ಬ ಮಾಜೀ ಪ್ರಧಾನಿ, ಆತನ ಹಲವು ಸಹಯೋಗಿಗಳು ಈ ಹಗರಣಗಳಲ್ಲಿ ಸಿಲುಕಿ ಕೊಂಡಿದ್ದಾರೆ. ಇವರೆಲ್ಲಾ ಸರಕಾರದ ಖಜಾನೆಗೆ ಸಾವಿರಾರು ಕೋಟಿ ರೂಪಾಯಿಗಳ ವಂಚನೆ ಮಾಡಿದ ಆಪಾದನೆಗೊಳಗಾಗಿದ್ದಾರೆ. ರಾಜಕೀಯ ವ್ಯವಸ್ಥೆಯಲ್ಲಿ ಜನಗಳ ವಿಶ್ವಾಸ ಕುಸಿಯುತ್ತಿದೆ.

ಹಲವು ರಂಗಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದರೂ ನಮ್ಮ ವಿಶಾಲ ಜನಸಮೂಹಗಳ ಪರಿಸ್ಥಿತಿಯನ್ನು ಸುಧಾರಿಸಲು ಅಷ್ಟೇ ಸಾಲದು. ಈ ದೇಶದ ಕೋಟ್ಯಾಂತರ ಜನರ ಪಾಲಿಗೆ ಉಳಿದಿರುವುದು ಈಗಲೂ ಬಡತನ, ಹಸಿವು, ನಿರುದ್ಯೋಗ, ಖಾಯಿಲೆಗಳು, ನಿರಕ್ಷರತೆಯ ಶಾಪಗಳೇ. ಅವರ ನಿರೀಕ್ಷೆಗಳು ನುಚ್ಚುನೂರಾಗಿವೆ. ಒಂದು ಹೊಸ ಸ್ವತಂತ್ರ ಭಾರತದ ಕನಸು ಇನ್ನೂ ನನಸಾಗಿಲ್ಲ. ರಾಷ್ಟ್ರೀಯ ಆಂದೋಲನ ತನ್ನ ಮುಂದಿಟ್ಟುಕೊಂಡಿದ್ದ ಗುರಿಗಳ ಸಾಧನೆಗೆ ಮತ್ತೆ ನಮ್ಮನ್ನು ಸಮರ್ಪಿಸಿಕೊಳ್ಳಬೇಕಾಗಿದೆ.

ಕಮ್ಯುನಿಸ್ಟರಿಗೆ ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆಯಿದೆ. ಸ್ವಾತಂತ್ರ್ಯ ಆಂದೋಲನದ ಒಂದು ಸಮಗ್ರ ಭಾಗವಾಗಿ ಅವರು ಅಪಾರ ತ್ಯಾಗ-ಬಲಿದಾನಗಳನ್ನು ನೀಡಿದ್ದಾರೆ; ಕಾನೂನು ಬದ್ಧವಾಗಿ ಕೆಲಸ ಮಾಡಲು ಬಿಡದ ಬ್ರಿಟಿಶ್ ಆಡಳಿತದ ಅಮಾನುಷ ದಮನವನ್ನು ಎದುರಿಸಿದ್ದಾರೆ. ಸ್ವಾತಂತ್ರ್ಯದ ನಂತರ ಕಮ್ಯುನಿಸ್ಟರು- ಮುಖ್ಯವಾಗಿ ಸಿಪಿಐ(ಎಂ) ಈ ಗುರಿಗಳ ಸಾಧನೆಯತ್ತ ದೇಶವನ್ನು ಒಯ್ಯುವ ಆಂದೋಲನಗಳನ್ನು ಕಟ್ಟಿ ಬೆಳೆಸಲು ಪ್ರಯತ್ನಿಸಿದ್ದಾರೆ. ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಪ್ರಜಾಪ್ರಭುತ್ವದ ಮೇಲೆ ನಡೆಯುತ್ತಿರುವ ಧಾಳಿಗಳ ವಿರುದ್ಧ, ನಮ್ಮ ಸಮಾಜದ ಧರ್ಮನಿರಪೇಕ್ಷ ಸ್ವರೂಪದ ರಕ್ಷಣೆಗಾಗಿ, ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಾಗಿ, ಇಡೀ ವಿಶ್ವದ ಮೇಲೆ ಯಜಮಾನಿಕೆ ನಡೆಸುವ ಸಾಮ್ರಾಜ್ಯಶಾಹಿಯ ಪ್ರಯತ್ನಗಳು ಇತ್ಯಾದಿಗಳ ವಿರುದ್ಧ ಸಿಪಿಐ(ಎಂ) ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿದೆ, ನಡೆಸುತ್ತಿದೆ.

ನಮ್ಮ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ವೀರ ಹುತಾತ್ಮರಿಗೆ ನಾವು ವೀರವಂದನೆ ಸಲ್ಲಿಸುತ್ತೇವೆ. ಅವರು ಕಂಡರಿಸಿದ ಒಂದು ಉತ್ತಮ ಭವಿಷ್ಯತ್ತಿಗಾಗಿನ ಹೋರಾಟವನ್ನು ಮುಂದುವರಿಸುವ, ಹಸಿವು, ಬಡತನ, ನಿರುದ್ಯೋಗದಿಂದ ಮುಕ್ತವಾದ, ಸಮಾನತೆಯಿರುವ, ಮಾನವನಿಂದ ಮಾನವನ ಶೋಷಣೆಯಿರದ ಮುಕ್ತವಾದ ಒಂದು ಭಾರತವನ್ನು ಕಟ್ಟುವ ಪ್ರತಿಜ್ಞೆಗೈಯುತ್ತೇವೆ. ಸ್ವಾತಂತ್ರ್ಯ ಆಂದೋಲನಕ್ಕೆ ಸ್ಫೂರ್ತಿ ನೀಡಿದ, ಆದರೆ ಇದುವರೆಗೆ ಈಡೇರದ ಗುರಿಸಾಧನೆಗಾಗಿ ಪ್ರಯತ್ನಿಸಲು ನಮ್ಮನ್ನು ಮತ್ತೆ ಸಮರ್ಪಿಸಿಕೊಳ್ಳುತ್ತೇವೆ.



ದೇಶದೊಳಗೆ

ವಿಶ್ವ

ಒರಿಸ್ಸಾದಲ್ಲಿ ಭುಗಿಲೆದ್ದಿರುವ ಪ್ರತಿಭಟನೆಯ ಅಲೆ

ಅತ್ಯಾಚಾರಕ್ಕೆಳೆಸಿದ ಅಡ್ವೊಕೇಟ್ ಜನರಲ್ ವಿರುದ್ಧ ಕ್ರೋಧ

ಒರಿಸ್ಸಾದ ಅಡ್ವೋಕೇಟ್ ಜನರಲ್ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಲು ಯತ್ನಿಸಿದ ತೀರಾ ನಾಚಿಕೆಗೇಡಿನ ಪ್ರಸಂಗ ವರದಿಯಾಗಿದೆ. ಸ್ವತಃ ಒಂದು ರಾಜ್ಯದಲ ಅಡ್ವೊಕೇಟ್ ಜನರಲ್(ಎಜಿ) ಅವರೇ ಇಂಥ ಹೀನ ಕೃತ್ಯಕ್ಕೆ ಯತ್ನಿಸಿದ್ದು ಇಡೀ ರಾಜ್ಯವೇ ಅಲ್ಲದೆ ದೇಶಾದ್ಯಂತ ಖಂಡನೆಗೆ ಗುರಿಯಾಗಿದೆ. ಒರಿಸ್ಸಾದಲ್ಲಿ ಪ್ರತಿಭಟನೆಯ ಅಲೆ ಎದ್ದಿದೆ.

ಮಹಿಳಾ ಸಂಘಟನೆಗಳಲ್ಲದೆ ರಾಜಕೀಯ ಪಕ್ಷಗಳೂ ಬೀದಿಗೆ ಇಳಿದಿದ್ದು ಎ.ಜಿ. ಇಂದ್ರಜಿತ್ ರಾಯ್‌ರನ್ನು ತಕ್ಷಣವೇ ಬಂಧಿಸುವಂತೆ ಒತ್ತಾಯಿಸಿವೆ. ಈ ಬೇಡಿಕೆಯನ್ನು ಮುಂದಿಟ್ಟುಕೊಂಡು ಧರಣಿ, ಪ್ರದರ್ಶನ, ಸಾರ್ವಜನಿಕ ಸಭೆ ಮೊದಲಾದವುಗಳು ರಾಜ್ಯಾದ್ಯಂತ ನಡೆಯುತ್ತಿವೆ.

ಈ ಪ್ರಕರಣದ ಕೇಂದ್ರ ಬಿಂದು ಅಂಜನಾ ಮಿಶ್ರ. ಅವರು ಐಎಫ್‌ಎಸ್(ಅರಣ್ಯಾಧಿಕಾರಿ) ಅಧಿಕಾರಿಯೊಬ್ಬರ ಪತ್ನಿ. ತನ್ನನ್ನು ತ್ಯಜಿಸಿದ ಗಂಡನ ವಿರುದ್ಧ ಕಾನೂನು ಸಮರ ನಡೆಸುತ್ತಿದ್ದ ಈ ಮಹಿಳೆಯ ಮೇಲೆ ಇನ್ನೊಂದು ಅಪಮಾನಕರ ದೌರ್ಜನ್ಯ ನಡೆಸಲು ನ್ಯಾಯ ಒದಗಿಸಬೇಕಾಗಿದ್ದ ವ್ಯಕ್ತಿಯೇ ಯತ್ನಿಸಿದ್ದು ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂಥ ಕೃತ್ಯವಾಗಿದೆ.

ಅಂಜನಾಗೆ ದೈಹಿಕವಾಗಿ ಹಿಂಸಿಸುತ್ತಿದ್ದ ಅವರ ಪತಿ ತನ್ನ ನಾದಿನಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ. ತನಗೆ ಅನ್ಯಾಯವೆಸಗಿರುವ ಗಂಡನ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾನೂನಿನ ಮೊರೆ ಹೋಗಿದ್ದರು ಅಂಜನಾ. ಅಡ್ವೊಕೇಟ್ ಜನರಲ್ ರಾಯ್ ಈ ಪ್ರಕರಣದಲ್ಲಿ ಚೀಫ್ ಪ್ರಾಸಿಕ್ಯೂಟರ್ ಆಗಿದ್ದಾರೆ.

ಅಂಜನಾರ ವಕೀಲ ಪೀತಾಂಬರ ಆಚಾರ್ಯ ಈ ಪ್ರಕರಣದಲ್ಲಿ ಎ.ಜಿ. ಯವರನ್ನು ಸಂಪರ್ಕಿಸಿದಾಗ ಇಂದ್ರಜಿತ್ ರಾಯ್ ಮುಖತಃ ಚರ್ಚೆಗಾಗಿ ತನ್ನ ಮನೆಗೆ ಬರುವಂತೆ ಅಂಜನಾರವರಿಗೆ ಸೂಚಿಸಿದ್ದರು.

ಮೊದಮೊದಲು ಎ.ಜಿ. ಮನೆಗೆ ಹೋಗಲು ನಿರಾಕರಿಸಿದ ಅಂಜನಾ ಅಸಹಾಯಕತೆಯಿಂದಾಗಿ ಕೊನೆಗೂ ಒಪ್ಪಿದರು. ಜುಲೈ 11 ರಂದು ಒರಿಸ್ಸಾ ರಾಜಧಾನಿ ಕಟಕ್‌ನ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ಎ.ಜಿಯವರ ನಿವಾಸಕ್ಕೆ ಅಂಜನಾ ಹೋದಾಗ ಅವರನ್ನು ಎ.ಜಿ. ತನ್ನ ಮಲಗುವ ಕೋಣೆಗೆ ಕರೆದುಕೊಂಡು ಹೋದರು. ಚರ್ಚೆ ನಡೆಸುತ್ತಾ ಹಠಾತ್ತನೇ ಅಂಜನಾರವರನ್ನು ಹಾಸಿಗೆ ತಳ್ಳಿ ಅವರ ಶೀಲ ಹರಣಕ್ಕೆ ಯತ್ನಿಸಿದರು. ಅದೃಷ್ಟವಶಾತ್ ಅಂಜನಾಗೆ ಕೋಣೆಯಿಂದ ಹೊರಗೆ ಓಡಿ ಬರಲು ಸಾಧ್ಯವಾಯಿತು. ಅತ್ಯಾಚಾರ ಯತ್ನದಿಂದ ಪಾರಾಗಿ ಬಂದ ಆಕೆ ಪೋಲೀಸರಿಗೆ ದೂರು ಸಲ್ಲಿಸಿದರು.

ರಾಜ್ಯ ಸರಕಾರ ಮೌನ

ಇಡೀ ಒಂದು ರಾಜ್ಯದ ಕಾನೂನು ವ್ಯವಸ್ಥೆಯ ಉನ್ನತ ಅಧಿಕಾರಿಯೊಬ್ಬರಿಂದ ಕಾನೂನು ವಿರೋಧಿ - ಮಹಿಳಾ ವಿರೋಧಿ ಕೃತ್ಯ ನಡೆದಿರುವಾಗ ಒರಿಸ್ಸಾದ ಕಾಂಗ್ರೆಸ್ ಸರಕಾರ ಮೌನವಾಗಿ ಕುಳಿತಿದೆ. ಇದರಿಂದ ಒಂದು ರೀತಿಯಲ್ಲಿ ಗಾಯದ ಮೇಲೆ ಬರೆಯನ್ನು ಎಳೆದಂತಾಗಿದೆ. ಇದರಿಂದ ಮಹಿಳಾ ಸಂಘಟನೆಗಳ ಕೋಪ ಇನ್ನಷ್ಟು ಹೆಚ್ಚಾಗಿದೆ.

ಮೊದಲಿಗೆ ತನ್ನ ಪತಿ, ಈಗ ಅಡ್ವೊಕೇಟ್ ಜನರಲ್, ಹೀಗೆ ಇಬ್ಬರ ವಿರುದ್ಧವೂ ಕಾನೂನು ಸಮರ ಹೂಡಿರುವ ಅಂಜನಾರಿಗೆ ಇಡೀ ರಾಜ್ಯದ ಮಹಿಳಾ ಸಮುದಾಯ ಬೆಂಬಲಕ್ಕೆ ನಿಂತಿದೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(ಎಐಡಿಡಬ್ಲ್ಯೂಎ), ಉತ್ಕಲ್ ಮಹಿಳಾ ಸಮಿತಿ, ಸೇವಾ ಮಹಿಳಾ ಸಮಿತಿ ಮತ್ತಿತರ ಮಹಿಳಾ ಸಂಘಟನೆಗಳು ಜನತಾದಳ, ಸಿಪಿಐ(ಎಂ) ಮತ್ತು ಸಿಪಿಐನೊಂದಿಗೆ ಸೇರಿ ರಾಜ್ಯ ರಾಜಧಾನಿಯ ಪಿಎಂಜಿ ಚೌಕದಲ್ಲಿ ಜುಲೈ 21 ರಂದು ಧರಣಿ ನಡೆಸಿದವು.

ವಜಾ, ಬಂಧನಕ್ಕೆ ಒತ್ತಾಯ

ಎ.ಜಿ.ರಾಯ್ ದುರ್ವರ್ತನೆ ಆಘಾತಕಾರಿ ಎಂದು ವರ್ಣಿಸಿರುವ ಮಹಿಳಾ ಸಂಘಟನೆಗಳು ಅಡ್ವೊಕೇಟ್ ಜನರಲ್‌ನ್ನು ಹುದ್ದೆಯಿಂದ ವಜಾ ಮಾಡಿ ಅವರನ್ನು ಬಂಧಿಸುವಂತೆ ಒತ್ತಾಯಪಡಿಸಿವೆ. ಇಡೀ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸುವಂತೆಯೂ ಆಗ್ರಹಿಸಿವೆ.

ಎಐಡಿಡಬ್ಲ್ಯೂಎ ಯ ರಶ್ಮಿ ಮೊಹಂತಿ, ಉತ್ಕಲ್ ಮಹಿಳಾ ಸಮಿತಿಯ ಪ್ರತಿಭಾ ಮಿಶ್ರ, ಎಸ್‌ಎಫ್‌ಐ ನ ಸ್ವಯಂ ಪ್ರಭಪರ್ದಿ, ಮಹಿಳಾ ಜನತಾದ ಕಸ್ತೂರಿಬಾ ಪಟ್ನಾಯಕ್ ಮತ್ತು ಸಿಪಿಐ(ಎಂ)ನ ಸತೋಷ್ ದಾಸ್ ಅವರ ನೇತೃತ್ವದಲ್ಲಿ 17 ಸದಸ್ಯರ ನಿಯೋಗವೊಂದು ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಪತ್ರವೊಂದನ್ನು ಸಲ್ಲಿಸಿದರು.

ಹೈಕೋರ್ಟ್ ಮುಂದೆ ಪ್ರದರ್ಶನ

ಸಿಪಿಐ(ಎಂ) ಮತ್ತು ಎಐಡಿಡಬ್ಲ್ಯೂಎ ಒರಿಸ್ಸಾ ಹೈಕೋರ್ಟ್ ಮುಂದೆ ಬೃಹತ್ ಪ್ರದರ್ಶನವನ್ನು ನಡೆಸಿದವು. ಇಂದ್ರಜಿತ್ ರಾಯ್‌ಯನ್ನು ತಕ್ಷಣ ಎ.ಜಿ. ಹುದ್ದೆಯಿಂದ ಕಿತ್ತುಹಾಕಿ ಸೆರೆಮನೆಗೆ ತಳ್ಳುವಂತೆ ಪ್ರದರ್ಶನಕಾರರು ಒತ್ತಾಯಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜನಾರ್ದನ ಪತಿ, ಸುಭಾಷ್ ಸಿಂಗ್, ಪ್ರದೀಪ ಸತ್ಪತಿ ಮತ್ತು ಎಐಡಿಡಬ್ಲ್ಯೂಎ ನ ರೇಣುಕ ಮೊಹಂತಿ ನೇತೃತ್ವದ ನಿಯೋಗವೊಂದು ಹೈಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ ಮನವಿ ಪತ್ರವೊಂದನ್ನು ಸಲ್ಲಿಸಿತು. ಈ ಮನವಿಯನ್ನು ಸಾರ್ವಜನಿ ಹಿತಾಸಕ್ತಿಯ ಮೊಕದ್ದಮೆಯನ್ನಾಗಿ ಪರಿಗಣಿಸುವುದಾಗಿ ಮುಖ್ಯ ನ್ಯಾಯಾಧೀಶರು ಭರವಸೆ ನೀಡಿದರು.

ಕೈಕೋಳ ತೊಡಿಸಿ....

ಜುಲೈ 29 ರಂದು ರಾಜ್ಯ ಸರಕಾರದ ಕಾರ್ಯಾಲಯದ(ಸೆಕ್ರೇಟರಿಯಾಟ್) ಮುಂದೆ ಬೃಹತ್ ಪ್ರದರ್ಶನ ನಡೆಸಿದ ನೂರಾರು ಮಹಿಳೆಯರು, ಯುವಜನರು ಮತ್ತು ವಿದ್ಯಾರ್ಥಿಗಳು ಬಂಧನಕ್ಕೆ ಒಳಗಾದರು.

ಸುಮಾರು 300 ಕ್ಕೂ ಹೆಚ್ಚು ಜನರು ಸೆಕ್ರೆಟರಿಯಾಟ್ ಬಳಿ ಮೆರವಣಿಗೆಯಲ್ಲಿ ತೆರಳಲು ಯತ್ನಿಸಿದಾಗ ಪೋಲೀಸರು ತಡೆದರು. 'ಇಂದ್ರಜಿತ್ ರಾಯ್‌ಗೆ ಕೈಕೋಳ ತೊಡಿಸಿ' 'ಆತನನ್ನು ಎ.ಜಿ. ಹುದ್ದೆಯಿಂದ ತೆಗೆದುಹಾಕಿ' ಎಂಬುದು ಪ್ರಮುಖ ಘೋಷಣೆಯಾಗಿದ್ದವು. 11 ವಿದ್ಯಾರ್ಥಿ, ಯುವಜನ ಹಾಗೂ ಮಹಿಳಾ ಸಂಘಟನೆಗಳು ಈ ಚಳುವಳಿಯನ್ನು ಸಂಯುಕ್ತವಾಗಿ ಹಮ್ಮಿಕೊಂಡಿದ್ದವು.

ಎಐಡಿಡಬ್ಲ್ಯೂಎ, ಯುಎಂಎಸ್, ಮಹಿಳಾ ಜನತಾ, ಡಿವೈಎಫ್‌ಐ, ಎಸ್‌ಎಫ್‌ಐ, ಯುವ ಜನತಾ, ಎಐವೈಎಫ್, ಎಐಎಸ್‌ಎಫ್, ಛಾತ್ರ ಜನತಾ ಮತ್ತು ಸಮಾಜವಾದಿ ಜನತಾ ಪಕ್ಷದ(ಎಸ್‌ಜೆಪಿ) ವಿದ್ಯಾರ್ಥಿ ಹಾಗೂ ಯುವ ವಿಭಾಗಗಳು ಪಾಲ್ಗೊಂಡಿದ್ದವು.

ಎ.ಜಿ. ಇಂದ್ರಜಿತ್ ರಾಯ್ ಮತ್ತು ಆತನಿಗೆ ರಕ್ಷಣೆ ಒದಗಿಸುತ್ತಿರುವ ಮುಖ್ಯಮಂತ್ರಿ ಜೆ.ಬಿ.ಪಟ್ನಾಯಕ್ ಪ್ರತಿಕೃತಿಗಳನ್ನು ಒಯ್ದು ಪ್ರತಿಭಟನಾಕಾರರು ಸಾರ್ವಜನಿಕ ವಿಚಾರಣೆಯ ನಂತರ ಅವುಗಳನ್ನು ಗಲ್ಲಿಗೇರಿಸಿದರು.

ಪ್ರದರ್ಶನ ಕಾನೂನು ಬಾಹಿರ ಎಂದು ಘೋಷಿಸಿದ ಪೋಲೀಸರು ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ ಮಾಡಿ ಬಂಧಿಸಿದರು. ಮಹಿಳಾ ಕಾರ್ಯಕರ್ತರನ್ನು ಬಂಧಿಸಲಾಯಿತಲ್ಲದೆ ಪುರುಷ ಪೋಲೀಸರು ಅವರೊಂದಿಗೆ ಅಸಭ್ಯವಾಗಿ ವರ್ತಿಸಿದರು. ಅನೇಕ ಜನರು ಪೋಲೀಸ್ ದೌರ್ಜನ್ಯದಿಂದ ಗಾಯಗೊಂಡರು.

ಆರೋಪಿ ವಿದೇಶಕ್ಕೆ!

ಈ ಮಧ್ಯೆ ಅಡ್ವೊಕೇಟ್ ಜನರಲ್ ರಾಯ್ ವಿದೇಶಕ್ಕೆ ಹೋಗಿದ್ದಾರೆ. ಈ ಪ್ರಕರಣದಲ್ಲಿ ರಾಜ್ಯ ಸರಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಮಹಿಳೆಯ ಮಾನಕ್ಕೆ ಸಂಬಂಧಿಸಿದ ಇಂಥ ಪ್ರಕರಣವನ್ನಾದರೂ ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಕ್ರಮಕೈಗೊಳ್ಳದಿರುವುದು ಈ ಸರಕಾರದ ಬೇಜಾವಾಬ್ದಾರಿತನಕ್ಕೆ ಹಿಡಿದ ಕನ್ನಡಿಯಾಗಿದೆ.

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರೀಯ ಆಂದೋಲನ

ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಸಿ.ಎಂ.ಪಿ.) ನೀಡಿರುವ ಆಶ್ವಾಸನೆಗಳನ್ನು ಈಡೇರಿಸುವಂತೆ ಸಂಯುಕ್ತರಂಗ ಸರಕಾರದ ಮೇಲೆ ಒತ್ತಡ ಹೇರಲು ಸಿಪಿಐ(ಎಂ) ರೂಪಿಸಿರುವ ರಾಷ್ಟ್ರೀಯ ಆಂದೋಳನದ ಅಂಗವಾಗಿ ಪಶ್ಚಿಮ ಬಂಗಾಳ ರಾಜ್ಯಾದ್ಯಂತ ನೂರಾರು ರ್‍ಯಾಲಿಗಳು. ಸಮಾವೇಶಗಳು ಮೆರವಣಿಗೆಗಳು ನಡೆದವು.

ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ಬಹುತೇಕ ಉಪವಿಭಾಗೀಯ ಪಟ್ಟಣಗಳಲ್ಲಿ ಈ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕೂಚ್ ಬಿಹಾರ್ ಪಟ್ಟಣದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ನ ಕಾರ್ಯದರ್ಶಿ ಮಂಡಳಿಯ ಸದಸ್ಯ ನಿರುಪಮ ಸೇನ್ ಚಳವಳಿಯ ಉದ್ದೇಶವನ್ನು ದೀರ್ಘವಾಗಿ ವಿವರಿಸಿದರು. ಬರನ್ ಗೋರ್‌ನಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ರಾಜ್ಯ ಸಮಿತಿ ಸದಸ್ಯ ಅಮಿತಾಬ್ ಬಸು ಮುಖ್ಯ ಭಾಷಣಕಾರರಾಗಿದ್ದರು.

ನಾಡಿಯಾ ಜಿಲ್ಲೆಯ ಕಲ್ಯಾಣಿಯಲ್ಲಿ ನಡೆದ ಉಪವಿಭಾಗೀಯ ಮಟ್ಟದ ರ್‍ಯಾಲಿಯಲ್ಲಿ ಪಂಚಾಯಿತಿ ಖಾತೆಯ ಸಹಾಯಕ ಸಚಿವ ಕಮಲೇಂದು ಸನ್ಯಾಲ್ ಮುಖ್ಯ ಅತಿಥಿಯಾಗಿದ್ದರು.

ಮಹತ್ವದ ದಿನ

ಬೃಹತ್ ಸಮಾವೇಶ

ಹೀಗೆ ರಾಜ್ಯದ ಎಲ್ಲೆಡೆ ಉತ್ಸಾಹದಿಂದ ನಡೆದ ಕಾರ್ಯಕ್ರಮಗಳ ಅಂತ್ಯ ದಲ್ಲಿ ಜುಲೈ 29 ರಂದು ಕಲ್ಕತ್ತದ ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಎಡರಂಗ ಇದನ್ನು ವ್ಯವಸ್ಥೆಗೊಳಿಸಿತ್ತು. ಎಡರಂಗದ ಅಧ್ಯಕ್ಷ ಶೈಲೇನ್ ದಾಸ್ ಗುಪ್ತಾ ಅಧ್ಯಕ್ಷತೆ ವಹಿಸಿದ್ದ ರ್‍ಯಾಲಿಯಲ್ಲಿ ಎಡರಂಗದ ಅನೇಕ ಮುಖಂಡರು ಮಾತನಾಡಿದರು.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಬಿಮಾನ್ ಬಸು ಸಮಾವೇಶವನ್ನು ಉದ್ಘಾಟಿಸಿದರು.

ಜುಲೈ 31 ರವರೆಗೆ ಪ್ರಚಾ ರಾಂದೋಲನ ನಡೆದರೂ ಇಲ್ಲಿ ರ್‍ಯಾಲಿ ಯನ್ನು 29 ರಂದು ನಡೆಸಿದ್ದು ಒಂದು ಮಹತ್ತರ ಕಾರಣಕ್ಕೆ ಎನ್ನುವುದನ್ನು ಇಲ್ಲಿ ವಿವರಿಸುವುದು ಅಗತ್ಯ.

ಸ್ವಾತಂತ್ರ್ಯ ಆಂದೋಳನದ ವೇಳೆ ಸಾಮ್ರಾಜ್ಯಶಾಹಿ ವಿರೋಧಿ ಚಳವಳಿ ಉತ್ತುಂಗಕ್ಕೆ ಏರಿದ ಸಂಕೇತವಾಗಿ ಒಂದು ಪ್ರಕರಣ ನಡೆಯಿತು. ಅದುವೇ ಅಂಚೆ ಮತ್ತು ತಂತಿ ಇಲಾಖೆ ನೌಕರರ ಭಾರೀ ಮುಷ್ಕರ. 1946 ಜುಲೈ 29 ರಂದು ನಡೆದ ಆ ಮುಷ್ಕರ ದಿಂದ ಇಡೀ ದೇಶದ ದೂರಸಂಪರ್ಕ ವ್ಯವಸ್ಥೆ ಸ್ಥಗಿತಗೊಂಡಿತು. ಬ್ರಿಟಿಷ್ ಆಳರಸರ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಯಿತು. ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದ ಆ ಪರಂಪರೆಯನ್ನು ಮುಂದಕ್ಕೊಯ್ಯುವ ಸಂಕೇತವಾಗಿ ಸಮಾವೇಶವನ್ನು ಜುಲೈ 29 ರಂದು ವ್ಯವಸ್ಥೆಗೊಳಿಸಲಾಗಿತ್ತು.

ತನ್ನದೇ ಹಾದಿಯಲ್ಲಿ ಸಾಗಲು ಬಿಡದಿದ್ದರೆ ಸಂಯುಕ್ತರಂಗ ಸರಕಾರದಲ್ಲಿ ಮುಂದುವರಿಯುವ ಬಯಕೆ ತನಗಿಲ್ಲ ಎಂದು ಹಣಕಾಸು ಸಚಿವ ಪಿ.ಚಿದಂಬರಂ ಹೇಳಿರುವುದನ್ನು ಶೈಲೇನ್ ದಾಸ್ ಗುಪ್ತಾ ಖಂಡಿಸಿದರು.

ಮುಷ್ಕರಗಳು ಹಾಗೂ ಬಂದ್ ಮೇಲೆ ನಿಷೇಧ ಹೇರಿ ಕೇರಳ ಹೈಕೋರ್ಟ್ ಹೊರಡಿರುವ ಆದೇಶವನ್ನು ಬಿಮಾನ್‌ಬಸು ವಿರೋಧಿಸಿದರು. ಈ ಪ್ರಜಾಪ್ರಭುತ್ವ ವಿರೋಧಿ ಆದೇಶವನ್ನು ಹಿಂದೆ ಪಡೆಯುವಂತೆ ಒತ್ತಡ ತರಲು ಎಡರಂಗದ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿಗಳನ್ನು ಸಂಘಟಿಸಲಾಗಿದೆ ಎಂದು ಅವರು ಹೇಳಿದರು.

ನಿಖಿಲ್ ದಾಸ್ (ಆರ್‌ಎಸ್‌ಪಿ), ಜಯಂತ ರಾಮ್(ಫಾರ್ವರ್ಡ್ ಬ್ಲಾಕ್) ಕಮಲಪತಿ(ಸಿಪಿಐ), ಮೋನಿಪಾಲ್ (ಸಮಾಜವಾದಿ ಪಕ್ಷ), ರತನ್ ಲಾಲ್ ಅಗರವಾಲ್(ಡಿಎಸ್‌ಪಿ), ಮಿಹಿರ್ ಬೈನೆ (ಆರ್‌ಸಿಪಿಐ), ಪ್ರತಿಮಾ ಚಟರ್ಜಿ (ಎಂಎಫ್‌ಬಿ), ಅಶಿಮ್ ಚಟರ್ಜಿ (ಸಿಆರ್‌ಎಲ್‌ಐ) ಮತ್ತು ದಿದ್ವರ್ ಸೇನ್ ರಾಯ್(ವಿಪ್ಲವಿ ಬಾಂಗ್ಲಾ ಕಾಂಗ್ರೆಸ್) ಅವರೂ ಸಮಾವೇಶದಲ್ಲಿ ಮಾತನಾಡಿದರು.

ದೆಹಲಿಯಲ್ಲಿ ಮಹಿಳೆಯರಿಂದ ರಸ್ತೆ ತಡೆ

ಮಹಿಳಾ ಮೀಸಲಾತಿ ಮಸೂದೆಯನ್ನು ತಕ್ಷಣವೇ ಅಂಗೀಕರಿಸುವಂತೆ ಒತ್ತಾಯಿಸಿ ನೂರಾರು ಮಹಿಳೆಯರು ಪ್ಲೆಕಾರ್ಡ್ ಹಾಗೂ ಬ್ಯಾನರ್‌ಗಳನ್ನು ಹಿಡಿದುಕೊಂಡು ಜುಲೈ 28 ರಂದು ರಾಜಧಾನಿ ದೆಹಲಿಯ ಕನಾಟ್ ಪ್ಲೇಸ್‌ನಲ್ಲಿ ರಸ್ತೆತಡೆ ಚಳವಳಿ ನಡೆಸಿದರು. ಏಳು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಈ ಚಳವಳಿಗೆ ಕರೆ ಕೊಟ್ಟಿದ್ದವು.

ಎಐಡಿಡಬ್ಲ್ಯೂಎ, ಎಐಡಬ್ಲ್ಯುಸಿ, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ಜೆಡಬ್ಲ್ಯುಸಿ, ಮಹಿಳಾ ದಕ್ಷತಾ ಸಮಿತಿ, ಎನ್.ಎಫ್.ಐ.,ಮತ್ತು ವೈಡಬ್ಲ್ಯುಸಿಎ ಇವೆ ಆ ಏಳು ಸಂಘಟನೆಗಳು.

ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು, ಶಿಕ್ಷಕಿಯರು, ವಕೀಲರನ್ನೊಳಗೊಂಡಂತೆ ಜೀವನದ ನಾನಾ ವಿಭಾಗಗಳ ನೂರಾರು ಮಹಿಳೆಯರು ಮಧ್ಯಾಹ್ನ ಸರಿಯಾಗಿ 12 ಗಂಟೆಗೆ ಕೈ ಕೈ ಜೋಡಿಸಿ ಸರಪಳಿಗಳನ್ನು ರಚಿಸಿ ಸಂಚಾರಕ್ಕೆ ತಡೆ ಒಡ್ಡಿದರು.

"ನಿಮ್ಮ ಭರವಸೆಗಳನ್ನು ನೆನಪಿಸಿ ಕೊಳ್ಳಿ" ವಿಶ್ವಾಸದ್ರೋಹ ಕ್ರಿಮಿನಲ್ ಕೃತ್ಯ "ಮಹಿಳೆಯ ಹಕ್ಕುಗಳ ವಿಚಾರದಲ್ಲಿ ಜಾತಿ, ರಾಜಕೀಯ ಮಾಡಬೇಡಿ", "ಮೂರನೇ ಒಂದು ಮೀಸಲಾತಿ ನಮಗೆ ಈಗಲೇ ಬೇಕು" ಮುಂತಾದ ಘೋಷಣೆಗಳನ್ನು ಪ್ಲೆಕಾರ್ಡ್‌ಗಳಲ್ಲಿ ಬರೆಯಲಾಗಿತ್ತು.

ಆರ್‌ಜೆಡಿ ಯೊಂದಿಗೆ ಶಾಮೀಲಾಗುತ್ತಿರುವ ಬಿಹಾರ ಆಡಳಿತ

ಬಿಹಾರ ರಾಜ್ಯ ಆಡಳಿತ ಆಳುವ ರಾಷ್ಟ್ರೀಯ ಜನತಾದಳದೊಂದಿಗೆ ಶಾಮೀಲಾಗುತ್ತಿದೆ. ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ರ ಬಂಧನದ ವಾರಂಟನ್ನು ಜಾರಿ ಮಾಡುವಲ್ಲಿ ಸಿಬಿಐ ನೊಂದಿಗೆ ಆಡಳಿತದ ಉಚ್ಚ ಅಧಿಕಾರಿಗಳ ಅಸಹಕಾರದಿಂದ ಇದು ಸ್ಪಷ್ಟವಾಗಿದೆ. ಈ ಕೃತ್ಯದಿಂದಾಗಿ ಮುಖ್ಯ ಕಾರ್ಯದರ್ಶಿ, ಡಿ.ಜಿ.ಪಿ. ಹಾಗೂ ಇತರ ಹಿರಿಯ ಅಧಿಕಾರಿಗಳು ಕಾನೂನು ಎತ್ತಿ ಹಿಡಿಯುವ ಬದಲು ಅದನ್ನು ಉಲ್ಲಂಘಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖೇದ ವ್ಯಕ್ತಪಡಿಸಿದೆ.

ಆರ್.ಜೆ.ಡಿ. ಕರೆ ನೀಡಿದ ಬಿಹಾರ್ ಬಂದ್ ವೇಳೆ ಆಡಳಿತದ ವರ್ತನೆ ಈ ಶಾಮೀಲನ್ನು ಸಾಬೀತುಪಡಿಸಿದೆ ಎಂದಿರುವ ಸಿಪಿಐ(ಎಂ) ಬಂದ್ ವೇಳೆ ಆರ್.ಜೆ.ಡಿ. ಮಂದಿ ಹರಿಯಬಿಟ್ಟ ಹಿಂಸಾಚಾರವನ್ನು ನಿಷ್ಕ್ರಿಯವಾಗಿ ನೋಡುತ್ತಿದ್ದ ಹೊಣೆ ಅವರ ಮೇಲಿದೆ. ಬಂಧನದ ವಾರಂಟ್ ಜಾರಿಗೊಳಿಸುವಲ್ಲಿ ಸಿಬಿಐ ಸೇನೆಯ ನೆರವು ಕೇಳಿದ್ದು ತಪ್ಪು ಮಾದರಿ ಹಾಕಿಕೊಟ್ಟಿದೆ ಎಂದು ಕೇಂದ್ರ ಗೃಹ ಮಂತ್ರಿಗಳು ಸಂಸತ್ತಿನಲ್ಲಿ ಸರಿಯಾಗಿಯೇ ಹೇಳಿದ್ದಾರೆ. ಆದರೆ ಆ ಹೇಳಿಕೆ ರಾಜ್ಯ ಆಡಳಿತದ ನೇತೃತ್ವ ವಹಿಸಿರುವ ಅಧಿಕಾರಿಗಳ ಅಸಹಕಾರ ಹಾಗೂ ಉದ್ದೇಶಪೂರ್ವಕ ಶಾಮೀಲಿನ ಬಗ್ಗೆ ಮೌನವಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ರಾಬ್ರಿದೇವಿ ಮಂತ್ರಿಮಂಡಲ ರಾಜ್ಯ ಪ್ರಭುತ್ವಯಂತ್ರವನ್ನು ಮಾಜಿ ಮುಖ್ಯಮಂತ್ರಿಗಳ ಹಿತ ರಕ್ಷಿಸಲು ಬಯಸಲು ವಚನ ಕೊಟ್ಟಂತಿದೆ. ಇಂತಹ ಪರಿಸ್ಥಿತಿಯನ್ನು ಕೇಂದ್ರ ಸರಕಾರ ನಿರ್ಲಕ್ಷಿಸಲು ಸಾಧ್ಯವಿಲ್ಲ. ಕಾನೂನು ಮತ್ತು ಆಡಳಿತವನ್ನು ಬುಡಮೇಲು ಮಾಡುವ ಕೆಲಸ ಮುಂದುವರಿಯದಂತೆ ತಡೆಯಲು ಅದು ಕ್ರಮ ಕೈಗೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

"ಹವಾಲಾ" - ಎಲ್ಲರ ವಿರುದ್ಧ ಕ್ರಮ ಜರುಗಿಸಲು ಸಿಪಿಐ(ಎಂ) ಆಗ್ರಹ

ಹವಾಲಾ ಮೊಕದ್ದಮೆ ಕುರಿತು ಸಿಬಿಐ ವಿಶೇಷ ನ್ಯಾಯಾಲಯ ಜನತಾದಳ ಅಧ್ಯಕ್ಷ ಶರದ್ ಯಾದವ್‌ರ ವಿರುದ್ಧ ಆಪಾದನೆಗಳನ್ನು ರೂಪಿಸಲು ನಿರ್ಧರಿಸಿದೆ. ಈ ಕೇಸಿನಲ್ಲಿ ಚಾರ್ಜ್‌ಶೀಟ್ ಆದ ರಾಜಕೀಯ ಮುಖಂಡರು, ಅಧಿಕಾರಿಗಳಲ್ಲಿ ತನ್ನ ಪಕ್ಷಕ್ಕೆ 3 ಲಕ್ಷ ರೂ. ತೆಗೆದುಕೊಂಡಿದ್ದೇನೆ ಎಂದು ಒಪ್ಪಿಕೊಂಡ ಏಕೈಕ ವ್ಯಕ್ತಿಯೆಂದರೆ ಶರದ್‌ಯಾದವ್‌ರವರು. ಆದರೆ ದೊಡ್ಡ ಮೊತ್ತವನ್ನು ಪಡೆದಿದ್ದಾರೆ ಎಂದು ಆಪಾದಿಸಲಾದ ಇತರ 15 ರಾಜಕಾರಣಿಗಳನ್ನು ದಿಲ್ಲಿ ಹೈಕೋರ್ಟ್ ಹಿಂದಿನ ತೀರ್ಪಿನ ಆಧಾರದ ಮೇಲೆ ಆರೋಪ ಮುಕ್ತಗೊಳಿಸಲಾಗಿತ್ತು.

ಸುಪ್ರೀಂಕೋರ್ಟ್ ಈ ತೀರ್ಪಿನ ವಿರುದ್ಧ ಮನವಿಯ ವಿಚಾರಣೆ ನಡೆಸುತ್ತಿದ್ದು ದಿಲ್ಲಿ ಹೈಕೋರ್ಟ್ ತೀರ್ಪಿನಲ್ಲಿ ತಪ್ಪಿದೆ, ಹವಾಲಾ ಹಣ ಪಡೆದವರೆಂದು ಆಪಾದಿಸಲಾದ ಎಲ್ಲರ ವಿರುದ್ಧವೂ ಕಾನೂನುಕ್ರಮ ಜರುಗಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಈ ನಡುವೆ ನ್ಯಾಯಾಲಯದ ನಿರ್ಣಯದ ಹಿನ್ನೆಲೆಯಲ್ಲಿ ಶರದ್ ಯಾದವ್‌ರವರು ಆಪಾದನೆಯಿಂದ ಮುಕ್ತರಾಗುವವರೆಗೆ ತಮ್ಮ ಪಕ್ಷದ ಅಧ್ಯಕ್ಷ ಸ್ಥಾನದ ಕರ್ತವ್ಯಗಳನ್ನು ವಹಿಸಿಕೊಡಲು ಮಧ್ಯಂತರ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗಸ್ಟ್ 3 ರಂದು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಸ್ವಾತಂತ್ರ್ಯ ಸಮರದ ಮಹಾಪ್ರವಾಹದ..

ಪುಟ 4 ರಿ

ಸಭಾ ಸ್ಥಾಪಿಸಲು ಮುಂದಾದರು - ನಂತ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ ಅಖಿಲ ಭಾರತ ಪ್ರಗತಿಪರ ಲೇಖಕರ ಸಂ ಇತ್ಯಾದಿಗಳನ್ನು ಸಂಘಟಿಸಲಾರಂಭಿಸಿದರ 1936 ರ ನಂತರ ನೆಹರೂ ಕಾಂಗ್ರೆಸ್ಸಿನ ಅ ಕ್ಷರಾದಾಗ ಅವರು ಸಮಾಜವಾದದ ವಿ ರಗಳನ್ನು ಜನಪ್ರಿಯಗೊಳಿಸಿ ಜನರ ನಿರೀ ಗಳನ್ನು ಎತ್ತರಿಸಿದರು. ಕಾಂಗ್ರೆಸ್ ಈ ಅ ಧಿಯಲ್ಲಿ ತೀವ್ರಗಾಮಿ ಸ್ವರೂಪ ಪಡೆಯಿತು ಹಲವು ಪ್ರಾಂತ್ಯಗಳಲ್ಲಿ ಸೋಶಲಿಸ್ಟರೂ ಕಮ್ಯುನಿಸ್ಟರೂ ಕಾಂಗ್ರೆಸ್ಸಿನಲ್ಲಿ ಪ್ರಮುಖ ಸ್ಥಾ ಗಳನ್ನು ಪಡೆದರು. ನೆಹರೂರವರ ನಂತ ಸುಭಾಶ್ ಬೋಸ್ ಅಧ್ಯಕ್ಷತೆ ವಹಿಸಿಕೊ ಡರು. 1939 ರಲ್ಲಿ ಎಡಪಂಥೀಯರ ಬೆಂ ಲದಿಂದ ಅವರು ಗಾಂಧೀಜಿಯ ಅಭ್ಯರ್ಥಿ ಪಟ್ಟಾಭಿ ಸೀತಾರಾಮಯ್ಯನವರನ್ನು ಸೋಲಿಸಿ ಪುನರಾಯ್ಕೆಯಾದರು. ಇದನ್ನು ಕಾಂಗ್ರೆಸ್ಸಿನ ಮೇಲೆ ಪ್ರಾಬಲ್ಯ ಗಳಿಸಿಕೊಂ ಡಿದ್ದ ನಾಯಕತ್ವ ಇಷ್ಟಪಡಲಿಲ್ಲ ಬೋಸ್‌ರವರಿಗೆ ಮುಕ್ತ ಅವಕಾಶ ಕೊಡ ದಂತಹ ಒಂದು ಕಾರ್ಯಕಾರಿ ಸಮಿತಿಯನ್ನು ಅವರ ಮೇಲೆ ಹೇರಲಾಯಿತು. ಕೊನೆಗೆ ಬೋಸ್ ಕಾಂಗ್ರೆಸ್ ತ್ಯಜಿಸಿ ಫಾರ್ವರ್ಡ್ ಬ್ಲಾಕ್ ರಚಿಸಿದರು.

ಫ್ಯಾಸಿಸ್ಟ್ - ವಿರೋಧಿ ಯುದ್ಧದಿಂದ ರಾಷ್ಟ್ರೀಯ ವಿಮೋಚನೆಯೆಡೆಗೆ

1939 ರಲ್ಲಿ ಎರಡನೇ ಮಹಾಯುದ್ಧ ಸಿಡಿದಾಗ ಕಾಂಗ್ರೆಸ್ ಆ ಸನ್ನಿವೇಶವನ್ನು ಉಪಯೋಗಿಸಿಕೊಳ್ಳುವಲ್ಲಿ ವಿಫಲವಾಯಿತು. ಸರಕಾರದ ಯುದ್ಧ ಪ್ರಯತ್ನಗಳನ್ನು ಬೆಂಬಲಿಸಲು ಶರತ್ತುಗಳನ್ನು ಹಾಕಲಾರಂಭಿಸಿತು. ಸೋವಿಯತ್ ಒಕ್ಕೂಟದ ಮೇಲೆ ಹಿಟ್ಲರ್ ಧಾಳಿಯ ನಂತರ ಒಂದು ಹೊಸ ವಿಶ್ವ ಸನ್ನಿವೇಶ ಉಂಟಾಯಿತು. ವಿಶ್ವಾದ್ಯಂತ ಜನಗಳು ಫ್ಯಾಸಿಸ್ಟ್ ಮಂದೆಗಳನ್ನು ಸೋಲಿಸಲು ಒಂದಾದರು. ಇದರಿಂದ ಕೊನೆಗೆ ಫ್ಯಾಸಿಸಂ ಮೇಲೆ ಗೆಲುವು ಸಾಧಿಸಲು ಸಾಧ್ಯವಾಯಿತು. ಸೋವಿಯತ್ ಒಕ್ಕೂಟ ಇದರಲ್ಲಿ ಒಂದು ಮಹತ್ವದ ಪಾತ್ರವಹಿಸಿತು. ಇದು ಇಡೀ ವಿಶ್ವ ಸನ್ನಿವೇಶವನ್ನೇ ಬದಲಿಸಿತು. ರಾಷ್ಟ್ರೀಯ ವಿಮೋಚನೆಗಾಗಿ ಹೋರಾಡುತ್ತಿದ್ದ ಶಕ್ತಿಗಳಿಗೆ ಹೊಸ ಹುಮ್ಮಸ್ಸು, ಹೊಸ ಬಲ ಬಂದಂತಾಯಿತು. ವಿಶ್ವಾದ್ಯಂತ ಸಾಮೂಹಿಕ ಉತ್ಕ್ರಾಂತಿಗಳು ನಡೆದವು. ರಾಷ್ಟ್ರೀಯ ವಿಮೋಚನೆಗೆ ಹೋರಾಟಗಳು ಭರದಿಂದ ಮುನ್ನಡೆದವು. ಭಾರತದಲ್ಲಿ 1945 ರಲ್ಲಿ ಆಝಾದ್ ಹಿಂದ್ ಸೇನೆ(ಐಎನ್ ಎ)ಯ ಬಂಧಿಗಳ ಬಿಡುಗಡೆಗಾಗಿ ಒಂದು ದೊಡ್ಡ ಪ್ರಚಾರವೇ ನಡೆಯಿತು. ಜನಗಳನ್ನು ದೊಡ್ಡ ಸಂಖ್ಯೆಯಲ್ಲಿ ಅಣಿನೆರೆಸಲಾಯಿತು. ಕಾರ್ಮಿಕ ವರ್ಗದ ಕಾರ್ಯಾಚರಣೆಗಳು ವಿವಿಧ ಸ್ವರೂಪ ಪಡೆದವು. ರೈತಾಪಿ ಜನಗಳ ಅಸಂತೃಪ್ತಿ ಸಶಸ್ತ್ರ ಹೋರಾಟಗಳ ಸ್ವರೂಪ ಪಡೆಯಿತು. ತೆಲಂಗಾಣ ಹೋರಾಟ ಇದರಲ್ಲಿ ಅತ್ಯಂತ ಭವ್ಯವಾದದ್ದು. ಫೆಬ್ರವರಿ 1946 ರಲ್ಲಿ ನಡೆದ ನಾವಿಕ ದಂಗೆ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಅಂತ್ಯ ಸಮೀಪಿಸುತ್ತಿದೆ ಎಂದು ಸಾರಿತು. ಈ ಸಾಮೂಹಿಕ ಉತ್ಕ್ರಾಂತಿಗಳ ಹಿನ್ನೆಲೆಯಲ್ಲೆ ಕಾಂಗ್ರೆಸ್ ಪಕ್ಷ ಭಾರತವನ್ನು ಮುಕ್ತಗೊಳಿಸಲು ಸಾಮ್ರಾಜ್ಯಶಾಹಿಗಳೊಂದಿಗೆ ಚೌಕಾಶಿ ನಡೆಸಿತು.

ಈ ಇಡೀ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ವರ್ಗ, ರೈತಾಪಿ ಜನಗಳು, ಮತ್ತಿತರ ಶ್ರಮಜೀವಿಗಳು ಹಾಗೂ ಬುದ್ಧಿಜೀವಿಗಳ ವಿಭಾಗ ಒಂದು ಪ್ರಮುಖ ಪಾತ್ರ ವಹಿಸಿದರು ಎಂಬುದು ಸ್ಪಷ್ಟ. ಕಾಂಗ್ರೆಸ್ಸು ಕೂಡಾ ಸೇರಿದಂತೆ ವಿವಿಧ ಪಕ್ಷಗಳು, ಶಕ್ತಿಗಳು ತಮ್ಮ ಕನಸುಗಳು ಈಡೇರುತ್ತವೆ ಎಂಬ ಜನರ ಆಕಾಂಕ್ಷೆಗಳನ್ನು ಎತ್ತರಿಸಿದರು; ಬಡವರ ಪರಿಸ್ಥಿತಿಯ ಸುಧಾರಣೆ, ದಾರಿದ್ರ್ಯ, ಹಸಿವು, ನಿರುದ್ಯೋಗ ನಿರ್ಮೂಲನೆ ಮಾಡುವುದಾಗಿ ವಚನ ನೀಡಿದರು; ಶಿಕ್ಷಣ ಮತ್ತು ಆರೋಗ್ಯ ಹಕ್ಕುಗಳನ್ನು ಖಾತರಿಗೊಳಿಸುವುದಾಗಿ, ಅಭಿವೃದ್ಧಿ ತರುವುದಾಗಿ ಮಾತುಕೊಟ್ಟರು. ಈ ಬಗ್ಗೆ ಪ್ರತ್ಯೇಕವಾಗಿ ವಿಶ್ಲೇಷಿಸೋಣ. ಈ ನಡುವೆ ರಾಷ್ಟ್ರೀಯ ಸ್ವಾತಂತ್ರ್ಯದ ನಮ್ಮ ಹೋರಾಟದ ಈ ವಿವಿಧ ಪ್ರವಾಹಗಳ ಪಾತ್ರವನ್ನು 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನೆನಪಿಸಿಕೊಡಬೇಕಾಗಿದೆ. ○

ಐ.ಎಲ್.ಓ.ವನ್ನು ಜಾಗತೀಕರಣದ ತೊತ್ತಾಗಿ ಮಾಡುವ ಹುನ್ನಾರ

ಐ.ಎಲ್.ಒ(ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ) ವಿಶ್ವಸಂಸ್ಥೆಯ ಒಂದು ಅಂಗ ಸಂಸ್ಥೆ. ಎಲ್ಲಾ ದೇಶಗಳ ಕಾರ್ಮಿಕರ ಹಿತಾಸಕ್ತಿ, ಹಕ್ಕುಗಳ ಬಗ್ಗೆ ಕೆಲಸ ಮಾಡುವ ಸಂಘಟನೆ. ಇತರ ಕೆಲವು ವಿಶ್ವಸಂಸ್ಥೆಯ ಅಂಗಸಂಸ್ಥೆಗಳಂತೆ (UNESCO, UNICEF ಇತ್ಯಾದಿ) ಪರಿಣಾಮಕಾರಿಯಾಗಿರದಿದ್ದರೂ, ಸಾಕಷ್ಟು ಕೆಲಸ ಮಾಡಿದ ಅಂತರ್ರಾಷ್ಟ್ರೀಯ ಸಂಘಟನೆ. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳ ವರ್ಗ-ಸಹಕಾರದ ಟ್ರೇಡ್ ಯೂನಿಯನ್ ಸಂಘಟನೆಗಳ ಪ್ರಭಾವ ಮೊದಲಿಂದಲೂ ಹೆಚ್ಚಾಗಿರುವ ಸಂಘಟನೆಯಾದರೂ ಒಟ್ಟಾರೆಯಾಗಿ ಕಾರ್ಮಿಕರ ಸ್ಥಿತಿಗತಿ ಬಗ್ಗೆ ಒಳ್ಳೆಯ ಅಧ್ಯಯನ, ನೀತಿ ನಿರೂಪಣೆ ಇತ್ಯಾದಿ ಮಾಡುತ್ತಿದ್ದ ಸಂಘಟನೆ.

ಆದರೆ ಜಾಗತೀಕರಣದ ಗಾಳಿ ಬೀಸುತ್ತಿರುವ ಇಂದಿನ ದಿನಗಳಲ್ಲಿ ಐ.ಎಲ್.ಒ. ಈ ಗಾಳಿಗೆ ಸಿಲುಕದೆ ಇದ್ದೀತೆ? ಐ.ಎಲ್.ಒ. ವನ್ನು ವಿಶ್ವಬ್ಯಾಂಕ್-ಐಎಂಎಫ್ ಗಳ ಜಾಗತೀಕರಣದ ಯೋಜನೆಯಲ್ಲಿ ಬಳಸುವ ಹುನ್ನಾರ ಕಂಡು ಬಂತು.

ಐ.ಎಲ್.ಒ. ಅಧಿವೇಶನದಲ್ಲಿ ವಿಶ್ವಬ್ಯಾಂಕ್ ಅಧ್ಯಕ್ಷ!

ಇತ್ತೀಚೆಗೆ (ಜೂನ್‌ನಲ್ಲಿ) ಸ್ವಿಡ್ಜರ್‌ಲ್ಯಾಂಡಿನ ಜಿನೇವಾದಲ್ಲಿ 85ನೇ ಅಧಿವೇಶನದಲ್ಲಿ ವಿಶ್ವಬ್ಯಾಂಕ್ ಅಧ್ಯಕ್ಷ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಐ.ಎಲ್.ಒ. ದ ಡೈರೆಕ್ಟರ್ ಜನರಲ್ 'ಜಾಗತೀಕರಣ'ವನ್ನು ಹಾಡಿ ಹೊಗಳಿದರು. ಅಭಿವೃದ್ಧ ದೇಶಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಈ ಅಧಿವೇಶನದಲ್ಲಿ ಘರ್ಷಣೆ ಕಂಡು ಬಂತು.

ಐ.ಎಲ್.ಒ. ದ ಡೈರೆಕ್ಟರ್ ಜನರಲ್ ತನ್ನ ವರದಿ ಮಂಡಿಸುತ್ತಾ ಬರ್ಲಿನ್ ಗೋಡೆ ಮುರಿದು ಬಿದ್ದದ್ದು ಚರಿತ್ರೆಯಲ್ಲಿ ಮಹತ್ವದ ತಿರುವು, ಇದರಿಂದಾಗಿ ಯೋಜಿತ ಆರ್ಥಿಕ ವ್ಯವಸ್ಥೆ ಅವಸಾನಗೊಂಡು ಜಾಗತೀಕರಣ ತ್ವರಿತವಾಗಿ ಹರಡುವಂತಾಗಿದೆ ಎಂದು ಹೇಳಿದರಂತೆ. ಆರ್ಥಿಕ ಕೂಟಗಳು ಜಾಗತೀಕರಣದ ನೇರ ಫಲ. ಅವು ಪ್ರಗತಿಗೆ ಪೂರಕವಂತೆ. ಇದು ನೇರವಾಗಿ ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿಗೆ ವಿರೋಧವಾದ, ಅಭಿವೃದ್ಧ ಬಂಡವಾಳ ಶಾಹಿ ದೇಶಗಳು ಸ್ವ-ರಕ್ಷಣೆಗೆ ಕಟ್ಟಿ ಕೊಂಡಿರುವ ಕೂಟಗಳು ಎಂಬುದನ್ನು ಮರೆಮಾಚಿದರು ಎಂದು ಬೇರೆ ಹೇಳ ಬೇಕಾಗಿಲ್ಲ. ಜಗತ್ತಿನಲ್ಲಿ ಅಸಮಾನತೆ ಹೆಚ್ಚುತ್ತಿರುವ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದ ಅವರು, ಅಸಮಾನತೆಗೆ ಜಾಗತೀಕರಣವೇ ಕಾರಣ ಎಂದು ವ್ಯಾಪಕವಾಗಿ ಜನ ನಂಬಿದ್ದರೂ, ಇದಕ್ಕೆ ಯಾವುದೇ ಪುರಾವೆ ಇಲ್ಲ ಎಂದೂ ಕಣ್ಣೊರೆಸಿಕೊಂಡರು!

ಆದರೆ ಅವರು ಮಂಡಿಸಿದ ಪ್ರಸ್ತಾವಗಳೆಲ್ಲಾ ಬಡದೇಶಗಳಿಗೆ ವಿರುದ್ಧವಾದದ್ದು, ಗುತ್ತೇದಾರಿ ಬಂಡವಾಳಶಾಹಿಯ ಹಿತಾಸಕ್ತಿ ಕಾಪಾಡುವಂತದ್ದು. ಅವರು ಮಾಡಿದ ಪ್ರಸ್ತಾವಗಳಲ್ಲಿ ಮುಖ್ಯವಾದದ್ದು ಇತ್ತೀಚೆಗೆ 1996 ರ ಡಿಸೆಂಬರ್‌ನಲ್ಲಿ ಸಿಂಗಾಪುರ್‌ನಲ್ಲಿ ಸೇರಿದ್ದ WTO(ವಿಶ್ವ ವಾಣಿಜ್ಯ ಸಂಘಟನೆ) ವಿಧಿಸಿದ್ದ 'ಲೇಬರ್ ಸ್ಟಾಂಡರ್ಡ್' ಜಾರಿಯಾಗಿದೆಯೇ ಎಂದು ನಿರ್ಧರಿಸುವ ಪೋಲೀಸ್ ಮ್ಯಾನ್ ಕೆಲಸ. ಮೂರನೇ ಜಗತ್ತಿನ ದೇಶಗಳು ಇದನ್ನು ಆಗಲೇ ವಿರೋಧಿಸಿದ್ದವು- ವಾಣಿಜ್ಯ ವಿಷಯಗಳಲ್ಲಿ ವಾಣಿಜ್ಯೇತರ ವಿಷಯಗಳನ್ನು ತಂದು ಮೂರನೇ ಜಗತ್ತಿನ ದೇಶಗಳ ರಫ್ತಿನ ಮೇಲೆ ಸುಂಕೇತರ ನಿರ್ಬಂಧ ಹೇರುವ ಪ್ರಯತ್ನ ಎಂದು. ಅಭಿವೃದ್ಧ ಬಂಡವಾಳಶಾಹಿ ದೇಶಗಳು, 'ಮಾನವ ಹಕ್ಕು'ಗಳ ಹೆಸರಲ್ಲಿ ಈಗಾಗಲೇ ಭಾರತದ ಬಟ್ಟೆ, ರತ್ನಗಂಬಳಿ, ಬಾಲಕಾರ್ಮಿಕರು ಮಾಡಿದ್ದು ಇತ್ಯಾದಿಯಾಗಿ ಆರೋಪಿಸಿ, ಅಮೇರಿಕಕ್ಕೆ ಈ ವಸ್ತುಗಳ ಆಮದಿನ ಮೇಲೆ ನಿರ್ಬಂಧ ಹೇರಿದ್ದರು. ನಿಜವಾದ ಕಾರಣ, ಮೂರನೇ ಜಗತ್ತಿನ ದೇಶಗಳ ಕೆಲವು ಉತ್ಪನ್ನಗಳ ಪೈಪೋಟಿಯಿಂದ ಅವರ ಉದ್ಯಮಗಳನ್ನು ರಕ್ಷಿಸುವುದು.

ಲೇಬರ್ ಸ್ಟಾಂಡರ್ಡ್‌ಗಳ ಪೋಲೀಸ್ ಮ್ಯಾನ್

ಡೈರೆಕ್ಟರ್ ಜನರಲ್‌ರ ಪ್ರಸ್ತಾವಗಳ ಪ್ರಕಾರ ಐ.ಎಲ್.ಒ.ಎಲ್ಲಾ ದೇಶಗಳ 'ಲೇಬರ್ ಸ್ಟಾಂಡರ್ಡ್' ಜಾರಿ ಮಾಡುತ್ತಿವೆಯೆ ಇಲ್ಲವೇ ಎಂದು ತಪಾಸಣೆ ಮಾಡುವ ಪೋಲಿಸ್ ಮ್ಯಾನ್ ಆಗಲಿದೆ. ವಿವಿಧ ಉತ್ಪನ್ನಗಳಿಗೆ,ಬ್ರಾಂಡ್‌ಗಳಿಗೆ ಐ.ಎಲ್.ಒ. ಲೇಬರ್ ಸ್ಟಾಂಡರ್ಡ್ ಜಾರಿ ಮಾಡಿ ತಯಾರಾದದ್ದು ಎಂದು 'ಸ್ಟಾಂಪ್' ಹಾಕುವುದಂತೆ. ಇದನ್ನು ಸ್ವಾಭಾವಿಕವಾಗಿಯೇ 130 ರಷ್ಟು ಅಭಿವೃದ್ಧಿ ಹೊಂದುತ್ತಿರುವ ಮೂರನೇ ಜಗತ್ತಿನ ದೇಶಗಳು ಬಲವಾಗಿ ವಿರೋಧಿಸಿದವು. ICFTU(International Council of Free Trade Unions) ಎಂಬ ಬಂಡವಾಳಶಾಹಿ ಜಗತ್ತಿನ ಟ್ರೇಡ್ ಯೂನಿಯನ್ ಸಂಘಟನೆ ಮಾತ್ರ ಡೈರೆಕ್ಟರ್ ಜನರಲ್ ಪ್ರಸ್ತಾವನೆಗಳನ್ನು ಬೆಂಬಲಿಸಿತು. ಭಾರತದಲ್ಲಿ ICFTU ನ ಅಂಗಸಂಸ್ಥೆಗಳಾದ BMS, INTUCಗಳು ಸಹ ಡೈರೆಕ್ಟರ್ ಜನರಲ್‌ರನ್ನು ಬಲವಾಗಿ ವಿರೋಧಿಸಿದವು.

'ಲೇಬರ್ ಸ್ಟಾಂಡರ್ಡ್' ಗಳನ್ನು ತಪಾಸಣೆ ಮಾಡುವ ನೆಪದಲ್ಲಿ ಐ.ಎಲ್.ಓ. ಜಾಗತೀಕರಣದ ಸಂಸ್ಥೆಗಳಿಗೆ 'ಪೋಲಿಸ್ ಮ್ಯಾನ್' ಆಗುವ ಅಪಾಯವನ್ನು ಡೈರೆಕ್ಟರ್ ಜನರಲ್‌ರ ಪ್ರಸ್ತಾವಗಳನ್ನು ವಿರೋಧಿಸುವ ಎಲ್ಲರೂ ಮನಗಂಡರು. ಐ.ಎಲ್.ಓ. 'ಲೇಬರ್ ಸ್ಟಾಂಡರ್ಡ್' ಈ ರೀತಿ ಜಾರಿಗೊಳಿಸಿದರೆ ತಪ್ಪೇನು ಎಂದು ಹೇಳುವವರು ಐ.ಎಲ್.ಓ. ನಡೆಯುತ್ತಿರುವುದು ಕಾಲುಭಾಗ ಅಮೆರಿಕನ್ ಹಣದಿಂದ, ಐ.ಎಲ್.ಓ.ದ ಹಣಗಳು ಶೇಕಡಾ 60 ಭಾಗ ಅಭಿವೃದ್ಧ ದೇಶಗಳಿಂದಲೇ ಬರುವುದು ಎಂದು ವಾದ ಮಾಡುತ್ತಾರೆ.

ಈ ಐ.ಎಲ್.ಓ.ಗೆ ಭಾರತದ ಬಾಲ ಕಾರ್ಮಿಕರು, 'ಲೇಬರ್ ಸ್ಟಾಂಡರ್ಡ್' ಉಲ್ಲಂಘಿಸುವಂತೆ ಕಾಣಬಹುದು. ಆದರೆ ಇಂಡೋನೇಷ್ಯಾದಲ್ಲಿ ಯಾವುದೇ 'ಲೇಬರ್ ಸ್ಟಾಂಡರ್ಡ್' ಇಲ್ಲದೆ ಶೂ ಉತ್ಪಾದಿಸುವ ಅಮೇರಿಕದ 'ನೈಕ್' ಕಂಪನಿ 'ಲೇಬರ್ ಸ್ಟಾಂಡರ್ಡ್' ಉಲ್ಲಂಘಿಸುವುದು ಕಾಣುವುದಿಲ್ಲ. ಅಮೆರಿಕದಲ್ಲಿ ಜೈಲುಗಳಲ್ಲಿ, ಕೈದಿಗಳನ್ನು ಖಾಸಗಿ ಉತ್ಪಾದನೆಗೆ ಬಳಸುವುದಂತೂ ಕಾಣಲಿಕ್ಕೆ ಇಲ್ಲ.

ಆದರೆ ಅಧಿವೇಶನದಲ್ಲಿ ಮೂರನೇ ಜಗತ್ತಿನ ದೇಶಗಳ ಪ್ರತಿಭಟನೆಯ ನಾಯಕತ್ವ ವಹಿಸುವುದರಲ್ಲಿ ಭಾರತ ಸರಕಾರದ ಪ್ರತಿನಿಧಿ ತಂಡ ಹಿಂದೆ ಉಳಿಯಿತು.

ಜಾಗತೀಕರಣದ ಶಕ್ತಿಗಳ ಈ ಹೊಸ ವೇದಿಕೆಯಿಂದ ಮೂರನೇ ಜಗತ್ತಿನ ದೇಶಗಳ ಮೇಲೆ ಈ ಪ್ರಸ್ತಾವವನ್ನು ತಡೆಯಲು ಟ್ರೇಡ್ ಯೂನಿಯನ್ ಸಂಘಟನೆಗಳು ಸಂಘಟಿತವಾಗಿ ಹೋರಾಡದೆ ದಾರಿ ಇಲ್ಲ ಎಂದು ಐ.ಎಲ್.ಒ.ದ ಅಧಿವೇಶನ ತೋರಿಸಿಕೊಟ್ಟಿದೆ.



ಆಸ್ಟ್ರೇಲಿಯಾದ ಆದಿವಾಸಿ ಮಕ್ಕಳಿಗೆ ಯಾತನೆ ನೀಡಿದ ಬಗ್ಗೆ ಪರಿಹಾರಕ್ಕೆ ಒತ್ತಾಯ

ಆಸ್ಟ್ರೇಲಿಯಾದಲ್ಲಿ 1910 ರಿಂದ 1970 ರ ವರೆಗೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಆದಿವಾಸಿ ಮಕ್ಕಳನ್ನು ಅವರ ತಂದೆತಾಯಿಗಳಿಂದ ಬೇರ್ಪಡಿಸಿ ಮಾನಸಿಕ, ದೈಹಿಕ ಯಾತನೆಗೆ ಕಾರಣವಾದ ಸರಕಾರ ಅವರಿಗೆ ಪರಿಹಾರ ಕೊಡಬೇಕೆಂದು ಸರಕಾರವೇ ನಿಯೋಜಿಸಿದ ಮಾನವ ಹಕ್ಕು ಮತ್ತು ಸಮಾನ ಹಕ್ಕು ಕಮಿಶನ್ ಶಿಫಾರಸು ಮಾಡಿದೆ.

1910 ರಿಂದ 60 ವರ್ಷಗಳ ವರೆಗೆ ಆಸ್ಟ್ರೇಲಿಯಾದ ಸರಕಾರ 'ಜನಾಂಗೀಯ ಸೌಹಾರ್ದತೆ'ಯ ಕಾರ್ಯಕ್ರಮದ ಅಂಗವಾಗಿ ಆದಿವಾಸಿ ಮಕ್ಕಳನ್ನು ಬೋರ್ಡಿಂಗ್ ಸ್ಕೂಲ್‌ಗಳಲ್ಲಿ, ಬಿಳಿಯರ ಕುಟುಂಬಗಳು ದತ್ತು ತೆಗೆದುಕೊಂಡು ಸಾಕಲಾಯಿತು. ಆದರೆ ಈ ಕಾರ್ಯಕ್ರಮದಲ್ಲಿ ಭಾರಿ ವ್ಯತ್ಯಯಗಳು ಉಂಟಾದವು. ತಮ್ಮ ತಂದೆ-ತಾಯಿ, ಭಾಷೆ, ಸಂಸ್ಕೃತಿ, ಜೀವನ ವಿಧಾನಗಳಿಂದ ಹಿಂಸಾತ್ಮಕವಾಗಿ ಬೇರ್ಪಟ್ಟ ಈ ಮಕ್ಕಳು ಭಾರಿ ದೈಹಿಕ, ಮಾನಸಿಕ ಯಾತನೆ ಅನುಭವಿಸಿದವು ಎಂದು ಈ ದೊಡ್ಡ ಪ್ರಮಾಣದ ಸರ್ವೇಕ್ಷಣೆ ಮೇಲೆ ಆಧರಿಸಿದ ಈ ವರದಿ ಹೇಳಿದೆ. ಹಲವಾರು ಆದಿವಾಸಿ ಮಕ್ಕಳನ್ನು ಬಿಟ್ಟಿ ದುಡಿಮೆಗೆ ಬಳಸಲಾಯಿತು. ಹಲವು ಹೆಣ್ಣು ಮಕ್ಕಳು, ದತ್ತು ತೆಗೆದುಕೊಂಡ ಮನೆಯಲ್ಲಿ ಲೈಂಗಿಕ ಶೋಷಣೆಗೆ ಒಳಗಾದವು.

ಈ ಕಾರ್ಯಕ್ರಮ, 'ನರಮೇಧ' ಕ್ಕೆ ಏನೂ ಕಡಿಮೆಯಿಲ್ಲ ಎಂದು ವರದಿ ಹೇಳಿದೆ. ಪ್ರಧಾನಿ ಈ ಆರ್ಥಿಕ ಪರಿಹಾರ ಕೊಡುವುದನ್ನು ತಿರಸ್ಕರಿಸಿ, ಚರಿತ್ರೆಯನ್ನು ಅಗೆಯುವ ಕೆಲಸ ಮಾಡಬಾರದು ಎಂದಿದ್ದಾರೆ. ಈ ಕಮಿಶನನ್ನು ನೇಮಿಸಿದ್ದು ಹಿಂದಿನ ಸರಕಾರ.

ತಾಲಿಬಾನ್-ವಿರೋಧಿ ಪಡೆಗಳು ಕಾಬೂಲ್ ಹೊಸ್ತಿಲಲ್ಲಿ

ತಾಲಿಬಾನ್-ವಿರೋಧಿ ಉತ್ತರ ಅಫಘಾನಿಸ್ತಾನದ ಪಡೆಗಳ ಕೂಟ ಭಾರೀ ಮಿಲಿಟರಿ ವಿಜಯ ಸಾಧಿಸುತ್ತಾ, ಕಾಬೂಲಿನ ಕೇವಲ ಎರಡು ಕಿ.ಮಿ. ದೂರದಲ್ಲಿವೆ. ಕಾಬೂಲ್‌ನ ತಾಲಿಬಾನ್ ಸರಕಾರ ಅಲುಗಾಡುತ್ತಿದೆ. ಪಾಕಿಸ್ತಾನ ಈಗ ತಾಲಿಬಾನ್ ಹಾಗೂ ತಾಲಿಬಾನ್-ವಿರೋಧಿ... ತಾಲಿಬಾನ್ ಹಾಗೂ ತಾಲವಿ-ಯ ಕೂಟಗಳ ನಡುವೆ ಸಂಧಾನಕ್ಕೆ ಅಂತರ್ರಾಷ್ಟ್ರೀಯ ಪ್ರಯತ್ನ ನಡೆಸುತ್ತಿದೆ. ತಾಲಿಬಾನ್ ಸರಕಾರಕ್ಕೆ 'ಮಾನ್ಯತೆ' ನೀಡಿ ಏಕಾಂಗಿಯಾದ ಪಾಕಿಸ್ತಾನ ವಿಚಿತ್ರ ಫಜೀತಿಗೆ ಸಿಕ್ಕಿಹಾಕಿಕೊಂಡಿದೆ. ತಾಲಿಬಾನ್ ಸರಕಾರ ಉರುಳುವುದು ಈಗ ಹೆಚ್ಚುಕಡಿಮೆ ಖಚಿತವಾಗಿದೆ.

ಪ್ರಜಾಪ್ರಭುತ್ವ ರಂಗದತ್ತ ಸಾಗೋಣ ಕನಸುಗಳನ್ನು ನನಸಾಗಿಸೋಣ ....

ಪುಟ ಒಂದರಿಂದ

ಮಕ್ಕಳನ್ನು ಕಳುಹಿಸಲು ಈ ಸ್ವಾತಂತ್ರ್ಯವೇ, ನೌಕರಿಯಿಲ್ಲದೆ ಅಲೆದಾಡಲು ಈ ಸ್ವಾತಂತ್ರ್ಯವೇ? ಭೂಮಿಗಾಗಿ ಹೋರಾಡುವಾಗ ಬೂಟುಕಾಲಿನಿಂದ ಒದಿಸಿಕೊಳ್ಳಲು ಈ ಸ್ವಾತಂತ್ರ್ಯವೇ? ಇದ್ದ ಕಾರ್ಖಾನೆಗಳು ಮುಚ್ಚಿಕೊಳ್ಳುವುದನ್ನು ನೋಡಲು ಸ್ವಾತಂತ್ರ್ಯವೇ? ಭ್ರಷ್ಟಾಚಾರದ ಆಗರವಾಗುತ್ತಿರುವ ಆಡಳಿತಗಾರರನ್ನು ನೋಡಲು ಈ ಸ್ವಾತಂತ್ರ್ಯವೇ? ಜಾತಿ-ಉಪಜಾತಿ, ಧರ್ಮಗಳ ಹೆಸರಿನಲ್ಲಿ ನಡೆಯುವ ಅನ್ಯಾಯ ಅತ್ಯಾಚಾರಗಳ ಹಿಂಸೆ ಅನುಭವಿಸಲು ಸ್ವಾತಂತ್ರ್ಯವೇ?

ಇದು ಜನರೆದುರಿಸುತ್ತಿರುವ ಸಮಸ್ಯೆ. 50ನೇಯ ಸ್ವಾತಂತ್ರ್ಯೋತ್ಸವ ಈ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಿಲ್ಲ. ಸ್ವಾತಂತ್ರ್ಯ ಬಂತು, ಹೋರಾಟಕ್ಕೆ ಪ್ರೋತ್ಸಾಹ ನೀಡಿತು. 50 ವರ್ಷ ಗತಿಸಿತು. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿದ ಕಾಂಗ್ರೆಸ್‌ನಲ್ಲಿ ಅಂದು ಕಮ್ಯುನಿಸ್ಟ್, ಸೋಶಲಿಸ್ಟ್, ಪುರೋಗಾಮಿ, ಜಾತ್ಯಾತೀತ ವಿಚಾರಧಾರೆಯುವರೆಲ್ಲ ಸೇರಿಕೊಂಡಿದ್ದರು. ಭಿರ್ಲಾ, ಸಿಂಗಾನಿಯ, ಅಂಬಾಲಾಲರಂಥ ರಾಷ್ಟ್ರೀಯ ಬಂಡವಾಳದಾರರು ಗಾಂಧೀಜಿಯವರ ನೇತೃತ್ವ, ವಿಚಾರಧಾರೆಗೆ ಹೊಂದಿಕೊಂಡಿದ್ದರು. 15-8-1947 ರಂದುಅಧಿಕಾರ ಹಸ್ತಾಂತರ ಗೊಂಡಿರುವುದು ಬಂಡವಾಳಶಾಹಿ ಭೂಮಾಲಕ ವರ್ಗದ ಪರವಾದ ಕಾಂಗ್ರೆಸ್ಸಿಗೆ. ಆದ್ದರಿಂದ ಕಳೆದ 50 ವರ್ಷಗಳಲ್ಲಿ ಕಾಂಗ್ರೆಸ್ ಬಂಡವಾಳ ಶಾಹಿ-ಭೂಮಾಲಕ ವರ್ಗದ ಹಿತಸಾಧನೆಯ ಧೋರಣೆ ಅನುಸರಿಸುತ್ತಾ ಬಂದ ಕಾರಣ ಕೊನೆ ಕೊನೆಗೆ ವಿದೇಶಿ ಗುತ್ತೇದಾರರಿಗೆ ವಿಶ್ವಬ್ಯಾಂಕ್-ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ ಶರಣಾಗುತ್ತ ದೇಶದ ಸ್ವಾತಂತ್ರ್ಯಕ್ಕೆ ಅಪಾಯ ಉಂಟುಮಾಡುತ್ತಿದ್ದಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಇತರ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಕನಿಷ್ಟ ಕಾರ್ಯಕ್ರಮದ ತಳಹದಿಯಲ್ಲಿ ಒಟ್ಟು ಸೇರಿಸಿ, ಸಂಯುಕ್ತ ರಂಗ ರಚಿಸಿ, ಅದರ ಸರಕಾರ ವನ್ನುಸ್ಥಾಪಿಸುವಲ್ಲಿ ಯಶಸ್ವಿಯಾಗಿದೆ. ಇದರಲ್ಲಿ ಎಲ್ಲರೂ ಎಡ ವಿಚಾರಧಾರೆಯವರೇ ಆಗಿರುವುದರಿಂದ ಅಂದಿನ ನಮ್ಮಕನಸು ಈಗಲೂ ಪೂರ್ಣ ನನಸಾಗಬಹುದೆಂದು ಭಾವಿಸುವುದು ಸರಿಯಲ್ಲ. ಆದರೆ ಕಳೆದ 50 ವರ್ಷಗಳಲ್ಲಿ ಪಶ್ಚಿಮಬಂಗಾಳದ ಎಡರಂಗ ಸರಕಾರ, ಹಾಗೆಯೇ ಕೇರಳ-ತ್ರಿಪುರ ಸರಕಾರಗಳು ನಮ್ಮ ಮುಂದೆ ಆಶಾಕಿರಣ ಮೂಡಿಸಿವೆ. ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕ್ರಮ ದಂತೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಪ್ರಭುತ್ವ ರಂಗ ರಚನೆಯಾಗಿ, ಅದರ ನೇತೃತ್ವದಲ್ಲಿ ಸರಕಾರ ರಚನೆಯಾದರೆ ಮಾತ್ರ 50 ವರ್ಷದ ಹಿಂದಿನ ಕನಸುಗಳು ನನಸಾಗಲು ಸಾಧ್ಯ. ಆದ್ದರಿಂದ ಜನತಾ ಪ್ರಜಾಪ್ರಭುತ್ವ ರಂಗ ರಚನೆಯತ್ತ ಸಾಗೋಣ, ಜನತಾ ಪ್ರಜಾಪ್ರಭುತ್ವ ರಂಗದತ್ತ ಮುನ್ನಡೆಯೋಣ. ನಮ್ಮ ಕನಸುಗಳನ್ನು ನನಸಾಗಿಸಲು ದುಡಿಯೋಣ. ○

ಅಂಗನವಾಡಿ ಜನರಲ್ ಕೌನ್ಸಿಲ್ ಸಭೆ

ಜುಲೈ 31 ಮತ್ತು ಆಗಸ್ಟ್ 1 ರಂದು ಅಖಿಲ ಭಾರತ ಅಂಗನವಾಡಿ ನೌಕರರ ಕಾರ್ಯಕಾರಿ ಸಮಿತಿ ಮತ್ತು ಜನರಲ್ ಕೌನ್ಸಿಲ್ ಸಭೆ ನವದೆಹಲಿಯಲ್ಲಿ ಸೇರಿತ್ತು. ಈ ಸಭೆಯಲ್ಲಿ ಕರ್ನಾಟಕ, ಪಶ್ಚಿಮಬಂಗಾಳ, ತಮಿಳುನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ, ಹರ್ಯಾಣ ಮತ್ತು ಮಹಾರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಪ.ಬಂಗಾಳದ ಬಾಬ್‌ತೋಷ್ ರಾಯ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯು ಕೆಲವು ತೀರ್ಮಾನಗಳನ್ನು ಕೈಗೊಂಡಿತು.

ಮುಖ್ಯ ತೀರ್ಮಾನಗಳು

1. ಕೇಂದ್ರ ಸರಕಾರ ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳಿಂದ 250 ರೂ. ಗೌರವ ಧನ ಹೆಚ್ಚು ಕೊಡುತ್ತೇವೆಂದು ತಿಳಿಸಿ ಈಗ ಕೇವಲ 60-100 ರೂ ಹೆಚ್ಚಿಸಿರುವುದನ್ನು ತೀವ್ರವಾಗಿ ಖಂಡಿಸಿದೆ.
2. 250 ರೂಗಳನ್ನು ಕೊಡಲೇಬೇಕೆಂದೂ ಅಖಿಲ ಭಾರತ ನಿಯೋಗವೊಂದು ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳನ್ನು ಒತ್ತಾಯಪಡಿಸುವುದು.
3. ಸೆಪ್ಟೆಂಬರ್ ತಿಂಗಳಲ್ಲಿ ಎಲ್ಲಾ ರಾಜ್ಯಗಳಲ್ಲೂ ಪ್ರತಿಭಟನಾ ರ್‍ಯಾಲಿಗಳನ್ನು ಮಾಡುವುದು.
4. ಡಿಸೆಂಬರ್ 1 ರಿಂದ 5 ರ ತನಕ ಬ್ಯಾಡ್ಜ್ ಧರಿಸುವ ಮುಖಾಂತರ ಪ್ರತಿಭಟನೆಯನ್ನು ದೇಶಾದ್ಯಂತ ಆಚರಿಸುವುದು.
5. ಡಿಸೆಂಬರ್ 2 ನೇ ವಾರದಲ್ಲಿ ಮಧ್ಯಪ್ರದೇಶದ ಭೂಪಾಲ್‌ನಲ್ಲಿ ಅಖಿಲ ಭಾರತ ಅಂಗನವಾಡಿ ನೌಕರರ ಸಮ್ಮೇಳನ ನಡೆಸುವುದು.

ಕಾಂ।। ಕೆ.ಪಿ.ಆರ್. ನಿಧನ

ಪುಟ ಎರಡರಿಂದ

ಹಾಡು ಹೇಳುವುದರ ಮೂಲಕ ಗಮನ ಸೆಳೆದರು.

ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಮತ್ತು ಸಿಪಿಐ(ಎಂ) ನ ರಾಜ್ಯ ಸಮಿತಿಯ ಸದಸ್ಯರು, ದೇಶಾಭಿಮಾನಿ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು.

1940 ರಲ್ಲಿ ಸೆಪ್ಟೆಂಬರ್ 15 ರಂದು ಇತಿಹಾಸ ಪ್ರಸಿದ್ಧ ಮೊರಾಳ ಘಟನೆ ಘಟಿಸಿತು. ಎರಡನೇ ಮಹಾ ಯುದ್ಧ ನಡೆಯುತ್ತಿದ್ದ ಸಮಯದಲ್ಲಿ ಭಾರತೀಯರ ಇಂಗಿತವನ್ನು ಪರಿಗಣಿಸದೆ ಭಾರತವನ್ನು ಮಹಾಯುದ್ಧದಲ್ಲಿ ಪಾಲ್ಗೊಳ್ಳಿಸುವ ತೀರ್ಮಾನವನ್ನು 1940 ರ ಸೆಪ್ಟೆಂಬರ್ 15ರಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ನೇತೃತ್ವದಲ್ಲಿ ಪ್ರತಿಭಟಿಸಲು ಕರೆ ನೀಡಲಾಯಿತು. ಈ ಕರೆಯಂತೆ ಮೋರಾಳದಲ್ಲೂ ಪ್ರತಿಭಟನೆ ನಡೆದು ನಂತರ ನಡೆಯಬೇಕಿದ್ದ ಬಹಿರಂಗ ಸಭೆಯ ಜಾಗದಲ್ಲಿ ಅಲ್ಲಿನ ಪೋಲಿಸ್ ಅಧಿಕಾರಿ ನಿಷೇಧಾಜ್ಞೆ ಹೊರಡಿಸಿದರು. ನಂತರ ಬಹಿರಂಗ ಸಭೆಯ ಸ್ಥಳವನ್ನು ಬೇರೆಡೆಗೆ ಸ್ಥಳಾಂತರಿಸಲಾಯ್ತು. ಅಲ್ಲಿಯೂ ಅದೇ ಪೋಲಿಸ್ ಅಧಿಕಾರಿ ನಿಷೇದಾಜ್ಞೆ ಜಾರಿಗೆ ತಂದರು. ಇದನ್ನು ಪ್ರತಿಭಟಿಸಿ ಜನರು ಮತ್ತು ಪೋಲಿಸರ ನಡುವೆ ನಡೆದ ಘರ್ಷಣೆಯಲ್ಲಿ ಪೋಲಿಸ್ ಅಧಿಕಾರಿ ಸಾವನ್ನಪ್ಪಿದರು. ಇದರಿಂದ ಕುಪಿತರಾದ ಬ್ರಿಟಿಷ್ ಸರಕಾರದ ಕಾನೂನು ಕೆ.ಪಿ.ಆರ್.ಗೆ ಗಲ್ಲುಶಿಕ್ಷೆ ವಿಧಿಸಿತು. ಗಲ್ಲುಶಿಕ್ಷೆಯಿಂದ ಇವರನ್ನು ಕಾಪಾಡಲು ಅಂದಿನ ಜಗತ್ ಪ್ರಸಿದ್ಧ ವಕೀಲರಾಗಿದ್ದ ಪ್ರಿಂಟ ಕೆ.ಪಿ.ಆರ್. ಪರ ವಾದಿಸಿದರೂ ಸಾಮ್ರಾಜ್ಯಶಾಹಿ ನ್ಯಾಯಾಲಯ ಇವರಿಗೆ ಗಲ್ಲುಶಿಕ್ಷೆ ವಿಧಿಸಿತು.

ರಾಷ್ಟ್ರವ್ಯಾಪಿಯಾಗಿ ಇದನ್ನು ಪ್ರತಿಭಟಿಸಲಾಯಿತು. ಮಹಾತ್ಮ ಗಾಂಧೀಜಿಯವರ ಮಧ್ಯ ಪ್ರವೇಶದ ನಂತರ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಮಾರ್ಪಡಿಸಿತು.

1940 ರಲ್ಲಿ ಮದ್ರಾಸ್ ಸಂಸ್ಥಾನದ ಪ್ರಕಾಶಂ ಮಂತ್ರಿ ಮಂಡಲ ಇವರನ್ನು ಜೈಲಿನಿಂದ ಬಿಡುಗಡೆ ಮಾಡಿತು. ನಂತರವೂ ಕೆ.ಪಿ.ಆರ್, ಜನಪರ ಹೋರಾಟಗಳಲ್ಲಿ ತೊಡಗಿದರು. 1948 ರಲ್ಲಿ ಕಾಂಗ್ರೆಸ್ ಸರಕಾರ ಕಮ್ಯುನಿಸ್ಟರ ಬೇಟೆ ಪ್ರಾರಂಭಿಸಿದಾಗ ಕೆ.ಪಿ.ಆರ್. ರನ್ನು ಬಂಧಿಸಿ ಲಾಕಪ್‌ಗಳಿಂದ ಲಾಕಪ್‌ಗಳಿಗೆ ಬದಲಾಯಿಸಿ ಉಗ್ರ ಶಿಕ್ಷೆ ನೀಡಿ ಜೈಲಿಗೆ ಹಾಕಿದರು.

ಕೆ.ಪಿ.ಆರ್. ಎರಡು ಅವಧಿಗೆ ಶಾಸಕರಾಗಿದ್ದರು. ತಮ್ಮ ಅವಧಿಯಲ್ಲಿ ಶಾಸನ ಸಭೆಯಲ್ಲಿ 'ಬಡವರ ವೇದಿಕೆ'ಯನ್ನು ರಚಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು.

1964 ರಲ್ಲಿ ಪಕ್ಷ ವಿಭಜನೆಗೊಂಡಾಗ ದೇಶಾಭಿಮಾನಿ ಪತ್ರಿಕೆಯನ್ನು ಸಿಪಿಐ(ಎಂ) ಜೊತೆಗೆ ಉಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. 1950 ರಲ್ಲಿ ಹರ್ಕಿಶನ್ ಸಿಂಗ್ ಸುರ್ಜಿತ್ ಜೊತೆ ಸೋವಿಯತ್ ಭೇಟಿ ನೀಡಿದರು. 1980 ರಲ್ಲಿ ಚೀನಾಕ್ಕೆ ಭೇಟಿ ನೀಡಿದ್ದರು.

ಇದೇ ಆಗಸ್ಟ್ 5 ರಂದು ಇಡೀ ಕಣ್ಣೂರು ಜಿಲ್ಲೆ ಹರತಾಳ ಆಚರಿಸುವುದರ ಮೂಲಕ ಕಾಂ।। ಕೆಪಿಆರ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಮರುಪರಿಶೀಲಿಸಲು ಸಿಪಿಐ(ಎಂ) ಆಗ್ರಹ

ರಾಜಕೀಯ ಪಕ್ಷಗಳು ನಡೆಸುವ ಬಂದ್‌ಗಳು ಕಾನೂನು ಬಾಹಿರ ಹಾಗೂ ಸಂವಿಧಾನ ಬಾಹಿರ ಎಂಬ ಕೇರಳ ಹೈಕೋರ್ಟ್‌ನ ತೀರ್ಪು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಈ ದೃಷ್ಟಿಕೋನವನ್ನು ಸಿಪಿಐ(ಎಂ) ಒಪ್ಪುವುದಿಲ್ಲ ಎಂದು ಜುಲೈ 29 ರಂದು ನೀಡಿದ ಹೇಳಿಕೆಯೊಂದರಲ್ಲಿ ಅದು ಹೇಳಿದೆ. ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಬಂದ್‌ಗಳು, ಹರತಾಳಗಳು ಜನರ ಪ್ರತಿಭಟನೆಗಳ ಸಾಧನಗಳಾಗಿವೆ. ಸಾರ್ವಜನಿಕ ಪ್ರತಿಭಟನೆಯ ಹಕ್ಕು ಒಂದು ಪ್ರಜಾಸತ್ತಾತ್ಮಕ ಹಕ್ಕು, ಅದನ್ನು ತಡೆಯಬಾರದು, ಅದರ ಮೇಲೆ ಮಿತಿ ಹಾಕಬಾರದು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಬಂದ್ ನಡೆಸಲು ಈಗಿರುವ ಕಾನೂನುಗಳನ್ನು ಉಲ್ಲಂಘಿಸಿ ಬಲಪ್ರಯೋಗ ನಡೆಸುತ್ತಿದ್ದರೆ ಇಂತವುಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರಗಳು ಈಗಾಗಲೇ ಆಡಳಿತಕ್ಕೆ ಇವೆ. ಈ ತೀರ್ಪಿನಲ್ಲಿರುವ ತರ್ಕವನ್ನು ಮುಂದಿಟ್ಟರೆ ಮುಷ್ಕರದ ಹಕ್ಕು ಅಥವಾ ಯಾವುದೇ ಇತರ ಪ್ರತಿಭಟನಾ ಕಾರ್ಯಾಚರಣೆ ಯಾವುದಾದರೂ ಒಂದು ವಿಭಾಗದ ನಾಗರೀಕರ ಹಕ್ಕುಗಳನ್ನು ಮೊಟಕುಗೊಳಿಸುವುದರಿಂದ ಅವನ್ನೆಲ್ಲಾ ಕಾನೂನು ಬಾಹಿರಗೊಳಿಸಬೇಕೆಂಬ ಅಪಾಯಕಾರಿ ತೀರ್ಮಾನಕ್ಕೆ ಬರಬೇಕಾಗು ತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಪ್ರಜಾಪ್ರಭುತ್ವ ಹಕ್ಕುಗಳಿಗೆ ಸಾಕಷ್ಟು ವ್ಯಾಪಕ ಅವಕಾಶ ನೀಡಿರುವುದೇ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಶಕ್ತಿಯ ಒಂದು ಮೂಲ ಎಂದು ಅಭಿಪ್ರಾಯ ಪಟ್ಟಿದೆ.

ಈ ತೀರ್ಪಿನ ಪರಿಣಾಮಗಳನ್ನು ಅರಿತು, ಇದನ್ನು ಮರುಪರಿಶೀಲಿಸುವಂತೆ ಆಗ್ರಹಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಪ್ರಜಾಪ್ರಭುತ್ವವಾದೀ ವಿಭಾಗಗಳಿಗೆ ಕರೆ ನೀಡಿದೆ.

ಪಕ್ಷಪಾತದ ತೀರ್ಪು - ಸಿಐಟಿಯು

ಇದು ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ಮಾಡಿರುವ ಒಂದು ನೇರ ಧಾಳಿ ಎಂದು ಸಿಐಟಿಯು ಟೀಕಿಸಿದೆ. ಜುಲೈ 29 ರಂದು ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಮಂಡಳಿ ಒಂದು ಹೇಳಿಕೆ ನೀಡಿದ್ದು, ಪಕ್ಷಪಾತಪೂರ್ಣ ನಿಲುವಾಗುತ್ತದೆ ಎಂದಿದೆ.


ಬಂದ್‌ಗಳು ಕೈಗಾರಿಕಾ ಮುಷ್ಕರಗಳು ಮತ್ತು ಇತರ ಪ್ರತಿಭಟನಾ ಕಾರ್ಯಾಚರಣೆಗಳನ್ನು ದಮನ ಮತ್ತು ಶೋಷಣೆಯ ವಿರುದ್ಧ ನಡೆಸಲಾಗುತ್ತದೆ. ಕೊನೆಯ ಅಸ್ತ್ರವಾಗಿಯಷ್ಟೆ ಇದನ್ನು ಬಳಸಲಾಗುತ್ತದೆ ಎಂಬುದನ್ನು ಮರೆಯಬಾರದು. ಆದ್ದರಿಂದ ಇಂತಹ ಪ್ರತಿಭಟನೆಗಳ ಕಾರಣಗಳನ್ನು ಗುರುತಿಸಿ ಆ ಬಗ್ಗೆ ಏನೂ ಮಾಡದೆ ಇಂತಹ ಕಾರ್ಯಾಚರಣೆಗಳನ್ನೇ ನಿರ್ಬಂಧಿಸುವುದು ಪಕ್ಷಪಾತದ ನಿಲುವಾಗುತ್ತದೆ. ಉದಾಹರಣೆಗೆ ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ರಾಜಕೀಯ ಪಕ್ಷಗಳು ಪೋಲೀಸ್ ಗೋಳಿಬಾರಿನಲ್ಲಿ ಜನಗಳ ಅಮಾನುಷ ಕೊಲೆಯನ್ನು ಪ್ರತಿಭಟಿಸಿ ನಡೆಸಿದ ಬಂದ್ ಆಗಲೀ, ವಿಶ್ವಬ್ಯಾಂಕ್-ಐಎಂಎಫ್ ಹೇರಿದ ಸರಕಾರದ ರಾಷ್ಟ್ರವಿರೋಧಿ ಆರ್ಥಿಕ ನೀತಿಗಳ ವಿರುದ್ಧ ನಡೆಸಿರುವ ದೇಶವ್ಯಾಪಿ ಮುಷ್ಕರಗಳು, ಬಂದ್‌ಗಳಾಗಲೀ ಕಾನೂನುಬಾಹಿರ ಎಂದು ಹೇಳುವಂತಿಲ್ಲ. [illegible] ಸಾಮ್ರಾಜ್ಯಶಾಹಿ ಯಜಮಾನಿಕೆಯ ವಿರುದ್ಧ ಪ್ರತಿಭಟನೆಯ ಒಂದು ಜನಪ್ರಿಯ ಸ್ವರೂಪವಾಗಿತ್ತು. ನಿಜ, ಬ್ರಿಟಿಷ್ ಆಳರಸರು, ಅದನ್ನು ಕಾನೂನು ಬಾಹಿರ ಅಥವಾ ಸಂವಿಧಾನ ಬಾಹಿರ ಎನ್ನುತ್ತಿದ್ದರು ಎಂದು ನೆನಪಿಸಿರುವ ಸಿಐಟಿಯು ಕಾರ್ಯದರ್ಶಿ ಮಂಡಳಿ ಬಂದ್ ವೇಳೆ, ಮುಷ್ಕರದ ವೇಳೆ ನಡೆಯುವ ಹಿಂಸಾಚಾರಗಳ ಬಗ್ಗೆ ಹೇಳುವುದಾದರೆ ಇವು ಸದಾ ಸಮಾಜ-ಘಾತುಕ ಶಕ್ತಿಗಳ ಕೈವಾಡವಾಗಿರುತ್ತವೆ ಎಂದು ಅಭಿಪ್ರಾಯ ಪಟ್ಟಿದೆ. ಏಕೆಂದರೆ ಅವು ಕೊನೆಗೆ ಆಸ್ತಿವಂತ ವರ್ಗಗಳ ಹಿತಾಸಕ್ತಿಗಳನ್ನೇ ಈಡೇರಿಸುತ್ತವೆ, ಪ್ರಜಾಪ್ರಭುತ್ವ ಆಂದೋಲನದ ವಿರುದ್ಧವೇ ಹೋಗುತ್ತವೆ.

ನ್ಯಾಯಾಂಗ ಸಕ್ರಿಯತೆ ಹೀಗೆ ವಿಪರೀತ ಮಟ್ಟಕ್ಕೆ ಹೋಗಿರುವುದು ಒಂದು ಗಂಭೀರ ಆಂತಕದ ಸಂಗತಿ ಎನ್ನುತ್ತಾ ಸಿಐಟಿಯು ಕಾನೂನನ್ನು ಯಾಂತ್ರಿಕವಾಗಿ ವ್ಯಾಖ್ಯಿಸುವುದು ಜನಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡುತ್ತದೆ ಎಂದಿದೆ. ಮಾಲಕರ ಹೇಳಿಕೆಯ ಮೇರೆಗೆ ಇಂತಹ ಒಂದು ತೀರ್ಪು ನೀಡಿರುವುದು ದುರದೃಷ್ಟಕರ. ಅತ್ತ ಶ್ರಮಜೀವಿಗಳ ಹಕ್ಕು ಹಾಗೂ ಬದುಕಿನ ಮೇಲೆ ಅಸಂಖ್ಯ ಧಾಳಿಗಳು ನಡೆಯುತ್ತಿದ್ದರೂ ಇದರಲ್ಲಿ ಜನರ ಹಿತಾಸಕ್ತಿ ಕಾಯುವ ನ್ಯಾಯ ತೀರ್ಪು ನೀಡುತ್ತಿಲ್ಲ.

ಈ ತೀರ್ಪಿಗೆ ಸವಾಲು ಹಾಕದೆ ಇರಬಾರದು. ಪ್ರಜಾಪ್ರಭುತ್ವವಾದಿ ಜನಸಮೂಹಗಳು, ನಿರ್ದಿಷ್ಟವಾಗಿ ಕಾರ್ಮಿಕ ವರ್ಗ ಈ ತೀರ್ಪಿನ ವಿರುದ್ಧ ತಮ್ಮ ಬಲವಾದ ಪ್ರತಿಭಟನೆಯ ದನಿಯೆತ್ತಬೇಕು ಹಾಗೂ ಸಾಮೂಹಿಕವಾಗಿ ಪ್ರತಿಭಟಿಸುವ ಕಾನೂನು ಬದ್ಧ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕು ಎಂದು ಸಿಐಟಿಯು ಕರೆ ನೀಡಿದೆ.

[illegible]

ಐಕ್ಯರಂಗ ಓದುಗರಿಗೆ ಭಾರತದ ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ವಿಶೇಷ ಉಡುಗೊರೆ. ಈ ಸಂಚಿಕೆಯಿಂದ ಪ್ರತಿ ಎರಡು ವಾರಕ್ಕೊಮ್ಮೆ ಜಾಗತಿಕ ಕಮ್ಯುನಿಸ್ಟ್ ಆಂದೋಲನ, ಪ್ರಗತಿಪರ ಚಳುವಳಿ, ಸಾಹಿತ್ಯ..... ಮೊದಲಾದವುಗಳ ಬಗ್ಗೆ ಮಾಹಿತಿ ನೀಡುವ, ನಿಮ್ಮ ಬುದ್ಧಿಗೆ ಕಸರತ್ತು ಕೊಡುವ ಪದಬಂಧ .... ಐಕ್ಯರಂಗ ಪದಬಂಧ. ತಪ್ಪದೇ ಓದಿರಿ.



ಎಡದಿಂದ ಬಲಕ್ಕೆ

1. ಎಲ್ಲಾ ಶೋಷಣೆಗಳಿಗೆ ಕೊನೆಹಾಕುವ ಸಾಮರ್ಥ್ಯವುಳ್ಳ ವಿಭಾಗ(5)
2. ಅಸಮಾನತೆ, ಶೋಷಣೆಯನ್ನು ತೊಡೆದು ಹಾಕಲು ಇದು ಅಗತ್ಯ(5)
4. ಶೋಷಣೆ ಮಾಡುವ ವರ್ಗ ಇದಾಗಿರುತ್ತದೆ (4)
6. ಎಲ್ಲಾ ಧರ್ಮಗಳಿಗಿಂತ ಶ್ರೇಷ್ಠವಾದುದು (6)
8. ಇದು ಬುಡಕಟ್ಟು ಜನರ ಒಂದು ಐತಿಹಾಸಿಕ ಸಂಘರ್ಷ (5)
12. ಎಲ್ಲರಿಗೂ ಸಮಪಾಲನ್ನು ಪ್ರತಿಪಾದಿಸುವ ಸಿದ್ಧಾಂತ (4)
14. ಬಂಡವಾಳ ಶಾಹಿಗಳ ತಿಜೋರಿಯನ್ನು ಬಲಪಡಿಸುವಂತದ್ದು - ಶೋಷಣೆಯ ಮೂಲ

ಮೇಲಿಂದ ಕೆಳಕ್ಕೆ

1. ದುಡಿಮೆಗಾರರ ಕೈಗೆ ಹೋರಾಟದ ಪ್ರಬಲ ಸಾಧನ ನೀಡಿದ ಮಹಾನ್ ನಾಯಕ (4)
3. ಫ್ರೆಡರಿಕ್ ಎಂಗೆಲ್ಸ್‌ರ ಪ್ರಮುಖ ಕೃತಿಗಳಲ್ಲಿ ಒಂದು (7)
2. ಮಹಿಳೆಯ ಧ್ವನಿ (5)
5. ಬಂಡವಾಳ ಶಾಹಿ ವ್ಯವಸ್ಥೆ ಜನರಿಗೆ ಕೊಡುವುದು ಇದನ್ನು ಮಾತ್ರ(3)
7. ದೇಶಗಳು ರಾಜಕೀಯವಾಗಿ ಸ್ವತಂತ್ರವಾದರೂ ಅವುಗಳನ್ನು ಹಿಂಡಿ ಹೀರುವ ಕರಾಳ ವ್ಯವಸ್ಥೆ (8)
9. ಕೋಮುವಾದಿಗಳಿಂದ ಇದನ್ನು ರಕ್ಷಿಸಲು ಪಣ ತೊಡಬೇಕು (6)
10. ಸಾಹಿತ್ಯದ ಒಂದು ಪಂಥ (4)
11. ವ್ಯವಸ್ಥೆಯ ವಿರುದ್ಧ ಸಿಡಿದೆದ್ದವ (5)
13. ಬಹುಬೇಗ ಬಾಳುವುದು(3)



ಕೇರಳ ಪ್ರದೇಶ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿ, ಅಧ್ಯಕ್ಷನಾಗಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯನಾಗಿ ಹಲವು ಬಾರಿ ಜೈಲುವಾಸ ಕಾಣಬೇಕಾಗಿ ಬಂದ ಪ್ರಮುಖ ಮುಖಂಡರೊಬ್ಬರು ಜೈಲಿನಲ್ಲಿಯೇ ಮೊದಲ ಸ್ವಾತಂತ್ರ್ಯ ದಿನಾಚರಣೆ ಮಾಡಬೇಕಾಯಿತು! ಬ್ರಿಟಿಶರಿಂದಾಗಿ ಅಲ್ಲ, ಕಾಂಗ್ರೆಸ್ಸಿಗರಿಂದಾಗಿಯೇ! ಈ ವಿಪರ್ಯಾಸ ಇಲ್ಲಿಗೇ ನಿಲ್ಲಲಿಲ್ಲ. ಅವರನ್ನು ಬ್ರಿಟಿಶ್ ಚಕ್ರವರ್ತಿಗೆದುರಾಗಿ ಜನತೆಯನ್ನು ಎತ್ತಿಕಟ್ಟಿದ ಆರೋಪದ ಮೇಲೆ ಸ್ವತಂತ್ರ ಭಾರತದಲ್ಲಿ ವಿಚಾರಣೆಗೆ ಗುರಿಪಡಿಸಲಾಯಿತು! ಆಗ ಸರಕಾರಿ ವಕೀಲರಾಗಿದ್ದವರು ಒಬ್ಬ ಕಾಂಗ್ರೆಸ್ಸಿಗರು! ಬಹುಶಃ ಕಳೆದ ಐವತ್ತು ವರ್ಷಗಳಲ್ಲಿ ಕ್ರಮೇಣ ನಮ್ಮ ಆಳುವ ವರ್ಗಗಳ ನಿಜಸ್ವರೂಪ ಪ್ರಕಟಗೊಂಡಿರುವ ಈಗಿನ ಸಂಧರ್ಭದಲ್ಲಿ ಇದು ಅಸಹಜವೆನಿಸಲಿಕ್ಕಿಲ್ಲ. ಆದರೆ ಆಗ ಈ ಕ್ರೂರ ಅನ್ಯಾಯದ ವಿರುದ್ಧ ಕೇರಳದಾದ್ಯಂತ ಪ್ರತಿಭಟನೆ ಸ್ಫೋಟಗೊಂಡಿತು. ಕೊನೆಗೆ ಅಕ್ಟೋಬರ್ ೧೨ ರಂದು ಈ ಮುಖಂಡರನ್ನು ಬಿಡುಗಡೆ ಮಾಡಲಾಯಿತು. ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರರೂ, ನಂತರ ಈ ಸ್ವಾತಂತ್ರ್ಯವನ್ನು ದುಡಿಯುವ ಜನಗಳಿಗೆ ಅರ್ಥಪೂರ್ಣವಾಗಿಸಲು ತಮ್ಮ ಹೋರಾಟವನ್ನು ಮತ್ತೆ ಮೂರು ದಶಕಗಳ ಕಾಲ ನಡೆಸಿದವರೂ ಆದ ಎ.ಕೆ.ಗೋಪಾಲನ್ ಅಥವಾ ಎ.ಕೆ.ಜಿ. ಯೇ ಆ ಮುಖಂಡರು. ಈ ಸಂದರ್ಭವನ್ನು ಅವರ ಮಾತುಗಳಲ್ಲೇ ಓದಿ. ಅವರ ಆತ್ಮಕಥನ 'ನನ್ನ ಜೀವನದ ಕಥೆ' ಯಿಂದ ಆಯ್ದ ಈ ಅಂಶಗಳನ್ನು ನಮ್ಮ ಓದುಗರಿಗಾಗಿ ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಸಂದರ್ಭದಲ್ಲಿ ಇಲ್ಲಿ ಪ್ರಕಟಿಸುತ್ತಿದ್ದೇವೆ. ನಂತರ ಸ್ವಾತಂತ್ರ್ಯದ ಬೆಳ್ಳಿಹಬ್ಬ ಆಚರಿಸುವಾಗಲೂ ಅವರನ್ನು ಕಾಂಗ್ರೆಸ್ ಸರಕಾರ ಜೈಲಿಗೆ ಹಾಕಿತ್ತು. ಸ್ವರ್ಣ ಜಯಂತಿ ಆಚರಿಸುವ ಸಂದರ್ಭದಲ್ಲಿ ಅವರೀಗ ನಮ್ಮೊಡನಿಲ್ಲ

"ಸ್ವಾತಂತ್ರ್ಯ ದಿನದಂದೂ ಕೈದಿಯಾಗಿಯೇ ಉಳಿದೆ"

1947ರ ಸ್ವಾತಂತ್ರ್ಯ ದಿನಕ್ಕೆ ಸಂಬಂಧಿಸಿದಂತೆ ಮದ್ರಾಸ್ ಸರಕಾರವು ಎಲ್ಲ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಿತು. ಇ.ಎಂ.ಎಸ್. ಮತ್ತಿರರು 14ನೇ ತಾರೀಕಿನಂದೇ ಕಲ್ಲಿಕೋಟೆಗೆ ತಲುಪಿದರು. ನನ್ನನ್ನು ಆಗಸ್ಟ್ 15 ರಂದು ಬಿಡುಗಡೆ ಮಾಡಲಾಗುವುದೆಂದು ಪ್ರಕಟಣೆಯಲ್ಲಿ ಪ್ರತ್ಯೇಕವಾಗಿ ನಮೂದಿಸಲಾಗಿತ್ತು. ಆದರೆ ನನ್ನನ್ನು ಮಾತ್ರ ಬಿಡಲಿಲ್ಲ. ಉಳಿದವರೆಲ್ಲರನ್ನೂ ಬಿಡಲಾಯಿತು.

ಎಲ್ಲ ಪಕ್ಷಗಳೂ ಸಂಯುಕ್ತವಾಗಿ ಆಗಸ್ಟ್ 15 ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸಿದವು. ದೇಶಾದ್ಯಂತ ಅಭೂತಪೂರ್ವವಾದ ಉತ್ಸಾಹವೂ, ಆನಂದವೂ ವ್ಯಕ್ತವಾದವು. 1947 ಆಗಸ್ಟ್ 14 ರಂದು ನಾನು ಕಣ್ಣಾನೂರಿನ ದೊಡ್ಡ ಜೈಲಿನಲ್ಲಿ ಏಕಾಂತವನ್ನು ಅನುಭವಿಸುತ್ತಿದ್ದೆ. ಇತರ ಸ್ಥಾನಬದ್ಧತಾ ಕೈದಿಗಳೆಲ್ಲರೂ ಬಿಡುಗಡೆಗೊಂಡು ಹೊರಟು ಹೋಗಿದ್ದರು. ಆದರೆ ಕಾವುಂಪಾಯಿ ಮತ್ತು ಕರಿವೆಳ್ಳೂರು ಮೊಕದ್ದಮೆಗಳಲ್ಲಿ ವಿಚಾರಣೆ ಮುಗಿದ ಮತ್ತು ವಿಚಾರಣೆಗಾಗಿ ಬಾಕಿ ಇದ್ದ ಹಲವಾರು ಸಂಗಾತಿಗಳು ಅಲ್ಲಿದ್ದರು. ರಾತ್ರಿಯೆಲ್ಲ ನನಗೆ ನಿದ್ದೆ ಬರಲಿಲ್ಲ. ನಾಲ್ದೆಸೆಗಳಿಂದಲೂ ಜಯಕಾರಗಳು ಮೊಳಗುತ್ತಿದ್ದವು. ಮಹಾತ್ಮಾ ಗಾಂಧೀಜಿ ಕೀ ಜೈ, ಭಾರತ ಮಾತಾ ಕೀ ಜೈ ಮೊದಲಾದ ಘೋಷಣೆಗಳು ಜೈಲಿನ ಗೋಡೆಗಳ ಮೂಲಕ ಪ್ರತಿಧ್ವನಿಸುತ್ತಿದ್ದವು. ನಾಡಿಗೆ ನಾಡೇ ಸೂರ್ಯೋದಯದ ನಂತರದ ವಿಜಯೋತ್ಸವಕ್ಕಾಗಿ ಕಾದಿತ್ತು. ಅನೇಕ ವರ್ಷಗಳಿಂದ ಇದಕ್ಕಾಗಿ ಹೋರಾಡಿ ತಮ್ಮ ಸರ್ವಸ್ವವನ್ನೂ ಕಳಕೊಂಡ ಎಷ್ಟೋ ಜನರು ಈ ದಿನಕ್ಕಾಗಿ ಕಾದಿದ್ದರು. ಸಂತೋಷವೋ ದುಃಖವೋ ಏಕಕಾಲಕ್ಕೆ ನನ್ನನ್ನು ಆವರಿಸಿದವು. ಯಾವ ಉದ್ದೇಶಕ್ಕಾಗಿ ನನ್ನ ಯೌವನವನ್ನೆಲ್ಲಾ ಸವೆದು ಇಂದು ಕೂಡ ಜೈಲಿನಲ್ಲಿ ಮಲಗಿದ್ದೆನೋ ಆ ಉದ್ದೇಶವು ಈಡೇರಿದ್ದಕ್ಕೆ ನನಗೆ ಸಂತೋಷವಾಯಿತು. ಆದರೆ ನಾನು ಇನ್ನೂ ಕೈದಿಯಾಗಿಯೇ ಇರುವಂತಾಗಿದೆ; ಬ್ರಿಟಿಷರಿಂದಲ್ಲ! 1927 ರಿಂದೀಚಿನ ಘಟನಾವಳಿಗಳು ನನ್ನ ಕಣ್ಣ ಮುಂದೆ ತೇಲಿಹೋದವು. ಕೇರಳದ ಕಾಂಗ್ರೆಸ್ ಚಳುವಳಿಯಲ್ಲಿ ನಾನು ವಹಿಸಿದ ಪಾತ್ರವನ್ನು ನೆನೆದು ಹೆಮ್ಮೆ ಪಟ್ಟೆ. ಕೇರಳ ಪ್ರದೇಶ ಕಾಂಗ್ರೆಸಿನ ಕಾರ್ಯದರ್ಶಿಯೂ ಅಧ್ಯಕ್ಷನೂ ದೀರ್ಘಕಾಲದ ತನಕ ಎ.ಐ.ಸಿ.ಸಿ. ಸದಸ್ಯನೂ ಆಗಿದ್ದ ವ್ಯಕ್ತಿಯೊಬ್ಬನು ಆಗಸ್ಟ್ 15 ನ್ನು ಆಚರಿಸುತ್ತಿದ್ದುದು ಜೈಲಿನೊಳಗೆ! ಈ ಯೋಚನೆಗಳೊಂದಿಗೆ ನಾನು ಆ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದೆ.

ಯಾರೊಡನೆ ಮಾತಾಡಲಿ? ನಿದ್ರೆ ಮಾಡದೆ ನನ್ನನ್ನು ಕಾವಲು ಕಾಯುತ್ತಿದ್ದ ವಾರ್ಡನರೇ ಆ ವೇಳೆ ನನಗಿದ್ದ ಒಡನಾಡಿಗಳಾಗಿದ್ದರು. ನಾನು ಅವರೊಂದಿಗೆ ಮಾತನಾಡಿದೆ. ಆಗಸ್ಟ್ 15 ರ ಮಹತ್ವವನ್ನು ವಿವರಿಸಿದೆ. ನಮ್ಮ ಸ್ವಂತ ಸರಕಾರ ಅಸ್ತಿತ್ವಕ್ಕೆ ಬಂದಿದೆ, ತಮಗೆ ಇನ್ನು ಮುಂದೆ ಹೆಚ್ಚು ಸಂಬಳ ಸಿಗಬಹುದೆಂದು ಅವರು ನಂಬಿದ್ದರು. ಪಾಪ ಅವರೂ ತಪ್ಪುದಾರಿಗೆಳೆಯಲ್ಪಟ್ಟಿದ್ದರು.

ಜೈಲಿನಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಬಯಸಿದೆ. ಅದಕ್ಕಾಗಿ ಮೊದಲೇ ಜೋಪಾನವಾಗಿಟ್ಟಿದ್ದ ರಾಷ್ಟ್ರಧ್ವಜವನ್ನು ಎತ್ತಿಹಿಡಿದು, ಆಗಸ್ಟ್ 15ರ ಮುಂಜಾನೆ ನಾನು ಜೈಲಿನ ಕೋಣೆಯಿಂದ ಹೊರಬಂದೆ. ಕೆಲವು ಕೈದಿಗಳು ನನ್ನನ್ನು ಹಿಂಬಾಲಿಸಿದರು. ಮೂರನೇ ಬ್ಲಾಕಿನ ಕೈದಿಗಳೆಲ್ಲಾ ಹೊರಬಂದರು. ಅಲ್ಲಿ ನಾನು ಧ್ವಜಾರೋಹಣ ಮಾಡಿದೆ. ನಾಲ್ಕೈದು ನಿಮಿಷ ಭಾಷಣವನ್ನೂ ಮಾಡಿದೆ. ಜೈಲು ಅಧಿಕಾರಿಗಳಿಗೆ ಇದು ಇಷ್ಟವಾಗಲ್ಲಿಲ್ಲ. ಆದರೆ ಆ ದಿವಸ ಲಾಠೀಚಾರ್ಜು ಮಾಡಲು ಅವರಿಗೆ ಮನಸ್ಸಾಗಲಿಲ್ಲ. ಬ್ರಿಟಿಷ್ ಚಕ್ರವರ್ತಿಗಿದಿರಾಗಿ ಜನತೆಯನ್ನು ಎತ್ತಿ ಕಟ್ಟಿದ್ದೆನೆಂಬ ಆರೋಪದ ಮೇಲೆ ಆಗಸ್ಟ್ 15 ರ ನಂತರ ನನ್ನನ್ನು ಕಲ್ಲಿಕೋಟೆಯ ಅಡಿಶನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಯಿತು. ಆಗಸ್ಟ್ 15 ರಂದು ದೇಶವು ಸ್ವತಂತ್ರವಾಗಿತ್ತು ಇದಾದನಂತರ, ಬ್ರಿಟಿಶರಿಂದ ರೂಪಿಸಲಾದ ಕ್ರಿಮಿನಲ್ ಕಾನೂನಿನ 124 (ಎ) ಎಂಬ ವಿಧಿಗನುಸಾರವಾಗಿ, ರಾಜದ್ರೋಹದ ಆರೋಪದ ಮೇಲೆ ನನ್ನನ್ನು ಮ್ಯಾಜಿಸ್ಟ್ರೇಟರ ಬಳಿಗೆ ಕರೆದುಕೊಂಡು ಹೋಗುತ್ತಿದ್ದರು. ಜನತೆಗೆ ವಿಸ್ಮಯವಾಯಿತು. ಇದು ಯಾವ ರೀತಿಯ ಸರಕಾರ?

ನ್ಯಾಯಾಲಯದಲ್ಲಿ ನಾನು ಈ ಕೆಳಗಿನ ಹೇಳಿಕೆ ನೀಡಿದೆ "ಬ್ರಿಟಿಷ್ ಇಂಡಿಯಾದ ಚಕ್ರವರ್ತಿಗೆ ಇದಿರಾಗಿ ದ್ವೇಷವನ್ನು ಬೆಳೆಸಿದ್ದೇನೆನ್ನಲು ನಾನು ಹೆಮ್ಮೆ ಪಡುತ್ತೇನೆ. ಈ ದೇಶದ ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳೂ ಸ್ವಾತಂತ್ರ್ಯ ಹೋರಾಟವು ಆರಂಭವಾದಂದಿನಿಂದಲೂ ಅದರ ಮುಖಂಡರಾಗಿರುವ ನೆಹರು, ಮಹಾತ್ಮಾ ಗಾಂಧಿ ಮೊದಲಾದವರು, ಚಕ್ರವರ್ತಿಯ ಸರಕಾರಕ್ಕಿದಿರಾಗಿ ದ್ವೇಷವನ್ನು ಬೆಳೆಸಲು ಶ್ರಮವಹಿಸಿದ್ದಾರೆ, ಇದೇ ಕಾರಣಕ್ಕಾಗಿಯೇ ಹಿಂದೆ ಮಹಾತ್ಮಾ ಗಾಂಧಿಯ ವಿರುದ್ಧವೂ ಭಾರತೀಯ ದಂಡ ಸಂಹಿತೆಯ 124 (ಎ) ನಿಬಂಧನೆಯ ಪ್ರಕಾರ ವಿಚಾರಣೆ ನಡೆದಿದೆ. ಇವೆಲ್ಲದರ ಫಲವಾಗಿ, ಚಕ್ರವರ್ತಿಯು ಸರಕಾರವೂ ಬ್ರಿಟಿಷ್ ಇಂಡಿಯವೂ ಇಂದು ಕೊನೆಗೊಂಡಿದೆ. ನನ್ನೊಂದಿಗೆ ಇವೇ ಅಪರಾಧಗಳಲ್ಲಿ ಭಾಗಿಗಳಾಗಿದ್ದ ಒಡನಾಡಿಗಳಲ್ಲಿ ಹಲವರು ಇಂದು ಮಂತ್ರಿಗಳೂ, ರಾಜ್ಯಪಾಲರೂ ಆಗಿರುತ್ತಾರೆ. ಆಗಸ್ಟ್ 15 ರಂದು ಸ್ವಾತಂತ್ರ್ಯ ಗಳಿಸಿದ್ದೇವೆಂದು ಪರಿಗಣಿತವಾಗಿರುವ ಸಂದರ್ಭದಲ್ಲಿ ನನ್ನನ್ನು ಇಲ್ಲಿಗೆ ವಿಚಾರಣೆಗೆ ತಂದಿರುವುದು ವಿಚಿತ್ರ. ನನಗಿದರಿಂದ ಖೇದವಾಗಿದೆ" ಕಾಂಗ್ರೆಸಿಗನಾದ ಕೆ.ಪಿ.ರಾಮಮೆನನ್ ಸರಕಾರಿ ವಕೀಲರಾಗಿದ್ದರು!

ಬ್ರಿಟಿಶರು ರಾಜಕೀಯ ಕೈದಿಗಳೆಂದು ಪರಿಗಣಿಸಿದ್ದ ಸ್ವಾತಂತ್ರ್ಯ ಹೋರಾಟಗಾರರನ್ನು ಕಾಂಗ್ರೆಸ್ ಸರಕಾರ ಕ್ರಿಮಿನಲ್ ಕೈದಿಗಳೆಂದು ಪರಿಗಣಿಸಿತು. ಇದನ್ನು ಪ್ರತಿಭಟಿಸಿ ಕಣ್ಣಾನೂರು ಜೈಲಿನ 808 ಕೈದಿಗಳನ್ನು ರಾಜಕೀಯ ಕೈದಿಗಳೆಂದು ಪರಿಗಣಿಸಬೇಕೆಂದು ಎ.ಕೆ.ಜಿ. ಸರಕಾರಕ್ಕೆ ಪತ್ರ ಬರೆದರು -"1930 ರಿಂದ 1945 ರ ವರೆಗೆ ವಿದೇಶಿ ಸರಕಾರದ ದೃಷ್ಟಿಯಲ್ಲಿ ನಾನೊಬ್ಬ ರಾಜಕೀಯ ಕೈದಿಯಾಗಿದ್ದೆ. ಇಂದಿನ ಜನತಾ ಸರಕಾರದಡಿಯಲ್ಲಿ ನಾನು ಒಬ್ಬ ಕ್ರಿಮಿನಲ್ ಕೈದಿ. ನಾನೊಬ್ಬ ಕಮ್ಯುನಿಸ್ಟ ನಾಗಿರುವುದೇ ಇದಕ್ಕಿರುವ ಏಕೈಕ ಕಾರಣ ಎಂದು ನನಗೆ ಸ್ಪಷ್ಟವಾಗುತ್ತಿದೆ. ಇತರ ಕಮ್ಯುನಿಸ್ಟರಿಂದ ನನ್ನನ್ನು ಬೇರ್ಪಡಿಸುವ ಉದ್ದೇಶದಿಂದ ಮಾತ್ರವೇ ನನಗೆ 'ಎ' ಕ್ಲಾಸ್ ಸೌಲಭ್ಯವನ್ನು ನೀಡಲಾಗಿದೆ. ನಾನು ಇದನ್ನು ತಿರಸ್ಕರಿಸುತ್ತೇನೆ" ಎಂದು ಸಾರಿದರು. ಎಲ್ಲ ಕೈದಿಗಳ ಉಪವಾಸ ಮುಷ್ಕರ, ಅಡಗರ- ಕಣ್ಣಾನೂರುಗಳಲ್ಲಿ ಸಾರ್ವತ್ರಿಕ ಮುಷ್ಕರ, ಲಾಠಿಚಾರ್ಜ್, ಬಂಧನಗಳ ನಂತರ ಅಕ್ಟೋಬರ್ 12 ರಂದು ಎ.ಕೆ.ಜಿ.ಯವರನ್ನು ಬಿಡುಗಡೆ ಮಾಡಲಾಯಿತು.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು